# ಕರ್ನಾಟಕ ವಿಧಾನ ಪರಿಷತ್ತು

**5ನೇ ಮಾರ್ಚ್ 2021**
**ಶುಕ್ರವಾರ**

## ವಿಷಯಾನುಕ್ರಮಣಿಕೆ

**01. "ಒಂದು ರಾಷ್ಟ್ರ ಒಂದು ಚುನಾವಣೆ" ಎಂಬ ವಿಷಯವನ್ನು ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಬಾರದೆಂದು ಕಾಂಗ್ರೆಸ್ ಪಕ್ಷದ ಸದಸ್ಯರುಗಳಿಂದ ಪ್ರತಿಭಟನೆ ಹಾಗೂ ಧರಣಿ**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**02. ಸದನದಲ್ಲಿ ಸಂಬಂಧಪಟ್ಟ ಸಚಿವರುಗಳ ಹಾಗೂ ಅಧಿಕಾರಿಗಳ ಗೈರುಹಾಜರಿ ಬಗ್ಗೆ**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**03. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**768 – ರಾಜ್ಯದ ಮಹಿಳಾ ಸ್ವ-ಸಹಾಯ ಗುಂಪುಗಳ ಸಬಲೀಕರಣ ಬಗ್ಗೆ.**

– ಶ್ರೀ ಪಿ.ಆರ್.ರಮೇಶ್
– ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು)

**829 – ವಿಜಯಪುರ ಜಿಲ್ಲೆಯ ಅಲಮೇಲದಲ್ಲಿ ಹೊಸ ತೋಟಗಾರಿಕಾ ಕಾಲೇಜು ಪ್ರಾರಂಭಿಸುವ ಬಗ್ಗೆ.**

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಶ್ರೀ ಅರುಣ ಶಹಾಪುರರವರ ಪರವಾಗಿ)
– ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**774 – ವಸತಿ ಶಾಲೆಗಳಲ್ಲಿನ ಮೂಲಭೂತ ಸೌಲಭ್ಯಗಳ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ (ಶ್ರೀ ಮರಿತಿಬ್ಬೇಗೌಡರ ಪರವಾಗಿ)
– ಶ್ರೀ ಶ್ರೀಮಂತ ಬಾಳಸಾಹೇಬ ಪಾಟೀಲ್(ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

**769 – ಕಿತ್ತಳೆ ಬೆಳೆಯ ಪುನಃಶ್ಚೇತನ ಮಾಡುವ ಬಗ್ಗೆ**
- ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
- ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**720 – ಬೀದರ್ ಜಿಲ್ಲೆಯ ಅಂಗನವಾಡಿ ಕೇಂದ್ರಗಳ ಬಗ್ಗೆ.**
- ಶ್ರೀ ವಿಜಯ ಸಿಂಗ್
- ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು)

**612 – ಕರ್ನಾಟಕ ರಾಜ್ಯ ರೇಷ್ಮೋದ್ಯಮ ಆಯುಕ್ತರ ಕಛೇರಿಯಲ್ಲಿ 19.89 ಕೋಟಿ ರೂ.ಗಳ ಅವ್ಯವಹಾರದ ಬಗ್ಗೆ.**
- ಶ್ರೀ ಎನ್.ರವಿಕುಮಾರ್
- ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

**761 – ಧಾರವಾಡದಿಂದ ಬೆಳಗಾವಿಗೆ ಹೊಸ ರೈಲು ಮಾರ್ಗದ ರಚನೆ ಬಗ್ಗೆ.**
- ಶ್ರೀಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮೂಲಸೌಲಭ್ಯ ಅಭಿವೃದ್ಧಿ, ವಕ್ಫ್ ಮತ್ತು ಹಜ್ ಸಚಿವರ ಪರವಾಗಿ)

**(ಪ್ರಶ್ನೆಯನ್ನು ತಡೆಹಿಡಿಯಲಾಯಿತು)**

**635 – ರಾಜ್ಯದಲ್ಲಿ ಮ್ಯಾಕ್ಸಿಕ್ಯಾಬ್ ಅಥವಾ ಇತರೆ ವಾಹನಗಳು ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಪ್ಯಾಸೆಂಜರ್ ತುಂಬಿಕೊಂಡು ಪ್ರಯಾಣ ಮಾಡುತ್ತಿರುವ ಬಗ್ಗೆ.**
- ಶ್ರೀ ಆರ್.ಪ್ರಸನ್ನ ಕುಮಾರ್
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ)

**762 – ವಿಶ್ವವಿದ್ಯಾಲಯಗಳಲ್ಲಿನ ಭೋಧಕ/ಭೋಧಕೇತರ ಸಿಬ್ಬಂದಿಗಳ ಮಾಹಿತಿ ಬಗ್ಗೆ.**
- ಶ್ರೀ ಎಸ್.ವ್ವಿ.ಸಂಕನೂರ
- ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)

**772 – ಬಸ್ ನಿಲ್ದಾಣಗಳಲ್ಲಿ ಮಹಿಳಾ ವಿಶ್ರಾಂತಿ ಗೃಹಗಳ ನಿರ್ಮಾಣದ ಬಗ್ಗೆ.**
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ)

## ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

**04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**

**ಅ) ಗ್ರಂಥಾಲಯದ ಮೇಲ್ವಿಚಾರಕರ ಕನಿಷ್ಠ ವೇತನ ರೂ.13,200 ಗಳಿಗೆ ನಿಗದಿಪಡಿಸಿ, ಗ್ರಂಥಾಲಯ ಅವಧಿ ಕಡಿತ ಮಾಡಿರುವ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿನ ಖಾಸಗಿ ಬಿ.ಇಡಿ. ಕಾಲೇಜುಗಳಲ್ಲಿ ಸೀಟು ಮಾರಾಟ ದಂಧೆ ನಡೆಸುತ್ತಿರುವ ಬಗ್ಗೆ.**

– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಪರಿಶುದ್ಧವಾದ ಮಲಪ್ರಭೆ ನದಿ ನೀರಿಗೆ ಖಾನಾಪುರ ಪಟ್ಟಣದ ಚರಂಡಿ ನೀರು ಮತ್ತು ತ್ಯಾಜ್ಯಗಳು ಸೇರಿ ಕಲುಷಿತಗೊಂಡಿರುವ ಬಗ್ಗೆ.**

– ಶ್ರೀ ಹಣಮಂತ ರುದ್ರಪ್ಪ ನಿರಾಣಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**05. ಅರ್ಜಿಯನ್ನೊಪ್ಪಿಸುವುದು**

**06. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

**ವಿಷಯ:– 1995 ರಿಂದ 2005ನೇ ಸಾಲಿನವರೆಗೆ ಪ್ರಾರಂಭವಾಗಿರುವ ಕನ್ನಡ ಮಾಧ್ಯಮ ಶಾಲಾ/ಕಾಲೇಜುಗಳ ಬೋಧಕ ಮತ್ತು ಬೋಧಕೇತರರಿಗೆ ವೇತನಾನುದಾನ ನೀಡಬೇಕೆಂದು ಹಾಗೂ ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವ ಸೌಲಭ್ಯಗಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೂ ವಿಸ್ತರಿಸುವ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಶಶಿಲ್ ಜಿ.ನಮೋಶಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**07. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ**

**ವಿಷಯ:– 2006ರ ನಂತರ ನೇಮಕಗೊಂಡಿರುವ ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಕಡ್ಡಾಯವಾಗಿ ಜಾರಿಗೊಳಿಸುವ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಆಯನೂರು ಮಂಜುನಾಥ್
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಎಸ್.ವ್ಹಿ.ಸಂಕನೂರ

- ಡಾ:ತಳವಾರ ಸಾಬಣ್ಣ
- ಡಾ:ವೈ.ಎ.ನಾರಾಯಣಸ್ವಾಮಿ
- ಶ್ರೀ ನಿರಾಣಿ ಹಣಮಂತ ರುದ್ರಪ್ಪ
- ಶ್ರೀ ಶಶಿಲ್ ಜಿ.ನಮೋಶಿ
- ಶ್ರೀ ಚಿದಾನಂದಗೌಡ
- ಶ್ರೀ ಅ.ದೇವೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**08. ಖಾಸಗಿ ಸದಸ್ಯರ ನಿರ್ಣಯ**

**ವಿಷಯ:- ದೇಸೀಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಬಗ್ಗೆ.**

- ಶ್ರೀ ಯು.ಬಿ.ವೆಂಕಟೇಶ್

<><><>

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 5ನೇ ಮಾರ್ಚ್ 2021**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11.00 ಗಂಟೆಗೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**(293) 05–03–2021 (11–00) ಕೆಜಿ–ಜಿಆರ್**

**(ಸದನ ಪ್ರಾರಂಭವಾಗುತ್ತಿದ್ದಂತೆಯೇ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿ ಧರಣಿಯನ್ನು ಮುಂದುವರಿಸಿದರು.)**

**ಸಭಾಪತಿಯವರು:–** ಈಗ ಪ್ರಶ್ನೋತ್ತರಗಳು.

**01. "ಒಂದು ರಾಷ್ಟ್ರ ಒಂದು ಚುನಾವಣೆ" ಎಂಬ ವಿಷಯವನ್ನು ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಬಾರದೆಂದು ಕಾಂಗ್ರೆಸ್ ಪಕ್ಷದ ಸದಸ್ಯರುಗಳಿಂದ ಪ್ರತಿಭಟನೆ ಹಾಗೂ ಧರಣಿ**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, House is not in order.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ ಏಕೆ?

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಮ್ಮ ಸದಸ್ಯರು ಬಾವಿಯಲ್ಲಿದ್ದರು.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ಮತ್ತೆ ಅವರು ಬಾವಿಯಿಂದ ಎದ್ದು ಏಕೆ ಹೋದರು?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ನಿನ್ನೆ ದಿವಸ "ಒಂದು ರಾಷ್ಟ್ರ ಒಂದು ಚುನಾವಣೆ" ವಿಷಯದ ಮೇಲೆ ಚರ್ಚೆಯನ್ನು ತೆಗೆದುಕೊಂಡಿರಿ. ನಾವು ಅದರಲ್ಲಿ ಭಾಗಿಯಾಗುವುದಿಲ್ಲ ಮತ್ತು ಚರ್ಚೆ ಮಾಡುವುದಿಲ್ಲವೆಂದು ಹೇಳಿದ್ದೆವು. ಅದನ್ನು protest ಮಾಡಿ ನಮ್ಮ ಸದಸ್ಯರು ಬಾವಿಯಲ್ಲಿ ಧರಣಿ ಮಾಡಿದ್ದರು. ನಮ್ಮ ಸದಸ್ಯರು ರಾತ್ರಿ ಪೂರ್ತಿ ಬಾವಿಯಲ್ಲಿ ಇದ್ದರು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾವು ಅದನ್ನು Agenda ದಲ್ಲಿ ಹಾಕಿಕೊಂಡಿಲ್ಲ. ಆ ವಿಷಯವನ್ನು ತೆಗೆದುಕೊಂಡಿಲ್ಲ. ದಯಮಾಡಿ ಬಾವಿಯಿಂದ ಹೊರಗೆ ಬಂದು ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಿ ಎಂದು ನಿಮಗೆ ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಅದನ್ನು Agenda ದಲ್ಲಿ ಹಾಕಿಕೊಂಡಿಲ್ಲವೆಂದರೆ, it is a good gesture from your Chair.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು. ತಮ್ಮ ಮಾತಿಗೆ ಗೌರವ ಕೊಡಬೇಕಲ್ಲವೇ!

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಅದನ್ನು Agenda ದಲ್ಲಿ ಹಾಕಿಕೊಂಡಿಲ್ಲ ಮತ್ತು ಆ ವಿಷಯ ಚರ್ಚೆಗೆ ಇಲ್ಲವೆಂದರೆ, ನಾನು ನಮ್ಮ ಸದಸ್ಯರಿಗೆ ಅವರವರ respective place ಗೆ ಬರುವಂತೆ ಮನವಿ ಮಾಡಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹಿಂತಿರುಗಿದರು )**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು. ಧನ್ಯವಾದಗಳು. ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ. ಮೊದಲಿಗೆ ಮಾನ್ಯ ಸದಸ್ಯರಾದ ಅರವಿಂದ ಕುಮಾರ್ ಅರಳಿರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಾವಿಯಲ್ಲಿದ್ದರು. ಹಾಗಾಗಿ, ಅವರು ಅವರ ಸ್ಥಾನಕ್ಕೆ ಹೋಗುವುದಕ್ಕೆ ಸ್ವಲ್ಪ ಟೈಮ್ ಹಿಡಿಯುತ್ತದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಆದರೆ, ನಾನು ಪ್ರಶ್ನೆ ಸಂಖ್ಯೆ 721 ಅನ್ನು ಕೇಳಿದ್ದೇನೆ. ಆದರೆ, ಮಾನ್ಯ ಸಚಿವರಿಂದ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರವನ್ನು ಕೊಡಿ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:-** ಮಾನ್ಯ ಸಭಾಪತಿಯವರೇ.,..

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮೊದಲು ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಲ್ಲವೇ?

## 02. ಸದನದಲ್ಲಿ ಸಂಬಂಧಪಟ್ಟ ಸಚಿವರುಗಳ ಹಾಗೂ ಅಧಿಕಾರಿಗಳ ಗೈರುಹಾಜರಿ ಬಗ್ಗೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮೂರು ಜನ ಸಚಿವರು ಇರಬೇಕು. ಈಗ ಇಬ್ಬರು ಇದ್ದಾರೆ. ಇವತ್ತಿನ ಲಿಸ್ಟ್‌ನ ಪ್ರಕಾರ, ಅಧಿಕಾರಿಗಳು ಹಾಜರಿಲ್ಲ. ಇವತ್ತು ಯಾವ ಯಾವ ಅಧಿಕಾರಿಗಳು ಮತ್ತು ಅದೇರೀತಿ ಯಾವ ಯಾವ ಸಚಿವರು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕು ಎನ್ನುವ ಬಗ್ಗೆ ಪ್ರತಿಯನ್ನು ಕೊಡಿ.

**ಸಭಾಪತಿಯವರು:–** ಮಾನ್ಯ ಸರ್ಕಾರದ ಮುಖ್ಯ ಸಚೇತಕರವರೇ, ನಿಮಗೆ ನಿನ್ನೆ ದಿವಸ ನಾನು ಸದನವನ್ನು ಸಮಯಕ್ಕೆ ಸರಿಯಾಗಿ ಒಬ್ಬರಿರಲಿ ಅಥವಾ ಇಬ್ಬರಿರಲಿ ನಡೆಸುತ್ತೇನೆಂದು ಹೇಳಿದ್ದೆ ಅಲ್ಲವೇ!

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗ ಬರುತ್ತಾರೆ.

**ಸಭಾಪತಿಯವರು:–** ಮಾನ್ಯ ಸರ್ಕಾರಿ ಮುಖ್ಯ ಸಚೇತಕರವರೇ, ನಾನು ಹೇಳುವುದನ್ನು ಕೇಳಿ. ನಿನ್ನೆ ದಿವಸ ಅಧಿಕಾರಿಗಳು ಯಾರು ಇರಲಿಲ್ಲ. ಅದಕ್ಕೆ ಅವರ ಬಗ್ಗೆ ಮಾಹಿತಿ ಕೊಡಿ ಎಂದು ಕೇಳಿದ್ದೆ. ಆದರೆ, ತಾವು ಕೊಟ್ಟಿಲ್ಲ. ಅದು ನಿಮ್ಮ ಜವಾಬ್ದಾರಿ. ಮಾನ್ಯ ಸಚಿವರುಗಳು ಮತ್ತು ಅಧಿಕಾರಿಗಳು ಕಡ್ಡಾಯವಾಗಿ ಇರಬೇಕು. ದಯವಿಟ್ಟು, ಇದು ಮತ್ತೆ repeat ಆಗಬಾರದು. ಮಾನ್ಯ ಸಚಿವರೇ, ತಾವು ಇವತ್ತು ಕಾಲಾವಕಾಶ ಕೇಳಿದರೆ, ಕಾಲಾವಕಾಶವನ್ನು ಯಾವ ರೀತಿ ಕೊಡುವುದಕ್ಕೆ ಆಗುತ್ತದೆ ನೀವೇ ಹೇಳಿ? ಮಾನ್ಯ ಸದಸ್ಯರು ನಿಮ್ಮ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಿರುತ್ತಾರೆ. ಅದಕ್ಕೆ ತಾವು ಉತ್ತರ ಕೊಡಲಿಲ್ಲವೆಂದರೆ ಹೇಗೆ?

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಜಿಲ್ಲೆಗೆ ಇದೆಯೋ ಅಥವಾ ರಾಜ್ಯಕ್ಕೆ ಇದೆಯೋ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಹಾಗಾಗಿ, ಅದಕ್ಕೆ ಉತ್ತರವನ್ನು ಮುಂದಿನ ವಾರದಲ್ಲಿ ತರಿಸಿ ಕೊಡುತ್ತೇನೆ. ಇಲ್ಲಿ ಜಿಲ್ಲೆಗೆ ಎಂದು ಇದೆ. ಆದರೆ, ನಮ್ಮ ಕಛೇರಿಗೆ ಬಂದಿರುವುದರಲ್ಲಿ ಜಿಲ್ಲೆ ಎಂದು ಇರುವುದಿಲ್ಲ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ನಾನೇ ಮಾನ್ಯ ಸಚಿವರ ಕಛೇರಿಗೆ ಕಳುಹಿಸಿದ್ದೇನೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ಬರುವ ಶುಕ್ರವಾರದಂದು ಉತ್ತರ ಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮುಂದಿನ ಮಂಗಳವಾರದಂದು ಕೊಡಿ. ನಾನು ಅದನ್ನು ನೋಡಿ Agenda ದಲ್ಲಿ ಸೇರಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಲಕ್ಷ್ಮಣ ಸಂಗಪ್ಪ ಸವದಿ, ಮಾನ್ಯ ಕೆ.ಎಸ್.ಈಶ್ವರಪ್ಪ, ಶ್ರೀ ಬಿ.ಸಿ.ಪಾಟೀಲ್, ಶ್ರೀ ಆನಂದ್‌ಸಿಂಗ್ , ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ, ಮಾನ್ಯ ಶ್ರೀಮಂತ ಬಾಳಸಾಹೇಬ್ ಪಾಟೀಲ್, ಶ್ರೀ ಆರ್.ಶಂಕರ್ ಇವರುಗಳು ಸದನದಲ್ಲಿ ಕಡ್ಡಾಯವಾಗಿ ಹಾಜರಿದ್ದು ಉತ್ತರಿಸಬೇಕೆಂದು ಇದೆ. ಇವರುಗಳ ಪೈಕಿ ಮಾನ್ಯ ಸಚಿವರಾದ ಬಿ.ಸಿ.ಪಾಟೀಲ್ ಮತ್ತು ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ ರವರು ಹಾಜರಿದ್ದಾರೆ. ಐದು ಜನ ಸಚಿವರು ಬಂದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳರವರು ಸದನದಲ್ಲಿ ಕಡ್ಡಾಯವಾಗಿ ಹಾಜರಾಗಬೇಕೆಂದು ಇದೆ. ಆದರೆ, ಅವರು ಬಂದಿಲ್ಲ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಕಡ್ಡಾಯವಾಗಿ ಹಾಜರು ಇರಬೇಕೆಂದು ಇದೆ. ಅವರು ಬಹಳ regular ಆಗಿ ಇರುತ್ತಾರೆ. ಅವರು ಇನ್ನೂ ಬಂದಿಲ್ಲ. ನನಗೆ ಅವರ ಬಗ್ಗೆ ಅಪಾರವಾದ ಗೌರವ ಇದೆ. ಮಾನ್ಯ ಸಚಿವರಾದ ಅರವಿಂದ ಲಿಂಬಾವಳಿಯವರು, ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ ಮತ್ತು ಡಾ॥ ಕೆ.ಸಿ.ನಾರಾಯಣಗೌಡರವರು ಒಟ್ಟು ಐದು ಜನ ಸಚಿವರು ಇರಬೇಕಾಗಿದೆ. ಇವರಲ್ಲಿ ಒಬ್ಬರೂ ಸಹ ಹಾಜರಿಲ್ಲ. ಮಾನ್ಯ ಸಭಾನಾಯಕರ ಬಗ್ಗೆ ನನಗೆ ಗೌರವ ಇದೆ. ಅದರ ಬಗ್ಗೆ ಎರಡು ಮಾತಿಲ್ಲ. ಇವತ್ತು ಏಕೋ ಏನೋ ಒಂದು ನಿಮಿಷ ತಡವಾಗಿ ಬಂದಿದ್ದಾರೆ. ಮಾನ್ಯ ಹೊಸ ಸಭಾಪತಿಯವರು 11 ಗಂಟೆಗೆ ಸದನ ಪ್ರಾರಂಭ ಮಾಡುತ್ತೇನೆಂದರೆ, ಅಷ್ಟೋತ್ತಿಗೆ ಪ್ರಾರಂಭ ಮಾಡುತ್ತಾರೆ. ಒಟ್ಟು 12 ಜನ ಸಚಿವರಲ್ಲಿ 4 ಜನ ಸಚಿವರು ಹಾಜರಿಲ್ಲ. ಇನ್ನೂ 8 ಜನ ಸಚಿವರು ಬಂದಿಲ್ಲ. ಮಾನ್ಯ ಸಭಾಪತಿಯವರೇ, ಇವರು ಸದನಕ್ಕೆ ಏಕೆ ಬಂದಿಲ್ಲ? ಈ ಸರ್ಕಾರಕ್ಕೆ ಎಚ್ಚರ, ಜ್ಞಾನ ಏನಾದರೂ ಇದೆಯೇ?

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಹೇಳಿದ್ದು ತಿಳಿತು. ಮಾನ್ಯ ಸಭಾನಾಯಕರೇ, ನನಗೆ ಮಾನ್ಯ ಸಚಿವರೊಬ್ಬರ ಪಿ.ಎ., ರವರು ಪತ್ರ ಬರೆದಿದ್ದಾರೆ. ಆದರೆ, ಪತ್ರವನ್ನು ಸಚಿವರು ಬರೆಯಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಸುರೇಶ್‌ಕುಮಾರ್‌ರವರಿಗೆ ಆರೋಗ್ಯ ಸರಿ ಇಲ್ಲವೆಂದು ಹೇಳಿದ್ದಾರೆ. ಅವರ ಕಡೆಯವರು ಬಂದಿದ್ದಾರೆ. ನಾನು ಅವರ ಪತ್ರವನ್ನು ತಮಗೆ ಕಳುಹಿಸಿ ಕೊಟ್ಟಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಶ್ರೀ ರಮೇಶ್‌ಬಾಬು ಯಾರು ಸಚಿವರು ಎಂದು ನೋಡುತ್ತಿದ್ದೇನೆ. ಮಾನ್ಯ ಆನಂದ್ ಸಿಂಗ್‌ರವರ ಪಿ.ಎಸ್., ರವರು ನನ್ನ ಬಳಿ ಹೇಳಬೇಕಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮಗೆ ಮಾನ್ಯ ಸಚಿವರ ಪಿ.ಎಸ್.. ಕಡೆಯಿಂದ ಪತ್ರ ಬರೆಸುತ್ತಾರೆ ಎಂದರೆ, ಮಾನ್ಯ ಆನಂದ್ ಸಿಂಗ್‌ರವರು ಕಾರಣ ಏನು ಹೇಳಿದ್ದಾರೆ?

ಶ್ರೀ **ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನನ್ನ ಊಹೆಯ ಪ್ರಕಾರ, ಅವರು ಸದನಕ್ಕೆ ಬರಬೇಕಾಗಿತ್ತು, ಕೊನೆಗಳಿಗೆಯಲ್ಲಿ ಏನೋ ಬದಲಾವಣೆ ಆಗಿರಬೇಕು, ಅದಕ್ಕೆ ಅವರು ಬರಲಿಕ್ಕೆ ಆಗಿರುವುದಿಲ್ಲವೆಂದು ಕಾಣುತ್ತೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ ಪತ್ರವನ್ನು ಓದುತ್ತೇನೆ. ದಯಮಾಡಿ ಎಲ್ಲರೂ ಕೇಳಿ. "ಮಾನ್ಯ ಸಚಿವರು ಪೂರ್ವ ನಿಯೋಜಿತ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪ್ರವಾಸದಲ್ಲಿರುವುದರಿಂದ ದಿನಾಂಕ 05.03.2021 ರಂದು ನಡೆಯುವ ಕರ್ನಾಟಕ ವಿಧಾನ ಪರಿಷತ್ತಿನ ಸಭೆಗೆ ಹಾಜರಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಮಾಹಿತಿಯನ್ನು ಮಾನ್ಯ ಸಭಾಪತಿಯವರ ಗಮನಕ್ಕೆ ತರುತ್ತಾ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಕಲಾಪಕ್ಕೆ ವಿನಾಯಿತಿ ನೀಡುವಂತೆ" ತಮ್ಮನ್ನು ಕೋರಲು ಮಾನ್ಯ ಸಚಿವರಿಂದ ನಿರ್ದೇಶನವಾಗಿರುತ್ತದೆ. ಮಾನ್ಯ ಸಭಾನಾಯಕರೇ, ಸಭಾಪತಿಯವರಿಗೆ ಒಬ್ಬ ಪಿ.ಎ., ಪತ್ರ ಬರೆಯುತ್ತಾರೆಯೇ? ಇದು ಬಹಳ ಗಂಭೀರವಾಗಿದೆ. ಇದನ್ನು breach of privilege ಎಂದು ಪರಿಗಣಿಸಬೇಕಾಗುತ್ತದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಯಾರಾದರೊಬ್ಬರು ಮಾತನಾಡಿ.

**(ಗೊಂದಲ)**

ಶ್ರೀ **ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಮಾನ್ಯ ಸಚಿವರು ಪತ್ರ ಕೊಡಬೇಕಾಗಿತ್ತು. ನಾವು ಅದು ಏನಾಗಿದೆ ಎಂದು ವಿಚಾರಣೆ ಮಾಡುತ್ತೇವೆ. ಅದು ಸರಿ ಇದೆ. ಇನ್ನೊಂದು ಏನಾಗಿದೆ ಎಂದರೆ, ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಇಂತಿಷ್ಟು ಸಚಿವರು ಕಾರ್ಯಕಲಾಪದಲ್ಲಿ ಉಪಸ್ಥಿತರಿರಬೇಕು ಮತ್ತು ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಹಂಚಿಕೆಯಾಗಿದೆ.

**(ಗೊಂದಲ)**

**(ಮುಂದು)**

**(294)05.03.2021 ಎಂವಿ/ಜಿಆರ್ 11.10**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, overlap ಆಗುವುದಿಲ್ಲ. ಏಕೆಂದರೆ, ಕೆಳಮನೆಯಲ್ಲಿ ಬೇರೆ ಇದ್ದಾರೆ ಮತ್ತು ಮೇಲ್ಮನೆಯಲ್ಲಿ ಬೇರೆ ಇದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ. ಸದನದ time waste ಆಗುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಎರಡೂ ಸದನಗಳಲ್ಲಿ ಮಂತ್ರಿಗಳನ್ನು ಹಂಚಿರುತ್ತಾರೆ. ಕೆಲವರು ಕಡ್ಡಾಯವಾಗಿ ಉಪಸ್ಥಿತರಿರುತ್ತಾರೆ. ಆದರೆ, ಕನಿಷ್ಠ ಮೂರು ಜನ ಮಂತ್ರಿಗಳಿದ್ದರೆ ತೆಗೆದುಕೊಳ್ಳಬೇಕೆಂದು ನಿಯಮವಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಯಾವ ಮಂತ್ರಿಗಳ ಪ್ರಶ್ನೆ ಇರುತ್ತದೆ ಅವರೇ ಸದನದಲ್ಲಿ ಇಲ್ಲದೆ ಹೋದರೆ ಹೇಗೆ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಬಹಳ ಮಹತ್ವದ ವಿಚಾರವನ್ನು ಹೇಳುತ್ತೇನೆ. ಅವರಿಗೆ ಪೂರ್ವ ನಿಯೋಜಿತ ಕಾರ್ಯಕ್ರಮದ ನಿಮಿತವಾಗಿ ಸದನಕ್ಕೆ ಬರುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ಅದನ್ನೇ ತಿಳಿಸಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನಾನು ಹೇಳುವುದನ್ನು ಕೇಳಲಿ. ನಮಗೆ ಅವರು ಈ ರೀತಿ ಮಧ್ಯದಲ್ಲಿ interruption ಮಾಡಬಾರದು. ಏಕೆಂದರೆ, ನಾವು ಅವರಿಗೆ interruption ಮಾಡುವುದಿಲ್ಲ. ಈಗ ನೋಡಿ ಪೂರ್ವ ನಿಯೋಜಿತ ಕಾರ್ಯಕ್ರಮವೆಂದರೆ ಅದು ಸದನಕ್ಕಿಂತ ಮಹತ್ವದ ಕಾರ್ಯಕ್ರಮ. ಅಂದರೆ ಸದನ ಸೆಕೆಂಡರಿ ಎನ್ನುವ ರೀತಿ ಆಯಿತು. ಪ್ರೈಮರಿ ಕಾರ್ಯಕ್ರಮ ಅವರ ಮತಕ್ಷೇತ್ರ ಮತ್ತು ಅವರ ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡರೆ ಅದು ಪೂರ್ವ ನಿಯೋಜಿತ ಕಾರ್ಯಕ್ರಮ. ಈಗ ಮದುವೆ, ಮುಂಜಿ ಎಂದು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ ಅವುಗಳಿಗೆ ಆದ್ಯತೆಯೇ? ಸದನ ಪ್ರಾರಂಭದ ದಿನದಿಂದ ಕೊನೆಯವರೆಗೂ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ ಅವರು ಇಲ್ಲಿ ಇರಬೇಕು. ಮಾನ್ಯ ಮಂತ್ರಿಗಳಿಗೆ ಕನಿಷ್ಠ ಅಷ್ಟು ಜ್ಞಾನವಿಲ್ಲದಿರುವುದು ನನಗೆ ಬಹಳ ಆಶ್ಚರ್ಯವೆನಿಸುತ್ತದೆ. ಎಲ್ಲರೂ ಪೂರ್ವ ನಿಯೋಜಿತ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಯಾವ ರೀತಿಯಾಗುತ್ತದೆ? ದಯಮಾಡಿ ನಾನು ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ, ತಾವು ಈ ಸದನವನ್ನು adjourn ಮಾಡಿ, ಅವರೆಲ್ಲರೂ ಬಂದ ನಂತರ ಸದನವನ್ನು ಪ್ರಾರಂಭ ಮಾಡಿ. ಏಕೆಂದರೆ, ಅವರಿಗೆ ಸ್ವಲ್ಪ ಜ್ಞಾನ ಬರಲಿ. ಅಧಿಕಾರಿಗಳು ಸಹ ಸದನಕ್ಕೆ ಬಂದಿಲ್ಲ. ಅಧಿಕಾರಿಗಳೆಲ್ಲರೂ ಉಪಸ್ಥಿತರಿದ್ದಾರೆಯೇ? You go through them. All of them have taken very lightly. ಅವರಿಗೆ ಸದನದ ಘನತೆಯ ಬಗ್ಗೆ ಗೌರವವಿಲ್ಲ. ಅಂದರೆ, ಮಂತ್ರಿಗಳಿಗೂ ಇಲ್ಲ ಮತ್ತು ಅಧಿಕಾರಿಗಳಿಗೂ ಇಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ ಆಪ್ತ ಸಹಾಯಕರು ಪತ್ರ ಬರೆದಿರುವುದು ತಪ್ಪಾಗಿರಬಹುದು. ಅದನ್ನು ಸರಿಪಡಿಸಿಕೊಳ್ಳುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಅದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಸಮಜಾಯಿಷಿ ಕೊಡಬೇಕಾದುದು ನಮ್ಮ ಜವಾಬ್ದಾರಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಈ ಸದನದ ಅತ್ಯಂತ ಹಿರಿಯ ಸದಸ್ಯರು, ಈಗ ಸಭಾಪತಿಗಳಾಗಿದ್ದೀರಿ. ತಮಗೆ ಅಪಾರವಾದ ಅನುಭವವಿದೆ. ಇಷ್ಟೆಲ್ಲಾ ಇದ್ದಾಗ ಈ ರೀತಿಯ ಅಚಾತುರ್ಯ, ಬೇಜವಾಬ್ದಾರಿತನ, ನಿರ್ಲಕ್ಷ್ಯತನ ಮತ್ತು ಸದನಕ್ಕೆ ಅಗೌರವ ತೋರಿಸುವ ಕೃತ್ಯವನ್ನು ನಾವು ಖಂಡಿಸಬೇಕಾಗುತ್ತದೆ. I don't like this type of attitude. This is too much.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಏನು ಮಾಡಬೇಕೆಂದು ಹೇಳುತ್ತಿದ್ದೀರಿ? ನೀವು ನನ್ನ ಮಾತನ್ನಾದರೂ ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ನಿಮ್ಮ ಬಗ್ಗೆ ಮಾತನಾಡುತ್ತಿಲ್ಲ. ತಾವು ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಸಹ ಸದನಕ್ಕೆ ಬರಬೇಕೆಂದು strict ಆಗಿ ಹೇಳಿದ್ದೀರಿ. I appreciate your stand.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಾನು ಹೇಳುವುದನ್ನು ಕೇಳಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಯಾದಿಯಾಗಿ ಸದನಕ್ಕೆ ಕಡ್ಡಾಯವಾಗಿ ಬರಲೇಬೇಕು ಮತ್ತು ಉತ್ತರವನ್ನು ಸಂಬಂಧಪಟ್ಟವರೇ ನೀಡಬೇಕೆಂದು ಪೀಠದಿಂದ ಹೇಳಿದ್ದೀರಿ. ಅನಿವಾರ್ಯ ಕಾರಣಗಳಿದ್ದರೆ, ಆ ಮಾತು ಬೇರೆ. ಈ ರೀತಿಯಾದರೆ ಸದನವನ್ನು ಏಕೆ ಮತ್ತು ಯಾವ ಪುರುಷಾರ್ಥಕ್ಕಾಗಿ ಈ ನಡೆಸಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ನಾವು ತಾಳ್ಮೆಯಿಂದ ಕೇಳಿದ್ದೇವೆ. ಅವರು ಸಹ ನಾವು ಹೇಳುವುದನ್ನು ಕೇಳಬೇಕು. ಸುದೀರ್ಘ ಅವಧಿಯಲ್ಲಿ ಈ ಹಿಂದಿನಿಂದಲೂ ಕೂಡ ಕನಿಷ್ಠ ಮೂರು ಜನ ಮಂತ್ರಿಗಳು ಇರಬೇಕೆಂದು ಇದೆ. ಕೆಲವು ಮಂತ್ರಿಗಳಿಗೆ ಕಡ್ಡಾಯವಾಗಿ ಕೆಳಮನೆಯಲ್ಲಿ ಜವಾಬ್ದಾರಿಗಳನ್ನು ನೀಡಿರುತ್ತಾರೆ ಮತ್ತೆ ಕೆಲವು ಮಂತ್ರಿಗಳಿಗೆ ಮೇಲ್ಮನೆಯಲ್ಲಿ ಜವಾಬ್ದಾರಿಗಳನ್ನು ನೀಡಿರುತ್ತಾರೆ. ಸದನದ ಕಾರ್ಯಕಲಾಪದಲ್ಲಿ ಭಾಗವಹಿಸುವವರ ಪಟ್ಟಿ ಇರುತ್ತದೆ. ಇದು ಇರುವಂತಹ ವ್ಯವಸ್ಥೆಗಳು. ಅಷ್ಟಾಗಿಯೂ ಕೂಡ ಈ ಹಿಂದೆ ಎರಡು ಬಾರಿ ನಾನೇ ಮೂರು ಜನರಿಗಿಂತ ಕಡಿಮೆ ಮಂತ್ರಿಗಳು ಇದ್ದಾರೆಂದು ಸರ್ಕಾರ ಮತ್ತು ಮಾನ್ಯ ಸಭಾಪತಿಯವರ ಜೊತೆಯಲ್ಲಿ ವಾದ ಮಾಡಿ ಅದನ್ನು ಸರಿಪಡಿಸಿದ್ದೇನೆ. ಆದರೆ, ಇವತ್ತು ಇಲ್ಲಿ ಎಷ್ಟು ಜನ ನಮ್ಮ ಮಂತ್ರಿಗಳು ಇದ್ದಾರೆಂದು ತಾವು ಗಮನಿಸಿ. ಎಲ್ಲರೂ ಸದನದಲ್ಲಿ

ಇರಬೇಕು ಎನ್ನುವುದು ಸತ್ಯ. ಆದರೆ, ಕೆಲವು ಕಾರಣಗಳಿಗೋಸ್ಕರ ಕೆಲವರು ಸದನದಲ್ಲಿ ಇರುವುದಿಲ್ಲ. ಇಲ್ಲಿ ವಿರೋಧ ಪಕ್ಷದವರು ಇದ್ದಾಗಲೂ ಆ ರೀತಿಯಾಗಿತ್ತು ನಾವು ಇದ್ದಾಗಲೂ ಈ ರೀತಿಯಾಗಿತ್ತು. ಅದಕ್ಕೆ ಇದರ ಬಗ್ಗೆ ನಾವು ಸಮಜಾಯಿಸಿ ಕೊಡಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಅವರಿಗೆ ಹೇಳುತ್ತೇನೆ ಬಿಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹೇಳಿದ್ದನ್ನು ನಾನು ಶಾಂತ ರೀತಿಯಿಂದ ಕೇಳಿದ್ದೇನೆ. ಸದನದಲ್ಲಿ ಮಂತ್ರಿಗಳು ಕಡ್ಡಾಯವಾಗಿ ಇರಬೇಕು ಮತ್ತು ಅವರು ಕಡ್ಡಾಯವಾಗಿದ್ದು ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕು ಎನ್ನುವ ಪಟ್ಟಿ ಇದೆ. ಈ ರೀತಿ ಮೇಲ್ಮನೆಯಲ್ಲೂ ಸಹ ಇದೆ. ಅದು overlap ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಹೇಳುವುದಕ್ಕೆ ಸ್ವಲ್ಪ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಪ್ರಶ್ನೋತ್ತರಗಳಿಗೆ ಉತ್ತರ ನೀಡುವಂತಹ ಸಚಿವರು ಕೆಳಮನೆಯಲ್ಲಿರುತ್ತಾರೆ. ಅದೇ ರೀತಿ ಮೇಲ್ಮನೆಯಲ್ಲಿ ಪ್ರಶ್ನೋತ್ತರಗಳಿಗೆ ಉತ್ತರ ನೀಡುವಂತಹ ಸಚಿವರು ಮೇಲ್ಮನೆಯಲ್ಲಿರುತ್ತಾರೆ. ಅಷ್ಟಾಗಿಯೂ ಮೇಲ್ಮನೆಯಲ್ಲಿ ಇಷ್ಟು ಸಚಿವರು ಕಡ್ಡಾಯವಾಗಿ ಹಾಜರಿರಬೇಕೆಂದು ಹೇಳಿದ್ದಾರಲ್ಲ ಅವರು ಕೆಳಮನೆಯಲ್ಲಿ ಇರುವುದಿಲ್ಲ. ಕೆಳಮನೆಯಲ್ಲಿ ಇರುವವರೆ ಬೇರೆ, ಮೇಲ್ಮನೆಯಲ್ಲಿ ಇರುವವರೆ ಬೇರೆ. He cannot take shelter under that point.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಹಿಂದೆ ಸರ್ಕಾರ ನಡೆಸಿದಂತಹವರು ಮತ್ತು ಅವರು ಸಭಾನಾಯಕರಾಗಿ ಕೆಲಸ ಮಾಡಿದಂತಹವರು. ಅವರು ಸಭಾನಾಯಕರಾಗಿ ಕೆಲಸ ಮಾಡುವಾಗ ಮೂರು ಜನ ಮಂತ್ರಿಗಳಿಲ್ಲವೆಂದು ನಾನು ಸಭಾತ್ಯಾಗ ಮಾಡುತ್ತೇನೆಂದು ಹೇಳಿದ್ದೆ. ಆದರೆ, ಇವತ್ತು ಇಲ್ಲಿ ನಾವು ಆರು ಜನ ಮಂತ್ರಿಗಳು ಕುಳಿತುಕೊಂಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸರ್ಕಾರಿ ಮುಖ್ಯ ಸಚೇತಕರು ಮಾನ್ಯ ಮಂತ್ರಿಗಳು ಸದನದಲ್ಲಿ ಹಾಜರಿರುವಂತಹ ಕೆಲಸ ಮಾಡಬೇಕಾಗಿತ್ತು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ,...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರಿ ಸಚೇತಕರು ಅದನ್ನು ಸಮರ್ಥನೆ ಮಾಡಿಕೊಳ್ಳುವುದು ಬೇಡ. Tell them strictly. Ask them to attend the House.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಈ ಸದನದ ಸಭಾನಾಯಕರು. ಅವರು ತಮ್ಮ ಮಾನ್ಯ ಮಂತ್ರಿಗಳು ಸಮಯಕ್ಕೆ ಸರಿಯಾಗಿ ಸದನಕ್ಕೆ ಬರುವಂತೆ ತಿಳಿಸಲಿ. Hon'ble Sri Kota Srinivasa Poojari is a Leader of the House. He represents the Government. He should tell them strictly.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇವತ್ತು ಸದನವನ್ನು ನಡೆಸಬೇಕೆಂದು ಇರುವುದು.

**(ಗೊಂದಲ)**

**ಸಭಾಪತಿಯವರು:–** ನೀವೇ ಮಾತನಾಡಿದರೆ ಹೇಗೆ? ನಾನು ಮಾತನಾಡುವುದಕ್ಕೆ ಬಿಡಿ. ಮಾನ್ಯ ಸಭಾನಾಯಕರೆ, ಸಾಧ್ಯವಾದಷ್ಟು ಮಟ್ಟಿಗೆ ಮಾನ್ಯ ಮಂತ್ರಿಗಳು ಸದನಕ್ಕೆ ಬರುವುದಕ್ಕೆ ಹೇಳಿ. ಈ ರೀತಿಯ ಪತ್ರಗಳನ್ನು ಕಳುಹಿಸಿದಾಗ ಅದರಲ್ಲಿ ಪೂರ್ವನಿಯೋಜಿತ ಎಂದು ಹೇಳಬಾರದು. ಅವರು ಕೆಳಮನೆಯಲ್ಲಿದ್ದರೆ ಸರಿ. ನಾನು ಇದಕ್ಕೆ ಯಾವುದೇ ರೀತಿಯ ತಕರಾರು ಮಾಡುವುದಿಲ್ಲ. ಅಧಿವೇಶನವಿದ್ದಾಗ ಪೂರ್ವನಿಯೋಜಿತ ಕಾರ್ಯಕ್ರಮಕ್ಕೆ ಹೋಗಬಾರದೆಂದು ಅವರಿಗೆ ತಿಳಿಸಿ ಹೇಳಿ. ಮುಂದಿನ ದಿನಗಳಲ್ಲಿ ಅವರು ಸದನಕ್ಕೆ ಹಾಜರಾಗುವಂತೆ ತಿಳಿಸಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಇವತ್ತು ಮೊದಲಿನ practice...

**ಸಭಾಪತಿಯವರು:–** ಆಯಿತು, ಅದನ್ನು ನಾನು ಒಪ್ಪುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳಿಗೂ ಸ್ವಲ್ಪ ಹೇಳಲಿ. ಅಧಿಕಾರಿಗಳು ಕೂಡ ಸದನದಲ್ಲಿ ಹಾಜರಿಲ್ಲ.

**ಸಭಾಪತಿಯವರು:–** ಈಗ ಮಾನ್ಯ ಆರ್.ಬಿ.ತಿಮ್ಮಾಪೂರ್‌ರವರು ಪ್ರಶ್ನೆ ಕೇಳುವುದು.

## 03. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**(ಪ್ರಶ್ನೆ ಸಂಖ್ಯೆ 730)**

**(ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರ್‌ರವರು ಗೈರು ಹಾಜರಿದ್ದರು)**

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಅರವಿಂದ ಕುಮಾರ್ ಅರಳಿಯವರೆ ಸಾಕು ತಾವು ಸುಮ್ಮನಿರಿ. ಈಗ ಮಾನ್ಯ ಎಂ.ಎ.ಗೋಪಾಲಸ್ವಾಮಿಯವರು ತಮ್ಮ ಪ್ರಶ್ನೆ ಕೇಳುವುದು.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಅರವಿಂದ ಕುಮಾರ್ ಅರಳಿಯವರೆ ನಾನು ಹೇಳಿದ್ದೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಕಳೆದ ಹಲವು ಅಧಿವೇಶನಗಳಲ್ಲಿ ನನ್ನ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿಲ್ಲ. ಕೆಲವು ಲಿಖಿತ ಪ್ರಶ್ನೆಗಳಿಗೆ ಇನ್ನು ಉತ್ತರವನ್ನು ಒದಗಿಸಿಲ್ಲ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಮಾನ್ಯ ಸದಸ್ಯರಿಗೆ ಉತ್ತರ ಒದಗಿಸುವಂತಹ ವ್ಯವಸ್ಥೆ ಮಾಡಿ. ಮಾನ್ಯ ಅರವಿಂದ ಕುಮಾರ್ ಅರಳಿಯವರೆ ತಾವು ಕುಳಿತುಕೊಳ್ಳಿ. ಮಾನ್ಯ ಎಂ.ಎ.ಗೋಪಾಲಸ್ವಾಮಿಯವರ ಪ್ರಶ್ನೆಗೆ ಸಂಬಂಧಪಟ್ಟಂತೆ ಕೃಷಿ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಬಿ.ಸಿ.ಪಾಟೀಲ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ತಮಗೆ ಮೊನ್ನೆ ತಿಳಿಸಿದ್ದೇನೆ. ಪ್ರಶ್ನೆಗಳನ್ನು ವರ್ಗಾವಣೆ ಮಾಡುವಾಗ ಮೊದಲು ಪ್ರಶ್ನೆಗಳನ್ನು ನೋಡಿ ಹಾಕಬೇಕೆಂದು ಹೇಳಿದ್ದೇನೆ. ಇದನ್ನು ಸಚಿವಾಲಯದವರಿಗೂ ಸಹ ಹೇಳಿದ್ದೇನೆ. ಮುಂದಿನ ಬಾರಿ ಈ ರೀತಿಯಾಗದಂತೆ ನೋಡಿಕೊಳ್ಳಿ. ತಮ್ಮ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ. ಆದುದರಿಂದ ಅದನ್ನು ಮುಂದೆ ತೆಗೆದುಕೊಳ್ಳುತ್ತೇನೆ.

**(ಮಾನ್ಯ ಎಂ.ಎ.ಗೋಪಾಲಸ್ವಾಮಿಯವರ ಪ್ರಶ್ನೆ ಸಂಖ್ಯೆ 756 ಕಂದಾಯ ಇಲಾಖೆಗೆ ವರ್ಗಾವಣೆಯಾಗಿರುತ್ತದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಳೆಗಳು ನಾಶವಾಗಿರುವುದರಿಂದ ಇದು ಕೃಷಿ ಇಲಾಖೆಗೆ ಸಂಬಂಧಪಟ್ಟಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತಹ ಸಚಿವರು ಉತ್ತರವನ್ನು ಕೊಡಬೇಕು.

**ಸಭಾಪತಿಯವರು:-** ವರ್ಗಾವಣೆ ಎಂದರೆ, ಆ ಪ್ರಶ್ನೆ ಇಲಾಖೆಗೆ ಹೋಗಿ ಅಲ್ಲಿಂದ ಉತ್ತರ ಬರಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಬಂದ ತಕ್ಷಣ ಅವರಿಗೆ sufficient time ಇರುತ್ತದೆ. ಪ್ರಶ್ನೆ ವರ್ಗಾವಣೆಯಾದ ತಕ್ಷಣ the concerned Department has to answer.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೃಷಿ ಬೆಳೆಗಳು ನಷ್ಟವಾಗಿವೆ. ಉತ್ತರ ನೀಡುವುದಕ್ಕೆ ಮಾನ್ಯ ಸಚಿವರು ಏನಾದರೂ ತಪ್ಪಿಸಿಕೊಳ್ಳುತ್ತಿದ್ದಾರೆಯೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಕೃಷಿ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ. Hon'ble Minister for Agriculture is not bound to answer that question, I agree. ಆಗ ಅದು ಕಂದಾಯ ಇಲಾಖೆಗೆ in time ಹೋಗಿ, ಕಂದಾಯ ಇಲಾಖೆಯವರು ಅದಕ್ಕೆ ಉತ್ತರ ಕೊಡಬೇಕು. ಆ ಪ್ರಶ್ನೆ ವರ್ಗಾವಣೆಯಾಗಿದೆ ಎಂದರೆ ಮುಗಿದು ಹೋಗುತ್ತದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದನ್ನು ನೋಡಿದರೆ ನನಗೆ ನಗು ಬರುತ್ತದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ತಾವು ಎಷ್ಟು ಮಾತನಾಡುತ್ತೀರಿ ಸಾಕು ಬಿಡಿ. ನಾನು ಅವರಿಗೆ ಹೇಳುತ್ತೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, you set the precedent. ಈ ಪ್ರಶ್ನೆ ಯಾವ ಇಲಾಖೆಗೆ ಸಂಬಂಧಪಟ್ಟಿದೆ ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರ ನೀಡಬೇಕು.

**ಸಭಾಪತಿಯವರು:-** ಆ ರೀತಿ ಆಗುವುದಿಲ್ಲ. ಕಂದಾಯ ಇಲಾಖೆಯ ಪ್ರಶ್ನೆಗಳನ್ನು ಇವತ್ತು ತೆಗೆದುಕೊಳ್ಳುತ್ತಿಲ್ಲ. ಕಂದಾಯ ಇಲಾಖೆಯ ಪ್ರಶ್ನೆಗಳು ಇದ್ದಾಗ ಆ ಪ್ರಶ್ನೆಯೂ ಸಹ ಬರುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ದಿನಾಂಕವನ್ನು ನಿಗದಿಪಡಿಸಬೇಕು. ಈಗ ಅದಕ್ಕೆ ಕಾಲಾವಕಾಶನೂ ಬಂದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಮೇಲೆ ಇರುವ ಕೋಪವನ್ನು ಪ್ರಶ್ನೋತ್ತರದ ಮೇಲೆ ತರುವುದು ಬೇಡ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಂ.ಎ.ಗೋಪಾಲಸ್ವಾಮಿಯವರೆ ತಾವು ಕೇಳಿರುವ ಪ್ರಶ್ನೆ ವರ್ಗಾವಣೆಯಾಗಿದೆ. ಮುಂದೆ ಅದನ್ನು ತಮಗೆ ತಿಳಿಸುತ್ತೇವೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:-** ಪ್ರಶ್ನೆ ವರ್ಗಾವಣೆಯಾಗಿದೆ ಮತ್ತು ಅದಕ್ಕೆ ಮುಂದೆ ಅವಕಾಶ ನೀಡುತ್ತೇನೆಂದು ಹೇಳಿದ್ದೇನೆ. ಈಗ ಬೇಡ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೇವಲ ಮೂವತ್ತು ಸೆಕೆಂಡ್‌ಗಳಲ್ಲಿ ಮಾತನಾಡಿ ಮುಗಿಸುತ್ತೇನೆ.

**ಸಭಾಪತಿಯವರು:-** ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೋತ್ತರ ವೇಳೆ 10ನೇ ತಾರೀಖಿನಂದು ಇದೆ. ಅವತ್ತು ನಿಮಗೆ ಉತ್ತರ ನೀಡಿಸುತ್ತೇನೆ. ನಿಮ್ಮದು ಏನು ಪದ್ಧತಿ?

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಹಾಸನ ಮತ್ತು ತುಮಕೂರಿನ ರೈತರಿಗೆ ಅನ್ಯಾಯವಾಗುತ್ತಿದೆ. ನಾನು ಹೇಳುವುದು ತೋಟಗಾರಿಕೆ ಇಲಾಖೆಯನ್ನು ಸಹ ಕಂದಾಯ ಇಲಾಖೆಗೆ ಸೇರಿಸಿಬಿಡಿ.

**ಪ್ರಶ್ನೆ ಸಂಖ್ಯೆ: 768**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅವರು 2014-15 ಮತ್ತು 2017-18ರವರೆಗೆ ಉತ್ತರವನ್ನು ಕೊಟ್ಟಿದ್ದಾರೆ. ತದನಂತರ ಏನಾಗಿದೆ ಎಂದು ಗೊತ್ತಿಲ್ಲ.

**(ಮುಂದು)**

**(295) 11.20 05.03.2021 ಎಲ್‌ಎಲ್/ಎಂಡಿ(ವಿಕೆ)**

**ಶ್ರೀ ಪಿ.ಆರ್. ರಮೇಶ್(ಮುಂದು):-**

ಮತ್ತು ಇದರಲ್ಲಿ ಅನುದಾನ ಕೊಟ್ಟಿರುವ ಬಗ್ಗೆ ಸಹ ಹೇಳಿದ್ದಾರೆ. ಇದರಲ್ಲಿರುವ ಉದ್ದೇಶವೇನೆಂದರೆ, ಗ್ರಾಮೀಣ ಪ್ರದೇಶಗಳಲ್ಲಿರುವಂತಹ SHG (Self Help Group) ಗಳಿಗೆ ಉತ್ತಮವಾದಂತಹ ಉದ್ಯೋಗ ಕಲ್ಪಿಸುವಂಥದ್ದು ಒಂದು ಇದೆ. ಎರಡನೆಯದಾಗಿ, ಆ ಉದ್ಯೋಗಕ್ಕೆ ಮಾರ್ಕೆಟಿಂಗ್ ಮಾಡುವಂಥದ್ದಾಗಿದೆ. ಈ ಎರಡರ ಮಧ್ಯೆ ಪ್ಯಾಕಿಂಗ್ ಇರುತ್ತದೆ. ಇವೊತ್ತಿನ ದಿವಸ ಬಹಳಷ್ಟು ಕೆಟ್ಟದಾದ ಠಿಡಿಠಜಣಛಿಣ ಅನ್ನು ಅವರು ಮಾಡುತ್ತಿದ್ದಾರೆ. ಅದಕ್ಕಾಗಿ, ಇಂಟರ್‌ನ್ಯಾಷನಲ್ ಕಂಪನಿಗಳಿಗೆ ಅವಕಾಶ ನೀಡಲಾಗುತ್ತಿದೆ. ಜೊತೆಗೆ, ಅವರಿಗೆ ಶೇಕಡ 100 ರಷ್ಟು Foreign Direct Investment ಗೆ ಕೊಟ್ಟಿರುತ್ತಾರೆ. ಆದರೆ, ಇವರೆಲ್ಲರೂ ಏನು ಮಾಡುತ್ತಿದ್ದಾರೆಂದರೆ, ಗ್ರಾಮೀಣ ಪ್ರದೇಶಗಳಿಗೆ ಪ್ರವೇಶ ಮಾಡಿ, ಸರ್ಕಾರದಿಂದ ಯಾವ್ಯಾವ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ; ಅಂದರೆ, ಹೆಣ್ಣುಮಕ್ಕಳಿಗೆ ಬಲ ತುಂಬುವಂತಹ ಮತ್ತು ಅವರಿಗೆ ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ಶಕ್ತಿಯನ್ನು ತುಂಬತಕ್ಕಂತಹ ಕಾರ್ಯಕ್ರಮ ದಿನದಿಂದ ದಿನಕ್ಕೆ ನಶಿಸಿ ಹೋಗುತ್ತದೆ. ಇದಕ್ಕೆ ಕಾರಣವೇನೆಂದರೆ, ಸರ್ಕಾರದಿಂದ ಮಾಡುತ್ತಿರುವಂತಹ corporate sector involvement ಮತ್ತು ಬೇರೆ ಬೇರೆ ರೀತಿಯ ಗ್ರಾಮೀಣ ಪ್ರದೇಶಗಳಿಗೆ ಉದ್ಯೋಗ ನೀಡುವಂತಹ ಒಂದು ಕೆಲಸವನ್ನು ನಿಷ್ಕ್ರಿಯಗೊಳಿಸುವಂತಹ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಇರಬಹುದು ಅದನ್ನು ಜಾಸ್ತಿ ಮಾಡುತ್ತಿದೆ. ಹೀಗಾಗಿ, ಇವೊತ್ತಿನ ದಿವಸ ಸರ್ಕಾರ ಸ್ವ-ಸಹಾಯ ಗುಂಪುಗಳ ಸಬಲೀಕರಣಕ್ಕೆ ಸಂಬಂಧಪಟ್ಟಂತೆ, ಮಾರ್ಕೆಟಿಂಗ್‌ಗೆ ಯಾವುದೇ ಕಾರ್ಯಕ್ರಮ ಕೊಡುತ್ತಿರುವುದಿಲ್ಲ ಮತ್ತು ಪ್ಯಾಕಿಂಗ್ ಯಾವ ರೀತಿ ಇರಬೇಕೆಂಬ ಬಗ್ಗೆ ಸಲಹೆ-ಸೂಚನೆಗಳನ್ನು ನೀಡುತ್ತಿರುವುದಿಲ್ಲ. ಅಲ್ಲದೇ, ಸರ್ಕಾರದಿಂದ 3-4 ವರ್ಷಗಳ ಹಿಂದೆ ತರಬೇತಿ ಕೊಟ್ಟಿದ್ದು, ಅಲ್ಲಿಂದ ಇಲ್ಲಿಯವರೆಗೂ ಯಾವುದೇ ತರಬೇತಿ ಕೊಟ್ಟಿರುವುದಿಲ್ಲ. ಆದರೆ, ಜಿಲ್ಲಾ ಕೇಂದ್ರದಲ್ಲಿ ಸುಮಾರು 75 ಸಾವಿರ ರೂಪಾಯಿ ಕೊಟ್ಟು ಒಂದು

ಮಾರ್ಕೆಟಿಂಗ್ ಕೇಂದ್ರವನ್ನು ತೆರೆಯಲಾಗಿರುತ್ತದೆ. ಇದರಿಂದ, ಅವರಿಗೆ ಯಾವುದೇ ಉಪಯೋಗವಾಗುವುದಿಲ್ಲ. ಅಂದರೆ, ಸರ್ಕಾರ ಕಾಟಾಚಾರಕ್ಕೆ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಏನೋ ಒಂದು ಸಹಾಯ ಮಾಡುವ ರೀತಿ, ಮೂಗಿಗೆ ಬೆಣ್ಣೆ ಸವರಿ, ಬೆಣ್ಣೆ ಕೊಡುತ್ತಿದ್ದೇನೆಂದು ಹೇಳುತ್ತಿದ್ದಾರೆಯೇ ಹೊರತು, ಯಾವುದೇ ರೀತಿಯ concrete ಆಗಲಿ, processive ಆಗಲಿ ಈ ಒಂದು ಸಮುದಾಯಕ್ಕೆ ಅಥವಾ ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ ಯಾವುದೇ ಕಾರ್ಯಕ್ರಮಗಳನ್ನು ನಿರ್ದಿಷ್ಟವಾಗಿ ಕೊಡುತ್ತಿಲ್ಲ. ಹಾಗಾಗಿ, ದಯಮಾಡಿ ಮಾನ್ಯ ಸಚಿವರು ಇದಕ್ಕೆ ಉತ್ತರ ನೀಡಬೇಕೆಂದು ಕೋರುತ್ತೇನೆ.

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿಯಲ್ಲಿ ತಮಗೆ ಅವಕಾಶ ನೀಡಲು ಸಾಧ್ಯವಿಲ್ಲ.

**ಶ್ರೀ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಶಾಸಕ ಸಹೋದರರು ಹೇಳಿದ ರೀತಿಯಲ್ಲಿ ಗ್ರಾಮೀಣ ಮಟ್ಟದ ಮಹಿಳೆಯರನ್ನು ಸಬಲೀಕರಣ ಮಾಡಬೇಕೆಂಬ ಉದ್ದೇಶದಿಂದ ಈ ಎಸ್.ಹೆಚ್.ಜಿ. ಗಳು 2000-2001ನೇ ಸಾಲಿನಲ್ಲಿ ಸ್ಥಾಪಿತವಾಗಿರುತ್ತವೆ. ಅಲ್ಲಿಂದ ಇಲ್ಲಿಯವರೆಗೂ ಅವರಿಗೆ ಆರ್ಥಿಕ ಚಟುವಟಿಕೆಗಳು ಹೇಗೆ ಮಾಡಬೇಕು ಎನ್ನುವ ಮಾಹಿತಿ ಕೊಟ್ಟು, ಬ್ಯಾಂಕ್ ಲಿಂಕೇಜ್ ಯಾವ ರೀತಿ ಇರಬೇಕು ಎನ್ನುವ ಬಗ್ಗೆ ನಮ್ಮ ಇಲಾಖೆಯಿಂದ ಅವರಿಗೆ ಧೈರ್ಯ ತುಂಬಿ, ಅವರನ್ನು ಟಂಣುತಚಿಣಜ ಮಾಡಿ, ಬ್ಯಾಂಕ್ ವ್ಯವಹಾರಗಳ ಜೊತೆ ಹೇಗೆ ಇರಬೇಕು ಎಂಬ ಬಗ್ಗೆ ಒಂದು ಅರಿವನ್ನು ಮೂಡಿಸಲಾಗಿರುತ್ತದೆ. ಆ ನಂತರ ಸರ್ಕಾರದಿಂದ ಅನೇಕ ಯೋಜನೆಗಳಾದ, ಸುತ್ತುನಿಧಿ, ಹೆಚ್ಚುವರಿ ಸುತ್ತುನಿಧಿ ಹೀಗೆ ಇತರೆ ಯೋಜನೆಗಳನ್ನು ಕೊಡಲಾಗಿರುತ್ತದೆ. ಮಾನ್ಯ ಶಾಸಕ ಸಹೋದರರು ಹೇಳುವಂತಹ ಕಳಕಳಿ ಏನೆಂದರೆ, ಮಹಿಳಾ ಸ್ವ-ಸಹಾಯ ಗುಂಪುಗಳು ತಯಾರು ಮಾಡುವಂತಹ ಪ್ರಾಡೆಕ್ಟ್‌ಗೆ ಮಾರ್ಕೆಟಿಂಗ್ ಕಲ್ಪಿಸಬೇಕು, ಪ್ಯಾಕಿಂಗ್ ಚೆನ್ನಾಗಿ ಇರಬೇಕು ಮತ್ತು ಅವರ ಪ್ರಾಡೆಕ್ಟ್ ಅನ್ನು ಇಂಟರ್‌ನ್ಯಾಷನಲ್ ಮಾರ್ಕೆಟಿಂಗ್ ಅಥವಾ ದೇಶದ ಇತರೆ ರಾಜ್ಯಗಳಿಗೆ ಸರಬರಾಜು ಆಗುವ ರೀತಿ, ಒಳ್ಳೆಯ ಮಾರ್ಕೆಟಿಂಗ್ ಸೌಲಭ್ಯ ಒದಗಿಸಬೇಕೆನ್ನುವುದು ಇರುತ್ತದೆ. ಜೊತೆಗೆ, ತರಬೇತಿಗಳನ್ನು ಸುಮಾರು ವರ್ಷಗಳಿಂದ ಕೊಟ್ಟಿಲ್ಲವೆನ್ನುವುದು ಅವರ ಕಳಕಳಿಯಾಗಿರುತ್ತದೆ. ಆದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಅಥವಾ ತಾಲ್ಲೂಕು ಮಟ್ಟದ ಸ್ತ್ರೀಶಕ್ತಿ ಒಕ್ಕೂಟಗಳ ಸಭೆಯನ್ನು ಕರೆದು, ಅವರ ಜೊತೆ ಸಮಾಲೋಚನೆಯನ್ನು ಮಾಡಿ, ಅವರ ಸಲಹೆ-ಸೂಚನೆಗಳನ್ನು ತೆಗೆದುಕೊಂಡು ನಮ್ಮ ಸರ್ಕಾರದಿಂದ ಅವರ ಪ್ರಾಡೆಕ್ಟ್‌ಗಳಿಗೆ ಯಾವ ರೀತಿ ಮಾರ್ಕೆಟಿಂಗ್ ವ್ಯವಸ್ಥೆ ಕಲ್ಪಿಸಬೇಕೆನ್ನುವ ಬಗ್ಗೆ ಈಗಾಗಲೇ ನಾವು ಅನೇಕ ಸಭೆಗಳನ್ನು ಮಾಡಿರುತ್ತೇವೆ.

ಹಾಗಾಗಿ, ಬರುವಂತಹ ದಿನಮಾನಗಳಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರುವ ಸ್ತ್ರೀಶಕ್ತಿ ಸಂಘಗಳ ಬಲವರ್ಧನೆಗೆ ಮತ್ತು ಆರ್ಥಿಕ ಪರಿಸ್ಥಿತಿ ಸುಧಾರಣೆಗೋಸ್ಕರ ನಾವು ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಅನುಷ್ಠಾನಗೊಳಿಸುತ್ತಿರುತ್ತೇವೆ. ಆದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕೋವಿಡ್–19 ಇದ್ದುದರಿಂದ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಅದನ್ನು ಅನುಷ್ಠಾನಗೊಳಿಸುವಂತಹ ಕಾರ್ಯವನ್ನು ಮಾಡುತ್ತೇವೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಕೊಟ್ಟಿರುವ ಅಂಕಿ–ಅಂಶಗಳೇ ಈ ಬಗ್ಗೆ ಹೇಳುತ್ತಿದೆ. ಅದೇನೆಂದರೆ, 2015–16ರಲ್ಲಿ ಮಹಿಳಾ ಸ್ವ–ಸಹಾಯ ಗುಂಪುಗಳ ಬಲವರ್ಧನೆಗೆ 7,423 ಲಕ್ಷ ರೂಪಾಯಿ ಅನುದಾನ ಒದಗಿಸಲಾಗಿದೆಯೆಂದು ಉತ್ತರ ನೀಡಿರುತ್ತಾರೆ. ಆದರೆ, ಅದು ಬರು ಬರುತ್ತಾ, 2019–20ರಲ್ಲಿ 1 ಸಾವಿರ ಅಂದರೆ, ಕೇವಲ 10 ಕೋಟಿ ರೂಪಾಯಿಗಳ ಅನುದಾನವನ್ನು ಕೊಡಲಾಗಿರುತ್ತದೆ. ಅದೇ ರೀತಿ, 2020–21ರಲ್ಲಿ ಆ ಅನುದಾನವನ್ನು 5 ಕೋಟಿ ರೂಪಾಯಿಗಳಿಗೆ ನಿಲ್ಲಿಸಿರುತ್ತಾರೆ. ಮಾನ್ಯ ಸಚಿವರು ತಮ್ಮ ಕಾಲದಲ್ಲಿ ಉತ್ತಮವಾದಂತಹ ಕೆಲಸ ಮಾಡುತ್ತಿದ್ದೇವೆಂದು ಉತ್ತರ ನೀಡಿರುತ್ತಾರೆ. ಆದರೆ, ಅನುದಾನವನ್ನೇ ಕೊಡದೇ ಇದ್ದರೆ, ಕೆಲಸ ಹೇಗೆ ಆಗುತ್ತದೆ? ಅನುದಾನ ನೀಡದೇ ಇರುವುದು ಒಂದು ಕಾರಣ. ಎರಡನೆಯದಾಗಿ, ಇವೊತ್ತಿನ ದಿವಸ ಎಷ್ಟೋ ಎಸ್.ಹೆಚ್.ಜಿ. ಗಳು ನಿಷ್ಕ್ರಿಯಗೊಂಡಿರುತ್ತವೆ. ಅಂದರೆ, ಶೇಕಡ 50 ರಷ್ಟು; ಕಳೆದ 2–3 ವರ್ಷದಲ್ಲಿ ಅವರಿಗೆ ಸರಿಯಾದ ಉದ್ಯೋಗ ಸಿಗದೇ, ಮಾರ್ಕೆಟ್ ಸಿಗದೇ ಹಾಗೂ ಅವರ ಪ್ರಾಡೆಕ್ಟ್‌ಗಳನ್ನು ಕೊಂಡುಕೊಳ್ಳುವವರು ಇಲ್ಲದೇ ಬಹಳಷ್ಟು ಜನರು ಉದ್ಯೋಗ ಬಿಟ್ಟು ಹೋಗಿರುತ್ತಾರೆ ಅಥವಾ ಅವರು ಯಾವುದೇ ಕೆಲಸ ಮಾಡುವುದಕ್ಕೆ ಮುಂದಾಗದೇ ನಿಷ್ಕ್ರಿಯರಾಗಿದ್ದಾರೆ. ಹಾಗಾಗಿ, 2014–15ನೇ ಸಾಲಿನಲ್ಲಿ ಸರ್ಕಾರ ಈ ಯೋಜನೆಯನ್ನು ಪ್ರಾರಂಭ ಮಾಡಿ, ಯಾವ ಮಟ್ಟದಲ್ಲಿ ಕೆಲಸ ಮಾಡತಕ್ಕಂಥದ್ದಕ್ಕೆ ಅವೊತ್ತಿನ ದಿವಸ ಉದ್ದೇಶ ಇಟ್ಟುಕೊಂಡಿತ್ತು, ಆ ಉದ್ದೇಶ ಇವೊತ್ತಿನ ದಿವಸ ಕಡಿಮೆಯಾಗುತ್ತಿದೆ. ಹಾಗಾಗಿ, ಈ ಎಲ್ಲಾ ಹೆಣ್ಣುಮಕ್ಕಳಿಗೆ ಸರಿಯಾದ ರೀತಿಯಲ್ಲಿ ಸವಲತ್ತುಗಳನ್ನು ಒದಗಿಸುವುದಕ್ಕೆ ಇನ್ನು ಮುಂದೆ ಸರ್ಕಾರದವರು ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಂಬ ಬಗ್ಗೆ ದಯಮಾಡಿ ತಿಳಿಸಬೇಕು.

**ಶ್ರೀ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಇಲಾಖೆಯಿಂದ ಕೊಡುವಂತಹ ಒಂದು ಸಹಾಯಧನ ಇರಬಹುದು ಅದರ ಜೊತೆಗೆ ಬ್ಯಾಂಕ್ ಲಿಂಕೇಜ್ ಎಂದು ಏನು ಮಾಡಿದ್ದೇವೆ, ಅದರಲ್ಲಿ ಎಷ್ಟು ಹಣ ಉಳಿತಾಯ ಮಾಡಿರುತ್ತಾರೆ ಆ ಬ್ಯಾಂಕುಗಳಿಂದ ಅವರಿಗೆ ಸಾಲ ನೀಡುವಂತಹ ಯೋಜನೆಗಳನ್ನು ಹಾಕಿಕೊಂಡಿರುತ್ತೇವೆ. ಇದರ ಜೊತೆಗೆ ಆ ಸಾಲಗಳ ಮೇಲೆ

ಇರುವಂತಹ ಶೇಕಡ 6ರಷ್ಟು ಬಡ್ಡಿಯನ್ನು, ನಮ್ಮ ಇಲಾಖೆಯಿಂದ ಭರಿಸುವಂತಹ ಕೆಲಸವನ್ನು ಸಹ ಮಾಡುತ್ತಿರುತ್ತೇವೆ. ಮಹಿಳಾ ಅಭಿವೃದ್ಧಿ ನಿಗಮದಿಂದ ಎಸ್.ಸಿ./ಎಸ್.ಟಿ. ಮಹಿಳಾ ಸ್ವ-ಸಹಾಯ ಗುಂಪುಗಳಿಗೆ 3 ಲಕ್ಷ ರೂಪಾಯಿಗಳಗೆ ಸಾಲ ಸೌಲಭ್ಯ ಇದ್ದು, ಅದರ ಮೇಲಿನ ಬಡ್ಡಿಯನ್ನು ನಮ್ಮ ಇಲಾಖೆಯಿಂದಲೇ ಭರಿಸುತ್ತೇವೆ ಹಾಗೂ ಜನರಲ್ ಕೆಟಗರಿಯವರಿಗೆ 2 ಲಕ್ಷ ರೂಪಾಯಿಗಳವರೆಗೂ ಸಾಲ ನೀಡುವಂತಹ ಯೋಜನೆ ಇರುತ್ತದೆ. ನಮ್ಮ ಇಲಾಖೆಯ ಜೊತೆಗೆ, ಬ್ಯಾಂಕ್‌ಗಳ ಸಾಲ ಇರಬಹುದು ಅಥವಾ ಮಹಿಳಾ ಅಭಿವೃದ್ಧಿ ನಿಗಮದಿಂದ ನೀಡುವಂತಹ ಸಾಲಸೌಲಭ್ಯ ಇರಬಹುದು ಇವುಗಳಿಂದ ಸುಮಾರು 12,514.70/- ಕೋಟಿ ರೂಪಾಯಿಗಳನ್ನು ಈಗಾಗಲೇ ಅವರು ಉಳಿತಾಯ ಮಾಡಿರುತ್ತಾರೆ. ಹಾಗಾಗಿ, ಈ ಸ್ವ-ಸಹಾಯ ಗುಂಪುಗಳು ಚೆನ್ನಾಗಿ ನಡೆಯುತ್ತಿರುತ್ತವೆ. ಅಲ್ಲದೇ, ಸುಮಾರು 10,100/- ಕೋಟಿ ರೂಪಾಯಿಗಳ ಸಾಲವನ್ನು ಬ್ಯಾಂಕ್ ಲಿಂಕೇಜ್ ಅಥವಾ ಬೇರೆ ಬೇರೆ ವಿಭಾಗಗಳಿಂದ ಕೊಡುವಂಥದ್ದನ್ನು ನಾವು ಮಾಡಿರುತ್ತೇವೆ. ಇದರ ಜೊತೆಗೆ, ಮಾನ್ಯ ಸದಸ್ಯರು ಈ ಬಗ್ಗೆ ಸಮೀಕ್ಷೆಯನ್ನು ಮಾಡಲಾಗಿದೆಯೇ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದು, ಅದು ಬಹಳ ಮುಖ್ಯವಾದ ಅಂಶವಾಗಿರುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಈ ಬಗೆ ಒಳ್ಳೆಯ ಸಲಹೆಗಳನ್ನು ಹೇಳಿದ್ದು, ಅವುಗಳನ್ನು ಪರಿಶೀಲಿಸಿ.

**ಶ್ರೀ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆಗಳು ಬಹಳ ಯೋಗ್ಯವಾಗಿರುವುದರಿಂದ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಅಲ್ಲದೇ, ಇದರಿಂದ ನಮ್ಮ ರಾಜ್ಯದಲ್ಲಿ ಎಷ್ಟು ಮಹಿಳಾ ಸ್ವ-ಸಹಾಯ ಗುಂಪುಗಳಿವೆ ಮತ್ತು ಅವುಗಳ ವ್ಯವಸ್ಥೆ ಹೇಗಿದೆ ಎಂಬುದು ತಿಳಿಯುವುದಕ್ಕೆ ಸಹಾಯವಾಗುತ್ತದೆ. ಹಾಗಾಗಿ, ಆ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ ಮತ್ತು ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಈಗ ಶ್ರೀ ಅರುಣ ಶಹಾಪುರರವರ ಪ್ರಶ್ನೆ. ಅವರ ಪರವಾಗಿ ಶ್ರೀ ಹಣಮಂತ ನಿರಾಣಿಯವರು ಕೇಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ‚ಣಠಿಠಿಟಜಟಜಟಣಚಿಡಿಥಿ ಅಲ್ಲ. ದಯಮಾಡಿ ಕೇಳಿ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮೊದಲು ಮುಗಿಯಲಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಎದ್ದು ನಿಂತಾಗ ಏತಕ್ಕೆ ವಿರೋಧ ಮಾಡುತ್ತೀರಿ?

**ಸಭಾಪತಿಯವರು:-** ಇದರಲ್ಲಿ ಪ್ರಶ್ನೆ ಮಾಡುವುದು ಏನಿದೆ?

**Sri S.R. PATIL:-** I am not asking a supplementary question.

**ಸಭಾಪತಿಯವರು:-** ಆಯಿತು ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೋಪಾಲಸ್ವಾಮಿಯವರು ಕೇಳಿದಂತಹ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ ಎಂದು ಹೇಳಿರುತ್ತಾರೆ. ಆದರೆ, ಇದು ಆಲಿಕಲ್ಲು ಮಳೆಯಿಂದ ಬೆಳೆ ಹಾನಿಯಾಗಿರುವ ಬಗ್ಗೆ ಪ್ರಶ್ನೆ ಕೇಳಿರುತ್ತಾರೆ. ಆ ಬೆಳೆ ಹಾನಿ ಅತಿವೃಷ್ಠಿ ಅಥವಾ ಅನಾವೃಷ್ಠಿಯಿಂದ ಆಗಿದ್ದರೂ ಸಹ, ಇದರಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಇದ್ದು, ಜಂಟಿಯಾಗಿಯೇ ಅದನ್ನು ಸರ್ವೆ ಮಾಡುತ್ತಾರೆ.

**ಸಭಾಪತಿಯವರು:-** ನಾನು ಕೂಡ ಈ ಮಾತನ್ನು ಹೇಳಿರುತ್ತೇನೆ. ಆದರೆ, ತಾವು ಗಮನಿಸಿರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಉದಾಹರಣೆಗೆ ದಾಳಿಂಬೆ ಬೆಳೆ ಎಷ್ಟು ಹಾನಿಯಾಗಿದೆ ಎಂಬ ಬಗ್ಗೆ ತೋಟಗಾರಿಕೆ ಇಲಾಖೆಯವರೇ ಹೇಳಬೇಕಾಗುತ್ತದೆ. ಅದೇ ರೀತಿ ಜೋಳದ ಬೆಳೆ ಎಷ್ಟು ಹಾನಿಯಾಗಿದೆ ಎಂಬ ಬಗ್ಗೆ ಕೃಷಿ ಇಲಾಖೆಯವರೇ ಹೇಳಬೇಕಾಗುತ್ತದೆ. ಆ ಕೃಷಿ ಉತ್ಪನ್ನಗಳು ಮತ್ತು ಅವುಗಳ ಬೆಲೆಯ ವಿಚಾರ ವಿಲೇಜ್ ಅಕೌಂಟೆಂಟ್‌ಗಳಿಗೆ ಗೊತ್ತಾಗುವುದಿಲ್ಲ.

**ಶ್ರೀ ಎಂ.ಎ. ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಲ್ಲಿ ಸ್ಥಳೀಯವಾಗಿ ತಾಲ್ಲೂಕು ಅಧಿಕಾರಿಗಳು ಇರುತ್ತಾರೆ...

**ಸಭಾಪತಿಯವರು:-** ನಾನು ಕೂಡ ಈ ಮಾತನ್ನು ಹೇಳಿರುತ್ತೇನೆ. ಆದರೆ, ತಾವು ಕೇಳಿರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿರುವುದು ಸರಿಯಲ್ಲ. ಇದರಲ್ಲಿ ಕೃಷಿ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಸರ್ವೆ ಮಾಡಬೇಕಾಗಿರುವುದರಿಂದ, ಕೃಷಿ ಇಲಾಖೆಗೆ ಮಾಹಿತಿ ಇರದೇ ಇದ್ದರೆ ಅದನ್ನು ತರಿಸಿಕೊಂಡು ಅವರೇ ಈ ಸದನದಲ್ಲಿ ಉತ್ತರ ಹೇಳಬೇಕು. ಇದು ನನ್ನ ಜಿಜ್ಞಾಸೆಯಾಗಿರುತ್ತದೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಬೆಳೆ ಹಾನಿ ಆಗಿ ಕೇವಲ ಒಂದು ತಿಂಗಳು ಆಗಿರುತ್ತದೆ. ಮಾನ್ಯ ಸಚಿವರೂ ಕೂಡ ಸದನದಲ್ಲಿಯೇ ಇದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಗೋಪಾಲಸ್ವಾಮಿಯವರು ಕೇಳಿರುವ ಪ್ರಶ್ನೆ ಸರಿಯಾಗಿದೆ. ಅಲ್ಲದೇ, ಅವರ ಹೆಸರಿನಲ್ಲಿಯೇ ಅದು print ಆಗಿರುತ್ತದೆ. ಆದಾಗ್ಯೂ, ಈ ಪ್ರಶ್ನೆ ಪ್ರಿಂಟ್ ಆಗುವ ಮೊದಲೇ ಇದನ್ನು ಪರಿಶೀಲಿಸಬಹುದಾಗಿತ್ತು. ಒಂದು ವೇಳೆ ಮಾನ್ಯ ಸದಸ್ಯರು ಪ್ರಶ್ನೆ ಕೇಳುವಂತಹ ಸಂದರ್ಭದಲ್ಲಿ ಇಲಾಖೆಯನ್ನು ತಪ್ಪಾಗಿ ನಮೂದಿಸಿದ್ದರೆ ಅದನ್ನು ಸರ್ಕಾರದವರೇ ಸರಿ ಮಾಡಿ, ಅದನ್ನು ಸಂಬಂಧಪಟ್ಟ ಇಲಾಖೆಗೆ ಅವರೇ ಕಳುಹಿಸಿಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ...

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೂಡ ಇಲ್ಲಿಯೇ ಇದ್ದಾರೆ. ಅವರು ನನ್ನ ಪ್ರಶ್ನೆಗೆ ಸಂಬಂಧಿಸಿದಂತೆ, ಕನಿಷ್ಠ ಮಾಹಿತಿ ಒದಗಿಸಬಹುದಲ್ಲವೇ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ವರ್ಗಾವಣೆ ಆಗುವಂತಹ ಪ್ರಶ್ನೆಯೇ ಇರುವುದಿಲ್ಲ. ಏಕೆಂದರೆ, ಇದು ಪ್ರಶ್ನೆಗಳ ಪಟ್ಟಿಯಲ್ಲಿ print ಆಗಿರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಸದನದಲ್ಲಿ ಹಿಂದೆ ನಡೆದಿರುವಂತಹ ಪದ್ಧತಿಗಳು ತಮಗೆ ಗೊತ್ತಿರುತ್ತವೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಈ ಪ್ರಶ್ನೆ ವರ್ಗಾವಣೆಯಾಗಿದೆಯೆಂದು ಹೇಳುತ್ತಿದ್ದಾರೆ. ನನಗೆ ಕೆಲವು ವಿಷಯಗಳು ತಿಳಿಯುವುದಿಲ್ಲ. ಹಾಗಾಗಿ, ಅದನ್ನು ತಾವುಗಳು ನಮಗೆ ತಿಳಿಸಿ ಹೇಳಿ ಅಥವಾ ನಮಗೆ ಜ್ಞಾನ ಕಡಿಮೆ ಇದೆಯೆಂದಾದರೂ ತಿಳಿದುಕೊಳ್ಳಿ.

**ಸಭಾಪತಿಯವರು:–** ಈ ಬಗ್ಗೆ ನಾನು ಏನು ಹೇಳಿದ್ದೆನೆಂದರೆ, ಈ ಪ್ರಶ್ನೆಯಲ್ಲಿರುವ ವಿಷಯದ ಬಗ್ಗೆ ಕೃಷಿ ಇಲಾಖೆಯವರು ನೋಡಬೇಕೆಂದು ಹೇಳಿರುತ್ತೇನೆ. ಅದಕ್ಕಾಗಿ, ತಾವು ಕಡತ ತೆಗೆಸಿ ಪರಿಶೀಲಿಸಬಹುದು. ಇನ್ನು ಮುಂದೆ ಈ ರೀತಿಯ ತಪ್ಪುಗಳು ಆಗದ ರೀತಿಯಲ್ಲಿ ಸಭಾನಾಯಕರು/ಸರ್ಕಾರ ನೋಡಿಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಆ ಪೀಠದಿಂದ ಕೊಟ್ಟಂತಹ ರೂಲಿಂಗ್ ಅನ್ನು ನಾವು ಒಪ್ಪುತ್ತೇವೆ. ಆದರೆ, ಇದು ಬೆಳೆ ಹಾನಿಗೆ ಸಂಬಂಧಿಸಿದ ವಿಷಯವಾಗಿದೆ.

**ಸಭಾಪತಿಯವರು:-** ತಾವು ಹೇಳುವುದನ್ನು ನಾನು ಕೂಡ ಒಪ್ಪುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಕೂಡ ಒಬ್ಬ ರೈತ. ನನ್ನ ಜಮೀನಿನಲ್ಲಿ ಎಷ್ಟು ಬೆಳೆ ಹಾನಿಯಾಗಿದೆ ಎನ್ನುವುದರ ಬಗ್ಗೆ ಕೃಷಿ ಇಲಾಖೆಯವರೇ ಹೇಳಬೇಕು. ಹಾಗಾಗಿ, ಈ ಪ್ರಶ್ನೆಗೆ ಸಂಬಂಧಪಟ್ಟ ಮಾಹಿತಿಯನ್ನು collect ಮಾಡಿ, ಇವೊತ್ತಿನ ದಿನವೇ ಉತ್ತರ ಹೇಳಬೇಕು. ಇವೊತ್ತಿನ ದಿವಸ ಏನೋ ಅಚಾತುರ್ಯವಾಗಿದೆ. ಆದರೆ, ಇನ್ನು ಮುಂದೆ ಈ ರೀತಿ ಆಗಬಾರದೆಂಬ ಉದ್ದೇಶದಿಂದ ನಾನು ಎದ್ದು ನಿಂತು ಮಾತನಾಡುತ್ತಿದ್ದೇನೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರು ಇದಕ್ಕೆ ಸಂಬಂಧಪಟ್ಟಂತೆ, ಎಷ್ಟು ಬೆಳೆ ಹಾನಿಯಾಗಿದೆ ಮತ್ತು ಅದರಿಂದ ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಕನಿಷ್ಠ ಮಾಹಿತಿಯನ್ನಾದರೂ ಒದಗಿಸಬಹುದು.

**(ಗೊಂದಲ)**

**ಶ್ರೀ ಬಿ.ಸಿ. ಪಾಟೀಲ್(ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಸಂಬಂಧಿಸಿದಂತೆ ನಾನು ಉತ್ತರ ಕೊಡುತ್ತಿದ್ದೆನು. ಆದರೆ, ಇದರಲ್ಲಿ ಬೆಳೆ ಹಾನಿ ನಷ್ಟಕ್ಕಾಗಿ ಕಂದಾಯ ಇಲಾಖೆ ಪರಿಹಾರ ಕೊಡುವ ದೃಷ್ಠಿಯಿಂದ...

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಪರಿಹಾರ ಕೊಡುವುದು ಕಂದಾಯ ಇಲಾಖೆಯವರು. ಆದರೆ, ಅವರಿಗೆ estimation ಕೊಡಬೇಕಾಗಿರುವುದು ಕೃಷಿ ಇಲಾಖೆಯವರು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ...

**ಶ್ರೀ ಎಂ.ಎ. ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೂ ಕೂಡ ಈ ಸದನದಲ್ಲಿ ಇದ್ದಾರೆ. ಹಾಸನ ಜಿಲ್ಲೆ, ಕೊಡಗು ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆ ಈ ಮೂರು ಜಿಲ್ಲೆಗಳಿಗೆ

ಬೆಳೆ ಹಾನಿಯಿಂದ ಅನ್ಯಾಯವಾಗಿದೆ. ಈ ಬಗ್ಗೆ ಮಾನ್ಯ ಸಚಿವರು 10 ನಿಮಿಷ ಉತ್ತರ ಹೇಳುವುದರಲ್ಲಿ ಏನು ತಪ್ಪಿದೆ?

**ಸಭಾಪತಿಯವರು:–** ಮಾನ್ಯ ಗೋಪಾಲಸ್ವಾಮಿಯವರೇ, ಒಂದು ನಿಮಿಷ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರದವರು ಏನು ಹೇಳಿದರೂ ಸುಮ್ಮನೆ ಕೇಳಿಕೊಂಡು ಹೋಗುವುದಕ್ಕೆ ನಾವು ಈ ಸದನಕ್ಕೆ ಬಂದಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪಾಟೀಲರೇ, ಒಂದು ನಿಮಿಷ...

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ನಾವು ಈ ಸದನಕ್ಕೆ ಪುರಾಣ ಕೇಳುವುದಕ್ಕೆ ಬಂದಿದ್ದೇವೆಯೇ ಅಥವಾ ಪ್ರವಚನ ಕೇಳುವುದಕ್ಕೆ ಬಂದಿದ್ದೇವೆಯೇ?

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆಗಿರುವ ಬೆಳೆ ಹಾನಿ ಬಗ್ಗೆ ಗೊತ್ತಿಲ್ಲದೇ ಇದ್ದರೆ, ಇದರಲ್ಲಿ ಬೇರೆ ಇಲಾಖೆಯವರು ಹೇಳುವುದಕ್ಕೆ ಏನಿದೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೃಷಿ ಇಲಾಖೆಗೆ ಸಂಬಂಧಪಟ್ಟ ವಿಷಯದಲ್ಲಿ ಆಗಿರುವ ಬೆಳೆ ಹಾನಿಗೆ ಕಂದಾಯ ಇಲಾಖೆಯವರು ಪರಿಹಾರ ಕೊಡಬೇಕಾಗಿರುವುದರಿಂದ, ಈ ಪ್ರಶ್ನೆಯನ್ನು ವರ್ಗಾವಣೆ ಮಾಡಲಾಗಿರುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪರಿಹಾರವನ್ನು ಕಂದಾಯ ಇಲಾಖೆಯವರು ಕೊಡಲಿ, ಆದರೆ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, Hon'ble Minister of Agriculture should get the information from the Revenue Department. ಅದನ್ನು update ಮಾಡಿ ಉತ್ತರ ಹೇಳಬೇಕು. **(ಗೊಂದಲ)** ನಾವು ಈ ಸದನಕ್ಕೆ ಪುರಾಣ ಕೇಳುವುದಕ್ಕೆ ಅಥವಾ ಪ್ರವಚನ ಕೇಳುವುದಕ್ಕೆ ಬಂದಿದ್ದೇವೆಯೇ? ಇದನ್ನು ಸರಿಪಡಿಸಬೇಕೆಂದು ನಾನು ಮಾನ್ಯ ಸಭಾಪತಿಯವರಲ್ಲಿ ಮನವಿ ಮಾಡಿಕೊಂಡಿದ್ದೇನೆ. ಈ ರೀತಿ ಆಗಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ.

**(ಗೊಂದಲ)**

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ನಾನು ತಯಾರಿದ್ದೇನೆ. ಆದರೆ,...

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ರೀತಿ ಆಗಬಾರದು. It has been printed in the name of the Minister of Agriculture. ಇಲ್ಲಿ ಬಂದು ಆ ಪ್ರಶ್ನೆ ವರ್ಗಾವಣೆಯಾಗಿದೆಯೆಂದು ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿದಂತೆ, ಆ ಪ್ರಶ್ನೆಗೆ ಸಂಬಂಧಪಟ್ಟ ವರದಿಯನ್ನು ತರಿಸಿಕೊಂಡು... **(ಗೊಂದಲ)** ಅವರು ಯಾವುದೋ ಕೋಪವನ್ನು ಇಲ್ಲಿ ತೋರಿಸುತ್ತಿದ್ದಾರೆ. ಪ್ರಶ್ನೆಗಳು ಕಾಲಕಾಲಕ್ಕೆ ಯಾವರೀತಿ ಮುದ್ರಣವಾಗಬೇಕೆಂಬ ಬಗ್ಗೆ ಮೊದಲೇ ನಿಗದಿಯಾಗಿರುತ್ತದೆ. ಹೆಚ್ಚು ಅಂಶಗಳು ಯಾವ ಇಲಾಖೆಗೆ ಬರುತ್ತದೆಯೋ ಆ ಇಲಾಖೆಗೆ ಪ್ರಶ್ನೆಯನ್ನು ವರ್ಗಾವಣೆ ಮಾಡುವುದು ಮೊದಲಿನಿಂದಲೂ ಬಂದಿರುವ ರೂಢಿಯಾಗಿರುತ್ತದೆ. ಆದಾಗ್ಯೂ, ಪ್ರತಿಪಕ್ಷದವರು ಇದುವರೆವಿಗೂ ಏನು ಹೇಳಿದ್ದಾರೆ, ಅದರಂತೆ ಸದರಿ ಪ್ರಶ್ನೆ ಯಾವ ಇಲಾಖೆಗೆ ಹೋಗಿರುತ್ತದೆ, ಆ ಇಲಾಖೆಯಿಂದ ವರದಿ ತರಿಸಿಕೊಂಡು ಮುಂದಿನ ವಾರ ಉತ್ತರ ಕೊಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದನ್ನು ಇವರೇ ಕಳುಹಿಸಬೇಕು. It is the duty of the Minister of Agriculture. ಮಾನ್ಯ ಕೃಷಿ ಸಚಿವರು ಮಾಹಿತಿ ಪಡೆದು ಉತ್ತರ ನೀಡಬೇಕು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಮಾತನಾಡುವುದು ಕಡತಕ್ಕೆ ಹೋಗಬಾರದು. ನಾನು ಯಾವ ಸದಸ್ಯರಿಗೆ allow ಮಾಡಿದ್ದೇನೆ, ಅದು ಮಾತ್ರ ಕಡತಕ್ಕೆ ಹೋಗಬೇಕು. ಎಲ್ಲರೂ ಎದ್ದು ನಿಂತು ಮಾತನಾಡಿದ್ದು ಕಡತಕ್ಕೆ ಹೋಗಬಾರದು. ನನ್ನ ಅನುಮತಿ ಇಲ್ಲದೇ, ಮಾತನಾಡುವುದನ್ನು ನಾನು ಒಪ್ಪುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ನಡೆವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕಡತಕ್ಕೆ ಹೋಗಬೇಕು ಅಥವಾ ಬೇಡ ಎಂಬ subject ಅಲ್ಲ ಇದು.

**ಸಭಾಪತಿಯವರು:-** ತಾವು ಮಾತನಾಡಿದ್ದನ್ನು ಕೇಳುವುದಕ್ಕಾದರೂ ನನಗೆ ಅವಕಾಶ ನೀಡಿ. ಇದರಲ್ಲಿ ಒಂದೇ ಬಾರಿ ಹತ್ತು ಮಂದಿ ಎದ್ದು ನಿಂತು ಮಾತನಾಡುವುದು ಏನಿದೆ? ಯಾರಾದರೂ ಒಬ್ಬರು ಮಾತನಾಡಿ. **(ಗೊಂದಲ)** ಸದನದಲ್ಲಿ ಹೇಗೆ ಮಾತನಾಡಬೇಕು?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಯಮಬದ್ಧವಾಗಿ ಸದನ ನಡೆಯಬೇಕೆಂದು....

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಪ್ರತಾಪಚಂದ್ರ ಶೆಟ್ಟರು ಸಹ ಈ ಹಿಂದೆ ಸಭಾಪತಿಗಳಾಗಿದ್ದವರು. ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಪ್ರಶ್ನೆಗಳು ವರ್ಗಾವಣೆ ಆಗುವುದು ಹೊಸ ಪದ್ಧತಿಯೇ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಪುರಾಣ, ಪ್ರವಚನಗಳನ್ನು ಹೇಳಿದರೆ ನಾವು ಕೇಳುವುದಿಲ್ಲ. ಇದು ಸದನ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿನಾಕಾರಣ ಜಗಳ ಮಾಡುವುದು ಯಾವ ನ್ಯಾಯ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ದಯಮಾಡಿ ತಾವು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ, ಏನು ಮಾಡಬೇಕೆಂದು ತಾವೇ ಹೇಳಿ. ಜೊತೆಗೆ, ತಮ್ಮ ಪ್ರತಿಪಕ್ಷದ ಸದಸ್ಯರನ್ನು ಕುಳಿತುಕೊಳ್ಳುವಂತೆ ತಾವು ಹೇಳಬೇಕು. ದಯವಿಟ್ಟು ಮಧ್ಯೆ ಯಾರೂ ಮಾತನಾಡಬೇಡಿ.

**(ಮುಂದು)**

**(296) 05.03.2021 11.30 ವೈಎಲ್-ಎಂಡಿ(ವಿಕೆ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಆಲಿಕಲ್ಲು ಮಳೆಯಿಂದಾಗಿ ಬೆಳೆಗಳು ಹಾನಿಯಾಗಿದ್ದು, ಅಂದಾಜು ಎಷ್ಟು ಬೆಳೆಗಳು ಹಾನಿಯಾಗಿದೆ ಎಂಬುದನ್ನು ಮಾನ್ಯ ಗೋಪಾಲಸ್ವಾಮಿಯವರು ಕೇಳಿದ್ದಾರೆ. ನಾನು ಸಹ ಸಚಿವನಾಗಿ ಕರ್ತವ್ಯ ನಿರ್ವಹಿಸಿದ್ದು, ನನ್ನ ಅನುಭವದ ಪ್ರಕಾರ ಕೃಷಿ ಇಲಾಖೆ ಮತ್ತು ಕಂದಾಯ ಇಲಾಖೆಯವರು ಜಂಟಿಯಾಗಿ ಸರ್ವೇ ಮಾಡುತ್ತಾರೆ. ಸರ್ವೇ ಮಾಡಿದ ನಂತರ ಎಷ್ಟು ಬೆಳೆಗಳಿಗೆ ಹಾನಿಯಾಗಿದೆ ಎಂಬುದನ್ನು ಅಂದಾಜು ಮಾಡುತ್ತಾರೆ. ಕಂದಾಯ ಇಲಾಖೆಯವರು ಹಣವನ್ನು ಭರಿಸುತ್ತಾರೆ. ಇದರ ಬಗ್ಗೆ ಏನಾಗಿದೆ ಎಂಬುದರ ಮಾಹಿತಿಯನ್ನು ಕೃಷಿ ಇಲಾಖೆಯವರು ತರಿಸಿಕೊಳ್ಳಬೇಕಲ್ಲವೇ? Minister of

Agriculture is holding a responsible post. ಕೃಷಿ ಪ್ರಧಾನ ದೇಶದಲ್ಲಿ ಕೃಷಿ ಇಲಾಖೆಗೆ ಬಹಳ ಮಹತ್ವ ಇದೆ. ಈ ವಿಷಯ ಕೃಷಿ ಸಚಿವರಿಗೆ ಸಂಬಂಧಪಟ್ಟಿರುವುದರಿಂದ ಆಲಿಕಲ್ಲಿನಿಂದಾಗಿ ರೈತರಿಗೆ ಎಷ್ಟು ಬೆಳೆಗಳು ಹಾನಿಯಾಗಿದೆ ಎಂಬುದನ್ನು ಕಂದಾಯ ಇಲಾಖೆಯಿಂದ ಮಾಹಿತಿಯನ್ನು ಸಂಗ್ರಹಿಸಿ ಇಲ್ಲಿ ಉತ್ತರವನ್ನು ನೀಡಬೇಕು. ಅದನ್ನು ಬಿಟ್ಟು ಈಗಾಗಲೇ ಪ್ರಶ್ನೆ ಮುದ್ರಣವಾಗಿದ್ದು, ಮಾನ್ಯ ಸದಸ್ಯರು ಸಹ ಸರ್ಕಾರದವರು ಉತ್ತರ ನೀಡುತ್ತಾರೆ ಎಂದು ಸದನದಲ್ಲಿ ಬಂದು ಕುಳಿತು ಕಾಯುತ್ತಿದ್ದಾರೆ. ಆದರೆ, ಕೃಷಿ ಇಲಾಖೆಯವರು ನಮ್ಮ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ ಎನ್ನುವಂತಹ ಉತ್ತರವನ್ನು ನೀಡುತ್ತಿದ್ದಾರೆ. ಅಪರೂಪಕ್ಕೆ ಅಧಿವೇಶನ ನಡೆಯುತ್ತಿದ್ದು, ಅಪರೂಪಕ್ಕೆ ನಾವು ಕೇಳುವ ಪ್ರಶ್ನೆ ಬ್ಯಾಲೆಟ್‌ನಲ್ಲಿ ಬರುತ್ತದೆ. ಹಾಗಾಗಿ ಸದಸ್ಯರಿಗೆ ಅದರ ನ್ಯಾಯವು ದೊರಯಲಿಲ್ಲವೆಂದರೆ, ಸದನಕ್ಕೆ ಬರುವ ಉದ್ದೇಶವೇನು?

**ಸಭಾಪತಿಯವರು:-** ಆಗಲಿ, ಸರ್ಕಾರದಿಂದ ತಪ್ಪಾಗಿದೆ. ಇನ್ನು ಮುಂದೆ ಇಂತಹ ತಪ್ಪುಗಳು ನಡೆಯದಂತೆ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ಹೇಳುತ್ತೇನೆ. ದಯವಿಟ್ಟು ಮುಂದೆ ಈ ರೀತಿ ಮಾಡಬೇಡಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು)**

ಸಭಾಪತಿಯವರು:- ಶ್ರೀ ಎಂ.ನಾರಾಯಣಸ್ವಾಮಿಯವರು ಮಾತನಾಡಿದ್ದು ದಾಖಲೆಗೆ ಹೋಗತಕ್ಕದ್ದಲ್ಲ.

**(ಈ ಹಂತದಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಮಾತನಾಡಿದ್ದನ್ನು ಮಾನ್ಯ ಸಭಾಪತಿಯವರ ಆದೇಶಾನುಸಾರ ದಾಖಲಿಸಿರುವುದಿಲ್ಲ)**

**ಪ್ರಶ್ನೆ ಸಂಖ್ಯೆ 829**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) (ಶ್ರೀ ಅರುಣ ಶಹಾಪುರರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಆಲಮೇಲದಲ್ಲಿ ಹೊಸ ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು 'ಕಾಲೇಜು ಪ್ರಾರಂಭಿಸುವ ಪ್ರಶ್ನೆಯನ್ನು ಸದ್ಯಕ್ಕೆ ಸರ್ಕಾರ ಮುಂದೂಡಿದೆ' ಎನ್ನುವಂಥ ಉತ್ತರವನ್ನು ನೀಡಿದ್ದಾರೆ. ದಯವಿಟ್ಟು ಈ ಮುಂದೂಡಿರುವ ಕಾಲೇಜನ್ನು ಇದೇ ವರ್ಷದಲ್ಲಿ ಪ್ರಾರಂಭಿಸುವ ನಿರ್ಧಾರವನ್ನು ತೆಗೆದುಕೊಳ್ಳಬೇಕು. ವಿಜಯಪುರ ಜಿಲ್ಲೆ ಅತ್ಯಂತ ಪ್ರತಿಷ್ಠಿತ ಜಿಲ್ಲೆಯಾಗಿದ್ದು, ಈ ಜಿಲ್ಲೆಯಲ್ಲಿ ಹೇರಳವಾಗಿ ದ್ರಾಕ್ಷಿ, ದಾಳಿಂಬೆ, ಸೀಬೆಹಣ್ಣು, ಸಪೋಟ ಅನೇಕ ತರಕಾರಿಗಳನ್ನು ಸಹ ಬೆಳೆಯುವಂಥ ಪ್ರದೇಶ ಇದ್ದಾಗಿದ್ದು, ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸುವ ಅವಶ್ಯಕತೆ ಬಹಳ ಇರುವ ಹಿನ್ನೆಲೆಯಲ್ಲಿ ಈಗಾಗಲೇ ಸರ್ಕಾರ ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸುವ ನಿರ್ಧಾರ ತೆಗೆದುಕೊಂಡಿತ್ತು. ಆದರೆ, ಮುಂದೂಡುವ ನಿರ್ಧಾರವನ್ನು ತೆಗೆದುಕೊಂಡಿರುವುದರಿಂದ ಆದಷ್ಟು ಬೇಗನೆ ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸಬೇಕಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದೇ ಬಜೆಟ್ ಅಧಿವೇಶನದಲ್ಲಿ ಯಾವಾಗ ಪ್ರಾರಂಭ ಮಾಡಲಾಗುತ್ತದೆ ಎಂಬುದರ ದಿನಾಂಕವನ್ನು ನಿಗದಿ ಮಾಡಬೇಕು. ಈಗಾಗಲೇ ಬಾಗಲಕೋಟೆ ಜಿಲ್ಲೆಯಲ್ಲಿ ವಿಶ್ವವಿದ್ಯಾಲಯಗಳು ಸಾಕಷ್ಟು ಉತ್ತಮ ಕಾರ್ಯವನ್ನು ಮಾಡುತ್ತಿದ್ದು, ಆ ಭಾಗದ ರೈತರಿಗೆ ಅನುಕೂಲವಾಗಿದೆ.

**ಶ್ರೀ ಆರ್.ಶಂಕರ್:-** ಮಾನ್ಯ ಸಭಾಪತಿಯವರೇ, ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ನಂತರ ಮಾನ್ಯ ಮುಖ್ಯಮಂತ್ರಿಗಳ ಬಳಿ ಚರ್ಚಿಸಿ, ಶೀಘ್ರ ಕ್ರಮಕೈಗೊಳ್ಳುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯಲ್ಲಿ ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಬೇಗನೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಹಿಂದಿನ ಸರ್ಕಾರದ ಸಚಿವರು ವಿಜಯಪುರ ಜಿಲ್ಲೆಯಲ್ಲಿ ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸಲು ತೀರ್ಮಾನ ಮಾಡಿದ್ದರು. ನನಗೂ ಆ ವಿಚಾರ ಗೊತ್ತಿದ್ದೆ. ಹಾಗಾಗಿ ಆದಷ್ಟು ಬೇಗ ಇಂತಹ ಜಿಲ್ಲೆಯಲ್ಲಿ ತೋಟಗಾರಿಕೆ ಕಾಲೇಜನ್ನು ಪ್ರಾರಂಭಿಸುವ ಅವಶ್ಯಕತೆ ಇದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಪ್ರಾರಂಭಿಸಿ.

**ಶ್ರೀ ಆರ್.ಶಂಕರ್:–** ಆಗಲಿ. ಇವತ್ತು ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾತನಾಡುತ್ತೇನೆ.

**ಪ್ರಶ್ನೆ ಸಂಖ್ಯೆ 774**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) (ಶ್ರೀ ಮರಿತಿಬ್ಬೇಗೌಡರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹಾಗೆಯೇ ತಮಗೂ ಸಹ ಗೊತ್ತಿರುವ ಹಾಗೆ ರಾಜ್ಯದಲ್ಲಿ ವಸತಿ ಶಾಲೆಗಳು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದು, ಒಳ್ಳೆಯ ಫಲಿತಾಂಶ ಸಹ ಬರುತ್ತಿದೆ. 100 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 08 ಮಾದರಿ ವಸತಿ ಶಾಲೆಗಳು (ನವೋದಯ), ಕೇವಲ 05 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಿವೆ. ಮೊದಲನೆಯದಾಗಿ, ಈ ಅಲ್ಪಸಂಖ್ಯಾತ ಶಾಲೆಗಳಿಗೆ ವಸತಿ ಶಿಕ್ಷಣ ಸಂಸ್ಥೆಯಿಂದ ನೇಮಕವಾದವರನ್ನು ವರ್ಗಾವಣೆ ಮಾಡಲಾಗಿದ್ದು, ಅವರ ಸೇವಾವಿಲೀನವನ್ನು ಏತಕ್ಕಾಗಿ ಮಾಡಿಲ್ಲ? ಸೇವಾವಿಲೀನ ಮಾಡದೇ ಇರುವುದರಿಂದ 10 ವರ್ಷಗಳು, 15 ವರ್ಷಗಳಿಗೆ ಬರುವಂಥ ಕಾಲಮಿತಿ ವೇತನ ಬಡ್ತಿಯನ್ನು ನೀಡಲು ಸಾಧ್ಯವಾಗಿಲ್ಲ. ಸೇವಾವಿಲೀನ ಮಾಡಿಲ್ಲದಿರುವುದರಿಂದ ಕಾಲಮಿತಿ ವೇತನ ಬಡ್ತಿಯನ್ನು ನೀಡಲು ಸಾಧ್ಯವಾಗಿಲ್ಲ ಎನ್ನುವಂಥ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಏತಕ್ಕಾಗಿ ಸೇವಾ ವಿಲೀನ ಮಾಡಿಲ್ಲ? ಎರಡನೆಯದಾಗಿ, ex-gratia ಅನ್ನು ಇಡೀ ಶಿಕ್ಷಣ ಇಲಾಖೆಯಲ್ಲಿ ಎಲ್ಲರಿಗೂ ನೀಡಿದ್ದಾರೆ. ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೂ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುವವರಿಗೆಲ್ಲಾ ex-gratia ನೀಡಲಾಗಿದೆ. ಆದರೆ, ಹಗಲು-ರಾತ್ರಿ ವಸತಿ ಶಾಲೆಯಲ್ಲಿ ಪಾಠ ಮಾಡುವಂಥವರಾಗಿದ್ದು, ಉತ್ತಮ ಗುಣಮಟ್ಟದ ಫಲಿತಾಂಶ ಹಾಗೂ ಒಳ್ಳೆಯ ಶಿಕ್ಷಣವನ್ನು ನೀಡುತ್ತಿದ್ದು, ಇವರಿಗೆ ex-gratia ನೀಡಿಲ್ಲ. ಕಾಲಮಿತಿ ವೇತನ ಬಡ್ತಿಯನ್ನು ನೀಡಬೇಕಾದರೆ, ಅವರ ಸೇವಾವಿಲೀನವಾಗಬೇಕಾಗಿದ್ದು, ಕೂಡಲೇ ಅವರ ಸೇವಾವಿಲೀನವನ್ನು ಮಾಡಬೇಕು. ಜೊತೆಗೆ ಎಲ್ಲರಿಗೂ ex-gratia ನೀಡಿದ್ದು, ಇವರಿಗೆ ಏತಕ್ಕೆ ನೀಡಲ್ಲ? ದಯವಿಟ್ಟು ಮಾನ್ಯ ಸಚಿವರು ಉತ್ತರ ನೀಡಬೇಕು.

ಶ್ರೀ **ಶ್ರೀಮಂತ ಬಾಳಸಾಹೇಬ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಅಥವಾ (ನವೋದಯ) ಮಾದರಿ ವಸತಿ ಶಾಲೆಗಳೇನಿವೆ, ಈ ಶಾಲೆ 2016-17ನೇ ಸಾಲಿನಲ್ಲಿ ಪ್ರಾರಂಭಗೊಂಡು ನಮ್ಮ ಇಲಾಖೆ ವ್ಯಾಪ್ತಿಗೆ ಬಂದಿದೆ. ಯಾರೂ ಸಹ 10 ವರ್ಷಗಳು ಸೇವೆಯನ್ನು ಪೂರೈಸದೇ ಇರುವುದರಿಂದ ಕಾಲಮಿತಿ ವೇತನ ಬಡ್ತಿ ನೀಡುವುದಕ್ಕೆ ಅನ್ವಯಿಸುವುದಿಲ್ಲ. ಉಳಿದ ವಿಷಯಕ್ಕೆ ಸಂಬಂಧಿಸಿದಂತೆ, 05 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳನ್ನು ಸುಮಾರು ವರ್ಷಗಳ ಹಿಂದೆ ಯಾವುದೋ ಟ್ರಸ್ಟ್‌ನವರು ನಡೆಸುತ್ತಿದ್ದರು. ನಂತರ 05 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳನ್ನು

ಸರ್ಕಾರದ ವಶಕ್ಕೆ ಪಡೆದುಕೊಂಡು, ಶಿಕ್ಷಣ ಇಲಾಖೆಯವರು ನಡೆಸುವಂತೆ ಮಾಡಲಾಗಿತ್ತು. ತದನಂತರ ಈ ಶಾಲೆಗಳು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬಂತು. ಕ್ರಮೇಣವಾಗಿ ಅಲ್ಪಸಂಖ್ಯಾತರ ಇಲಾಖೆ ವ್ಯಾಪ್ತಿಗೆ ಬಂದಿದ್ದು, ಸುಮಾರು 7-8 ವರ್ಷದಿಂದ ನಮ್ಮ ಇಲಾಖೆಯವರು ಆ ಶಾಲೆಗಳನ್ನು ನಡೆಸುತ್ತಿದ್ದಾರೆ. ಆ ಶಾಲೆಗಳಿಗೆ staff ಗಳಿಗೆ salary ಯನ್ನು grant-in-aid ಹಣವನ್ನು ಭರಿಸುತ್ತಿದ್ದಾರೆ. ಹಾಗಾಗಿ ನಮ್ಮಲ್ಲಿ ಇಲ್ಲಿಯವರೆಗೂ ವಿಲೀನವಾಗಿರುವುದಿಲ್ಲ. ಒಂದೆರಡು ಸಲ ಪ್ರಯತ್ನ ಮಾಡಲಾಗಿತ್ತು. ಆದರೆ, ಅದರಿಂದ ತಿರಸ್ಕೃತಗೊಂಡಿರುತ್ತದೆ. ಮತ್ತೊಮ್ಮೆ ಅದರ ಕಡೆ ಗಮನಹರಿಸಿ, ಕಾಲಮಿತಿ ವೇತನ ಬಡ್ತಿ ನೀಡುವ ವ್ಯವಸ್ಥೆಯ ಬಗ್ಗೆ ವಿಚಾರ ಮಾಡುವುದರ ಜೊತೆಗೆ ಪ್ರಯತ್ನವನ್ನು ಸಹ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ 2016-17ನೇ ಸಾಲಿನಲ್ಲಿ ಪ್ರಾರಂಭಗೊಂಡಿಲ್ಲ, 1994ನೇ ಸಾಲಿನಲ್ಲಿಯೇ ಪ್ರಾರಂಭಗೊಂಡಿದೆ. ಮಾನ್ಯ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಗಳಾಗಿದಂತಹ ಸಂದರ್ಭದಲ್ಲಿ ಮೊರಾರ್ಜಿ ದೇಸಾಯಿಯವರ ಹೆಸರಿನಲ್ಲಿ ವಸತಿ ಶಾಲೆಗಳನ್ನು ತೆರೆಯಲಾಗಿತ್ತು. ಬಹಳ ಹಿಂದೆಯೇ ಪ್ರಾರಂಭಗೊಂಡಿದೆ. ಹಾಗೆಯೇ ನೇಮಕಾತಿಯು ಸಹ ಬಹಳ ಹಿಂದೆಯೇ ಆಗಿರುತ್ತದೆ. ವಸತಿ ಶಿಕ್ಷಣ ಸಂಸ್ಥೆಯ ಮೂಲಕವೇ ಇವರು ನೇಮಕಗೊಂಡಿದ್ದು, ಸರ್ಕಾರದವರು ಇವರನ್ನು ಅಲ್ಪಸಂಖ್ಯಾತರ ಶಾಲೆಗೆ ಕಳುಹಿಸಿದರು. ಅಲ್ಲಿಗೆ ಕಳುಹಿಸಿದ ಮೇಲೆ ಇವರ ಸೇವಾವಿಲೀನವಾಗಲಿಲ್ಲ. They were appointed earlier and 10 ವರ್ಷಗಳು ಮುಟ್ಟಿದ್ದು, ಅವರಿಗೆ ಕಾಲಮಿತಿ ವೇತನ ಬಡ್ತಿ ಸಿಗಬೇಕಾಗಿತ್ತು. ಏತಕ್ಕಾಗಿ ಕಾಲಮಿತಿ ವೇತನ ಬಡ್ತಿ ಸಿಕ್ಕಿಲ್ಲವೆಂದರೆ, ಅವರ ಸೇವಾವಿಲೀನವನ್ನು ಮಾಡಿರುವುದಿಲ್ಲ. ಹಾಗಾಗಿ ಮೊದಲು ಅವರ ಸೇವಾವಿಲೀನವನ್ನು ಮಾಡಬೇಕು. ಸೇವಾವಿಲೀನವನ್ನು ಮಾಡಿದರೆ, ಅವರು ಕಾಲಮಿತಿ ವೇತನ ಬಡ್ತಿಗೆ ಅರ್ಹರಾಗುತ್ತಾರೆ. Ex-gratia ಸಂಬಂಧಿಸಿದಂತೆ, ವಿಶೇಷ ಭತ್ಯೆ ಎಂದು ಇಡೀ ಶಿಕ್ಷಣ ಇಲಾಖೆಯವರಿಗೆ ನೀಡಲಾಗಿದೆ. ಹಾಗಾಗಿ ಇವರಿಗೆ ನೀಡಲೇಬೇಕಾಗಿದ್ದು, ಇನ್ನು ಹೆಚ್ಚಿಗೆ ex-gratia ನೀಡಬೇಕು. Residential schools ನಲ್ಲಿರುವ ಶಿಕ್ಷಕರಿಗೆ ಬೇರೆ ಶಾಲೆಯ ಶಿಕ್ಷಕರಿಗಿಂತ ಹೆಚ್ಚಿಗೆ ಸಂಬಳ ನೀಡಬೇಕು. ಏಕೆಂದರೆ, ಇವರು ರೂ.4000, ರೂ.5000, ರೂ.6000 ಗಳಂತೆ ಕಡಿಮೆ ಸಂಬಳ ಪಡೆಯುತ್ತಿದ್ದಾರೆ. ಬೇರೆ ಪ್ರೌಢ ಶಾಲಾ ಶಿಕ್ಷಕರಿಗಿಂತ they are getting lessor salary than the other teachers. ಇವೆರಡು ಅನ್ಯಾಯವನ್ನು ಸರಿಪಡಿಸಬೇಕು. ಹಾಗಾಗಿ ಈಗಾಗಲೇ 10 ವರ್ಷಗಳು ಸೇವೆ ಪೂರೈಸಿರುವುದರಿಂದ ಸೇವಾವಿಲೀನಗೊಳಿಸಿ, ಅವರಿಗೆ ಕಾಲಮಿತಿ

ವೇತನ ಬಡ್ತಿ ಹಾಗೂ ex-gratia ನೀಡಬೇಕು. ದಯವಿಟ್ಟು ಅವುಗಳೆಲ್ಲವನ್ನು ಮಾಡುತ್ತೇವೆ ಎಂದು ಮಾನ್ಯ ಸಚಿವರು ಮಾತನ್ನು ನೀಡಬೇಕು.

**ಶ್ರೀ ಶ್ರೀಮಂತ ಬಾಳಸಾಹೇಬ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲು ಈ ಶಾಲೆಗಳನ್ನು ನಡೆಸುತ್ತಿದ್ದಾಗ, ಎಲ್ಲಾ ನೌಕರರು ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುತ್ತಾರೆ. ಸರ್ಕಾರದಿಂದ ಯಾವುದೇ ನೌಕರರನ್ನು ಖಾಯಂಗೊಳಿಸಿರುವುದಿಲ್ಲ. ನಂತರ ಈ ಶಾಲೆಯು ನಮ್ಮ ಇಲಾಖೆಯ ವ್ಯಾಪ್ತಿಗೆ ಬಂದಾಗ, ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರು ಖಾಯಂಗೊಳಿಸಲಾಗಿದೆ. 2017-18ನೇ ಸಾಲಿನಲ್ಲಿ ಈ ಹುದ್ದೆಯನ್ನು ಖಾಯಂಗೊಳಿಸಲಾಗಿದೆ. ಅದಕ್ಕೂ ಮೊದಲು ಯಾರು ಹೊರಗುತ್ತಿಗೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದರು, ಅವರ ಸೇವೆಯು 10 ವರ್ಷಗಳು ಪೂರೈಸಿಲ್ಲ. ಅದಕ್ಕೆ ಸಂಬಂಧಿಸಿದಂತೆ, ನನ್ನ ಹತ್ತಿರ ರೆಕಾರ್ಡ್ ಸಹ ಇದೆ.

**ಸಭಾಪತಿಯವರು:-** ಯಾರು ಅರ್ಹರಿರುತ್ತಾರೆ ಅಂಥವರಿಗೆ ಮಾಡಿ.

**ಶ್ರೀ ಶ್ರೀಮಂತ ಬಾಳಸಾಹೇಬ ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೆಲವು ನೌಕರರಿಗೆ ಅನ್ಯಾಯವಾಗಿದ್ದರೆ, ಅಂಥವರಿಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಿ, ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 769**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕಿತ್ತಳೆ ಬೆಳೆಯನ್ನು ಬೆಳೆಯುತ್ತಿರುವ ಜಿಲ್ಲೆಗಳು ಯಾವುವು; ಮತ್ತು ಅಲ್ಲಿನ ಕಿತ್ತಳೆ ಬೆಳೆಯ ವಿಸ್ತೀರ್ಣದ ವಿವರಗಳನ್ನು ಒಳಗೊಂಡಂತೆ ತಾಲ್ಲೂಕುವಾರು ವಿವರ ನೀಡುವುದಾಗಿ ಪ್ರಶ್ನೆಯನ್ನು ಕೇಳಿದ್ದು, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಮೊದಲು ಕೊಡಗು ಜಿಲ್ಲೆಯಲ್ಲಿ ಕಾಫಿ ತೋಟದ ಮುಂದೆ inter plantation ಕಿತ್ತಳೆಯನ್ನು ಬೆಳೆಯುತ್ತಿದ್ದರು. ಇದರಿಂದಾಗಿ ಕಟ್ಟೆ ರೋಗದಿಂದಾಗಿ ಬೆಳೆಗಳು ಸಂಪೂರ್ಣವಾಗಿ ನಾಶವಾಗಿತ್ತು. Coffee has become a commercial crop. ಈ ಕಾಫಿ ಬೆಳೆಯ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, 10 ವರ್ಷಗಳ ಹಿಂದೆ ಎಷ್ಟು ಬೆಲೆ ಇತ್ತು, ಅದೇ ಬೆಲೆ ಇವತ್ತಿಗೂ ಇದೆ. ಹಾಗಾಗಿ ಕಿತ್ತಳೆ ಬೆಳೆಯನ್ನು ಬೆಳೆದರೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುವುದರ ಜೊತೆಗೆ ಜನರು ಬದುಕಬಹುದು. ಏಕೆಂದರೆ, ಕಾಫಿ ತೋಟದೊಳಗೆ ಹೋಗುವುದಕ್ಕೆ ಭಯದ ವಾತಾವರಣ ನಿರ್ಮಾಣವಾಗಿದೆ. ನಿನ್ನೆ ಈ ಸದನದ ಸದಸ್ಯರಾದ ಮಾನ್ಯ ವೀಣಾ ಅಚ್ಚಯ್ಯನವರು ಪ್ರಸ್ತಾಪ ಮಾಡಿರುವಂತೆ ಅಲ್ಲಿ ಆನೆ, ಹುಲಿ ಕಾಟ ಇದೆ. ಜೊತೆಗೆ ಕಾಫಿ ತೋಟದೊಳಗೆ ಹೋಗುವುದಕ್ಕೂ ಭಯವಾಗುತ್ತದೆ. ಮಾನ್ಯ ಸಚಿವರು ಸಹ ಕೃಷಿ ಕುಟುಂಬದವರಾಗಿದ್ದು, ನಾವು ಕೃಷಿ ಬೆಳೆಯದೇ ಬದುಕಲು ಸಾಧ್ಯವೇ ಇಲ್ಲ. ಹಾಗಾಗಿ ಕೃಷಿ ಬೆಳೆಯನ್ನು ಬೆಳೆಯಲೇಬೇಕಾಗುತ್ತದೆ. ಆದ್ದರಿಂದ ಸರ್ಕಾರದಿಂದ ನಮಗೆ ಪ್ರೋತ್ಸಾಹಧನ ದೊರಕಬೇಕಾಗಿದೆ.

**(ಮುಂದು)**

**(297)05.03.2021/11.40/ಎಸ್‌ಕೆ-ಎಕೆ**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಮುಂದು):-**

ಮಾನ್ಯ ಸಭಾಪತಿಯವರೇ, ಸರ್ಕಾರ ನೀಡಿರುವ ಉತ್ತರದಲ್ಲಿ ಏನಿದೆ ಎಂದರೆ, ಎರಡು ಹೆಕ್ಟೇರ್‌ಗೆ ಇಪ್ಪತ್ತು ಸಾವಿರ ರೂಪಾಯಿಗಳ ಸಹಾಯಧನವನ್ನು ಕೊಡುತ್ತಾರೆ. ಒಂದು ಹೆಕ್ಟೇರ್‌ಗೆ ಎರಡೂವರೆ ಎಕರೆ ಬರುತ್ತದೆ. ಒಂದು ಎಕರೆಗೆ ನಾಲ್ಕು ಸಾವಿರ ರೂಪಾಯಿಗಳು ಕೊಟ್ಟಂತಾಗುತ್ತದೆ. ಈಗಿನ ಪರಿಸ್ಥಿತಿ ತಮಗೆ ಗೊತ್ತಿದೆ. ತಾವು ಕೃಷಿ ಕುಟುಂಬದಿಂದ ಬಂದವರು ಮತ್ತು ತಾವು ಒಳ್ಳೆಯ ಕೃಷಿಕರು ಎಂಬ ಮಾತನ್ನು ನಾನು ಕೇಳಿದ್ದೇನೆ. ಕಾಫಿ ಜೊತೆ ಕಿತ್ತಳೆ interplant ಮಾಡಿದರೆ, ಒಳ್ಳೆಯ ಬೆಳೆ ಸಿಗುತ್ತದೆ. ಅದನ್ನು ಮಾರ್ಕೆಟಿಂಗ್ ಮಾಡಬೇಕು. ಇದರ ಜೊತೆಗೆ ನಮಗೆ ಸರ್ಕಾರದಿಂದ ಸಹಕಾರವನ್ನು ಕೊಡಬೇಕು.

ಇದಕ್ಕೆ ಒಳ್ಳೆಯ ಸಹಕಾರವನ್ನು ಕೊಟ್ಟರೆ, ಜನರು ಕಿತ್ತಳೆ ಬೆಳೆಯನ್ನು ಬೆಳೆಯವುದಕ್ಕೆ ಮುಂದಾಗುತ್ತಾರೆ. ಕಾಫಿ ತೋಟದಲ್ಲಿ ಏನಾಗಿದೆ ಎಂದರೆ, ಕಾರ್ಮಿಕರ ಸಮಸ್ಯೆ, ಮತ್ತೆ ಬೇರೆ ಬೇರೆ ಸಮಸ್ಯೆಯಾಗಿ, ಕಾಫಿ ಬೆಳೆಯನ್ನು ನಂಬಿಕೊಂಡು ಜೀವನ ಮಾಡುವುದು ಬಹಳ ಕಷ್ಟವಾಗಿದೆ. ಅದಕ್ಕೆ interplantation ಬೇಕೆ ಬೇಕು. ಕಿತ್ತಳೆ ಬೆಳೆಯ ಬಗ್ಗೆ ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಸ್ಟಡಿ ಮಾಡಿ, ಅದಕ್ಕೆ ಸಹಕಾರ ಕೊಡುವುದಕ್ಕೆ ಮಾನ್ಯ ಸಚಿವರು ರೆಕಮೆಂಡ್ ಮಾಡಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್. ಶಂಕರ್:-** ಕೊಡಗಿನಲ್ಲಿ ಕಿತ್ತಳೆ ಪ್ರಮುಖ ಬೆಳೆಯಾಗಿದೆ. ಅದಕ್ಕೆ ಹಾನಿಯಾದಂತಹ ಗಿಡಗಳಿಗೆ ಹೊಸದಾಗಿ ನಾಟಿ ಮಾಡುವುದಕ್ಕೆ ಮತ್ತು ಭೂಮಿಯ ಫಲವತ್ತತೆಯನ್ನು ಪುನಶ್ಚೇತನ ಮಾಡುವುದಕ್ಕೆ ಕೂಡ ನಾವು ಅನುದಾನವನ್ನು ಕೊಡುತ್ತಿದ್ದೇವೆ. ಅದನ್ನು ಬಳಸಿಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:-** ಮಾನ್ಯ ಸಭಾಪತಿಯವರೇ, ಇದಕ್ಕೆ ಕೊಡುವಂತಹ ಅನುದಾನ ಭಾರಿ ಪ್ರಮಾಣದಲ್ಲಿ ಕಡಿಮೆಯಿದೆ. ಕೊಡಗಿನಲ್ಲಿ ಮಾತ್ರ ಕಿತ್ತಳೆ ಬೆಳೆ ಬೆಳೆಯುವುದಿಲ್ಲ. ಅದರ ಜೊತೆಗೆ ಚಿಕ್ಕಮಗಳೂರು, ಹಾಸನ ಮತ್ತು ಎಲ್ಲಾ ಮಲೆನಾಡು ಪ್ರದೇಶಗಳಲ್ಲಿ ಕಿತ್ತಳೆ ಬೆಳೆಯನ್ನು ಬೆಳೆಯುತ್ತಾರೆ. ಕಾಫಿ ಬೆಳೆಯ ಜೊತೆಗೆ ಅದನ್ನು interplant ಮಾಡಿದರೆ, ನಮಗೆ ಉಪಯೋಗುತ್ತದೆ. ಆದ್ದರಿಂದ ಅದಕ್ಕೆ ಹೆಚ್ಚಿನ ಸಹಾಯಧನ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ. ಈಗ ಕೊಡುತ್ತಿರುವಂತಹ ಸಹಾಯಧನ ಕಡಿಮೆ ಇದೆ. ಆ ಸಹಾಯಧನದಲ್ಲಿ ಏನು ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಒಂದು ಎಕರೆಗೆ ನಾಲ್ಕು ಸಾವಿರ ರೂಪಾಯಿಗಳು ಅಥವಾ ಐದು ಸಾವಿರ ರೂಪಾಯಿಗಳ ಸಹಾಯಧನವನ್ನು ಕೊಟ್ಟರೆ ಏನು ಮಾಡಿಕೊಳ್ಳುವುದಕಾಗುತ್ತದೆ? ಮಾನ್ಯ ಸಚಿವರು ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಮಾನ್ಯ ಸಚಿವರು ಈ ಇಲಾಖೆಗೆ ಹೊಸದಾಗಿ ಸಚಿವರಾಗಿ ಬಂದಿದ್ದೀರಿ. ಅದರಲ್ಲಿ ತಾವು ಒಂದು ಸಾಧನೆ ಮಾಡಿ ತೋರಿಸಿ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಹೇಳುವುದು ಸರಿಯಿದೆ. ಇದರ ಬಗ್ಗೆ ಮಾನ್ಯ ಸಚಿವರೇ ಗಮನಹರಿಸಿ.

**ಶ್ರೀ ಆರ್. ಶಂಕರ್:-** ಇದು ಕೇಂದ್ರದ N.H.M (National Horticulture Mission) ಯೋಜನೆಯಾಗಿರುವುದರಿಂದ, ಇದನ್ನು ಪರಿಶೀಲನೆ ಮಾಡಿ, ನಮ್ಮ ಇಲಾಖೆಯಿಂದ ಇದಕ್ಕೆ ಏನು ಕೊಡುವುದಕ್ಕೆ ಸಾಧ್ಯವಿದೆಯೋ, ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:-** ಕೇಂದ್ರಕ್ಕೆ ತಾವು ವರದಿಯನ್ನು ಕೊಡಬೇಕು ಹಾಗೂ ತಮ್ಮ ಅಧಿಕಾರಿಗಳು ವರದಿಯನ್ನು ಕೊಟ್ಟರೆ ಮಾತ್ರ, ತಾವು ಕೆಲಸ ಮಾಡುವುದಕ್ಕೆ ಆಗುವುದು.

**ಸಭಾಪತಿಯವರು:-** ಮಾನ್ಯ ಸಚಿವರೇ ಇದರ ಬಗ್ಗೆ ತಕ್ಷಣ ಗಮನಹರಿಸಿ ಮಾಡಿ.

**ಶ್ರೀ ಆರ್. ಶಂಕರ್:-** ನಾವು ಪ್ರಯತ್ನ ಪಡುತ್ತೇವೆ.

**ಪ್ರಶ್ನೆ ಸಂಖ್ಯೆ 720**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ವಿಜಯಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಬೀದರ್ ಜಿಲ್ಲೆಯಲ್ಲಿ ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡಲು ಪ್ರತಿ ವರ್ಷ ಸರ್ಕಾರದಿಂದ ಸುಮಾರು ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಅನುದಾನ ಬರುತ್ತಿದೆ. ಆದರೂ ಸಹ ಪೌಷ್ಟಿಕತೆಯನ್ನು ನಿವಾರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರದ ಸಮೀಕ್ಷೆಯ ಪ್ರಕಾರ ನಮ್ಮ ರಾಜ್ಯದಲ್ಲಿ ರಕ್ತಹೀನತೆ ಪ್ರಮಾಣ ಶೇಕಡ 59 ರಷ್ಟಿದೆ. ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೇಕಡ 77 ರಷ್ಟು ರಕ್ತ ಹೀನತೆ ಇದೆ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಸವಿಸ್ತಾರವಾಗಿ ಉತ್ತರವನ್ನು ಕೊಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಮಕ್ಕಳಲ್ಲಿ ಏನೊಂದು ಅಪೌಷ್ಟಿಕತೆ ಜಾಸ್ತಿಯಿದೆ ಎನ್ನುವುದರ ಬಗ್ಗೆ ನಾವು ಒಂದು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಸುಮಾರು ಮೂರರಿಂದ ಆರು ವರ್ಷದಲ್ಲಿರುವ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆಯನ್ನು ನೀಡಲಾಗುತ್ತದೆ. ಆರು ತಿಂಗಳಿಂದ ಆರು ವರ್ಷದಲ್ಲಿರುವಂತಹ ಮಕ್ಕಳಿಗೆ ವಾರದಲ್ಲಿ ಐದು ದಿನ ಸುಮಾರು 150 ಎಂ.ಎಲ್. ಕೆನೆಭರಿತ ಹಾಲನ್ನು ಕೂಡ ನೀಡುತ್ತಿದ್ದೇವೆ. ತೀವ್ರ ಅಪೌಷ್ಟಿಕತೆ ಇರುವಂತಹ ಮಕ್ಕಳು ಹೆಚ್ಚು ಇದ್ದಲ್ಲಿ, ಆ ಮಕ್ಕಳಿಗೆ ವಾರದಲ್ಲಿ ಮೂರು ದಿನ ಮೊಟ್ಟೆ, 200 ಎಂ.ಎಲ್. ಕೆನೆಭರಿತ ಹಾಲನ್ನು ನೀಡುತ್ತಿದ್ದೇವೆ. ಮೊಟ್ಟೆಯನ್ನು ಯಾರು ಮಕ್ಕಳು ಉಪಯೋಗಿಸುವುದಿಲ್ಲವೋ, ಅಂತಹ ಮಕ್ಕಳಿಗೆ ಆರು ದಿನ 200 ಎಂ.ಎಲ್. ಹಾಲನ್ನು ಕೊಡುತ್ತಿದ್ದೇವೆ. ನಮ್ಮ ಇಲಾಖೆಯಿಂದ ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರುವಂತಹ ಜಿಲ್ಲೆಗಳಿಗೆ ವಿಶೇಷವಾದಂತಹ ಒಂದು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಅದು ಈಗಾಗಲೇ ಯಶಸ್ವಿಯಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿಯೂ ಕೂಡ migrant labour ವಾಪಸ್ಸು ಬಂದರು. ಅಂತಹ ಮಕ್ಕಳಿಗೂ ಕೂಡ ನಾವು ಮನೆ ಬಾಗಿಲಿಗೆ ಆಹಾರ ಪದಾರ್ಥಗಳನ್ನು ಕೊಡುವಂತಹ ನಿಟ್ಟಿನಲ್ಲಿ ಹಾಗೂ ಯಾವುದೇ ರೀತಿಯಾಗಿ ಮಕ್ಕಳಿಗೆ ತೊಂದರೆಯಾಗಬಾರದು ಎಂದು ನಾವು ಕಾಳಜಿಯನ್ನು ವಹಿಸಿದ್ದೇವೆ.

**ಶ್ರೀ ವಿಜಯಸಿಂಗ್:-** ನಾನು ಮೊನ್ನೆ ಒಂದು ಕೆ.ಡಿ.ಪಿ ಮೀಟಿಂಗ್‌ನಲ್ಲಿ ಭಾಗವಹಿಸಿದ್ದೆನು. ಅಂಗನವಾಡಿ ಕೇಂದ್ರದ ಕಟ್ಟಡಗಳಲ್ಲಿ 64 ಕಟ್ಟಡಗಳು ಬಾಡಿಗೆ ಮೇಲಿದೆ ಎಂದು ಅಲ್ಲಿರುವಂತಹ

ಅಧಿಕಾರಿಗಳು ಹೇಳಿದರು. ಆದರೆ ತಮ್ಮ ಉತ್ತರದಲ್ಲಿ ಮಾಹಿತಿಯನ್ನು ಒದಗಿಸಿಲ್ಲ. ಅದಕ್ಕಾಗಿ ಮಾನ್ಯ ಸಚಿವರು ಮಾಹಿತಿಯನ್ನು ಕೊಡಬೇಕು.

**ಸಭಾಪತಿಯವರು:–** ಅದಕ್ಕೆ preference ಕೊಡಿ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯವರು ಕೊಟ್ಟಿರುವ ಉತ್ತರದಲ್ಲಿ, ಅಲ್ಲಿರುವಂತಹ ಉಪನಿರ್ದೇಶಕರ ಜೊತೆ ನಾನು ಮಾತನಾಡಿ, ಸರಿಯಾದ ವರದಿಯನ್ನು ಪಡೆದುಕೊಳ್ಳುತ್ತೇನೆ. ಈಗಾಗಲೇ ಏನೇನು ಮಾಡಿದ್ದೇವೆಂಬುದರ ಬಗ್ಗೆ ಉತ್ತರದಲ್ಲಿ ಮಾಹಿತಿಯನ್ನು ಒದಗಿಸಿದ್ದೇನೆ. ಅಲ್ಲಿನ ವರದಿಯನ್ನು ಪಡೆದುಕೊಂಡ ನಂತರ ಎಲ್ಲಿ ನಿವೇಶನಗಳು ಇಲ್ಲ, ಅಲ್ಲಿ ಕೊಡುವಂತಹ ಕೆಲಸವನ್ನು ಶಾಸಕರೆಲ್ಲರೂ ಮಾಡಿದರೆ, ಅಲ್ಲಿನ ಅನುದಾನದ ಲಭ್ಯತೆಗನುಸಾರವಾಗಿ ಕಟ್ಟಡಗಳನ್ನು ಕಟ್ಟುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 612**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನನಗೆ ಸ್ಪಷ್ಟವಾದಂತಹ ಉತ್ತರ ಸಿಕ್ಕಿಲ್ಲ. ಕಾರಣವೇನೆಂದರೆ, ಹಣವನ್ನು ಬಳಕೆ ಮಾಡದೇ, ಕೇಂದ್ರ ಸರ್ಕಾರಕ್ಕೆ ಬಳಕೆ ಪ್ರಮಾಣವನ್ನು ಸಲ್ಲಿಸಿದ್ದಾರೆ. ಆ ಹಣವನ್ನು ಉಳಿತಾಯ ಖಾತೆಯಲ್ಲಿ ಠೇವಣಿ ಇಟ್ಟಿದ್ದಾರೆ. ಆದರೆ ಕೇಂದ್ರ ಸರ್ಕಾರಕ್ಕೆ ಈ ರೀತಿ ತಪ್ಪು ಮಾಹಿತಿಯನ್ನು ಏಕೆ ನೀಡಿದರು? ಆಯುಕ್ತರು ಏತಕ್ಕೆ ತಪ್ಪು ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿದರು ಎನ್ನುವಂತಹ ಪ್ರಶ್ನೆಯನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಆರ್. ಶಂಕರ್:–** ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ದಿನಾಂಕ 30.03.2015 ರನ್ವಯ ಮೊದಲನೆ ಹಂತದಲ್ಲಿ ರೂ.15.54 ಕೋಟಿ ಹಾಗೂ ದಿನಾಂಕ 17.10.2015ರ ರನ್ವಯ ಎರಡನೆ ಹಂತದಲ್ಲಿ ರೂ.4.35 ಕೋಟಿಗಳು ಬಿಡುಗಡೆಯಾಗಿದೆ. ಒಟ್ಟು ರೂ.19.89 ಕೋಟಿಗಳಷ್ಟು ಬಿಡುಗಡೆಯಾಗಿರುತ್ತದೆ. ಬಿಡುಗಡೆಗೊಳಿಸಿರುವ ಹಣವನ್ನು ಗಣಕೀಕರಣ ಮತ್ತು ಇತರ ಕಾರ್ಯಕ್ರಮಗಳಿಗೆ ವಿನಿಯೋಗಿಸಬೇಕಾಗಿರುತ್ತದೆ. ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹಣವನ್ನು ತಲಘಟ್ಟಪುರ ಸಂಶೋಧನಾ ಸಂಸ್ಥೆಯಲ್ಲಿ ಇರಿಸಲಾಗಿದೆ. ಈ ಹಿಂದೆ ಹೇಳಿದಂತೆ, ಗಣಕೀಕರಣದ ಕಾರ್ಯಕ್ರಮವೊಂದನ್ನು ಬಿಟ್ಟು, ಉಳಿದೆಲ್ಲಾ ಕಾರ್ಯಕ್ರಮಗಳಿಗೆ ನೀಡಿದ ಮೊತ್ತ ರೂ. 4.80 ಕೋಟಿ ವೆಚ್ಚ ಮಾಡಲಾಗಿದೆ. ಗಣಕೀಕರಣಕ್ಕಾಗಿ ತೆಗೆದಿಟ್ಟ ಮೊತ್ತ ..

**ಸಭಾಪತಿಯವರು:–** ಮಾನ್ಯ ಸಚಿವರೇ ಇದನ್ನು ಓದಬೇಡಿ. ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ತಾವು ಉತ್ತರ ಹೇಳಬೇಕು. ತಾವು ನೇರವಾಗಿ ಉತ್ತರವನ್ನು ಹೇಳಿ. ತಾವು ಏತಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕಳುಹಿಸಿದ್ದೀರಾ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿ.

**ಶ್ರೀ ಆರ್. ಶಂಕರ್:–** ಮಾನ್ಯ ಸಭಾಪತಿಯವರೇ, ಎರಡು ಹಂತದಲ್ಲಿ ಹಣ ಬಿಡುಗಡೆಯಾಗಿತ್ತು. ಆದರೆ ಮೊದಲನೆ ಹಂತದಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಉಳಿದಂತಹ ಹಣದಲ್ಲಿ ಗಣಕೀಕರಣ ಮಾಡುವುದಕ್ಕೆ ಸುಮಾರು ಹದಿನೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಆದರೆ ಟೆಂಡರ್‌ನಲ್ಲಿ ಸ್ವೀಕರಿಸಿದ ಎಲ್1 ಮೊತ್ತವು ಅನುಮೋದಿತ ಯೋಜನಾ ವೆಚ್ಚಕ್ಕಿಂತ ಶೇ.141 ರಷ್ಟು ಹೆಚ್ಚಾಗಿದ್ದುದರಿಂದ ಮರು ಟೆಂಡರ್‌ನ್ನು ರದ್ದುಪಡಿಸಲಾಯಿತು. ಅಷ್ಟರಲ್ಲಿ ಕೋವಿಡ್ ಬಂದಿದ್ದರಿಂದ, ಕಾರ್ಯಕ್ರಮಗಳನ್ನು ನಿಯೋಜನೆ ಮಾಡುವುದಕ್ಕಾಗದೇ ಇರುವುದರಿಂದ, ಇದನ್ನು ಬಳಕೆ ಮಾಡುವುದಕ್ಕಾಗಲಿಲ್ಲ. ಕೇಂದ್ರ ಸರ್ಕಾರಕ್ಕೆ ಆ ಹಣವನ್ನು ವಾಪಸ್ಸು ಮಾಡಬಾರದೆಂಬ

ಉದ್ದೇಶದಿಂದ ನಮ್ಮಲ್ಲಿಯೇ ಆ ಹಣವನ್ನು ಇರಿಸಿಕೊಂಡಿದ್ದೇವೆ. ತುರ್ತಾಗಿ ಸಾಫ್ಟ್‌ವೇರ್ ಡೆವಲಪ್ ಮಾಡುವುದಕ್ಕೆ, ನಾವು ರೆಡಿ ಮಾಡಿಕೊಂಡಿದ್ದೇವೆ. ನಾವು ಅದನ್ನು ಮಾಡುತ್ತೇವೆ.

**ಶ್ರೀ ಎಸ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನಗೆ ಅರ್ಥವಾಗದ ವಿಷಯವೇನೆಂದರೆ, ಕೇಂದ್ರ ಸರ್ಕಾರಕ್ಕೆ ಹಣವನ್ನು ಬಳಕೆ ಮಾಡಿದ್ದೇವೆಂದು ಏಕೆ ಹೇಳಿದರು? ಉದಾಹರಣೆಗೆ ಕೇಂದ್ರ ಸರ್ಕಾರದವರು ಸುಮಾರು 19 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದನ್ನು ಬಳಕೆ ಮಾಡಿದ್ದೇವೆಂದು ಏಕೆ ಹೇಳಬೇಕು? ಆ ಹಣವನ್ನು ಬಳಕೆ ಮಾಡಿಲ್ಲ. ಕೋವಿಡ್ ಇರುವುದರಿಂದ, ಆ ಹಣವನ್ನು ಉಪಯೋಗ ಮಾಡಿಲ್ಲವೆಂದು ಹೇಳಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೇ ಒಂದು ನಿಮಿಷ. ಮಾನ್ಯ ಸಚಿವರು ಹೊಸಬರಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಪ್ರತಿ ವರ್ಷ ಬಜೆಟ್ ಹಂಚಿಕೆಯಾಗುತ್ತದೆ. ಈಗ ಕೇಂದ್ರ ಸರ್ಕಾರ ನಮಗೆ ಹಂಚಿಕೆಯಾಗಿರುವಂತಹ ಬಜೆಟ್‌ನ್ನು ಆ ವರ್ಷದಲ್ಲಿ ನೂರಕ್ಕೆ ನೂರರಷ್ಟು ಖರ್ಚು ಮಾಡದೇ ಹೋದರೆ, ಆ ಹಣವನ್ನು ವಿತ್‌ಡ್ರಾ ಮಾಡಿ, ನಮ್ಮ ಖಾತೆಯಲ್ಲಿ ಇಟ್ಟಿರುತ್ತೇವೆ. ಇದರ ಉದ್ದೇಶವೇನೆಂದರೆ, ಲ್ಯಾಪ್ಸ್ ಆಗಬಾರದೆಂಬ ಉದ್ದೇಶದಿಂದ ಆ ಹಣವನ್ನು ಇಟ್ಟಿರುತ್ತೇವೆ. ಗಣಕೀಕರಣ ಮತ್ತು ಸಾಫ್ಟ್‌ವೇರ್ ಡೆವಲಪ್ ಮಾಡಬೇಕೆಂದು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕಾಗಿ ಆ ಹಣವನ್ನು ತೆಗೆದಿಟ್ಟಿರುತ್ತೇವೆ. ನಾವು Utilization Certificate ಅನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುತ್ತೇವೆ. ಆದರೆ ಅದು ಏನೂ ತಪ್ಪಿಲ್ಲ. ಕೆಲಸ ಪೂರ್ತಿಯಾಗದೇ, ಮುಂಗಡವಾಗಿ ಸಾಫ್ಟವೇರ್ ಡೆವಲಪ್ ಮಾಡಿದವನಿಗೆ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಟೆಂಡರ್ ಪ್ರಕ್ರಿಯೆ ಪೂರ್ತಿಯಾದ ಮೇಲೆ, ಕೆಲಸ ಪೂರ್ಣವಾದ ಮೇಲೆ ಹಣವನ್ನು ಪೂರ್ತಿಯಾಗಿ ನೀಡುತ್ತೇವೆ. ಆದರೆ ಸರ್ಕಾರದ ಉದ್ದೇಶವಿಷ್ಟೆ. ಹಿಂದಿನ ಸರ್ಕಾರವಿರಲಿ ಅಥವಾ ಯಾವುದೇ ಸರ್ಕಾರವಿರಲಿ, externally aided project ನಲ್ಲಿ ಬಂದಿರುವಂತಹದ್ದು ಮತ್ತು ಕೇಂದ್ರ ಸರ್ಕಾರದ ಅನುದಾನದಲ್ಲಿ ಬಂದಿರುವಂತಹದ್ದು. ಯಾವುದನ್ನು ಕೂಡ ಲ್ಯಾಪ್ಸ್ ಆಗಬಾರದೆಂಬ ದೃಷ್ಟಿಯಿಂದ ನಾವು ಹಣವನ್ನು ತೆಗೆದು ಪಿ.ಡಿ. ಅಕೌಂಟ್‌ನಲ್ಲಿ ಇಡುವಂತಹದ್ದು, ಇನ್ನುಳಿದ ಅಕೌಂಟ್‌ಗೆ ವರ್ಗಾವಣೆ ಮಾಡುವಂತಹದ್ದನ್ನು ಮಾಡಿರುತ್ತೇವೆ. ಇದರಲ್ಲಿ ತಪ್ಪು ಮಾಹಿತಿ ಎಂದು ಮಾನ್ಯ ಸದಸ್ಯರು ಭಾವಿಸುವಂತಹದ್ದಲ್ಲ. ದಯವಿಟ್ಟು, ಮಾನ್ಯ ರವಿಕುಮಾರ್‌ರವರೇ ಕೇಂದ್ರ ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಸರ್ಕಾರ ಕಳುಹಿಸಿಲ್ಲ. ಉಪಯೋಗಕ್ಕಾಗಿ ಇಟ್ಟಂತಹ ಹಣವನ್ನು ಉಪಯೋಗ ಮಾಡುತ್ತೇವೆ.

**(298) 05.03.2021, 11.50, ಟಿಸಿಹೆಚ್-ಎಕೆ**

**ಪ್ರಶ್ನೆ ಸಂಖ್ಯೆ.761**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಾವು ಧಾರವಾಡದಿಂದ ಬೆಳಗಾವಿಗೆ ಪ್ರಯಾಣ ಮಾಡಲು ಪ್ರಸ್ತುತ ಇರುವ ರೈಲು ಮಾರ್ಗದ ಬದಲಾಗಿ ನೇರವಾದ ರೈಲು ಮಾರ್ಗವನ್ನು ನಿರ್ಮಾಣ ಮಾಡಲು ಕೇಂದ್ರ ಸರ್ಕಾರವು ನಿರ್ಧರಿಸಿರುವುದು ನಿಜವೇ; ಹಾಗಿದ್ದಲ್ಲಿ ಮಾರ್ಗದಿಂದ ಪ್ರಯಾಣಕ್ಕೆ ತಗಲುವ ಸಮಯ ಎಷ್ಟು ಎಂದು ಕೇಳಿದ್ದೇನೆ. ಹೊಸ ರೈಲು ಮಾರ್ಗ ಮಾಡಬೇಕೆಂಬುದು ನಮ್ಮ ಬೇಡಿಕೆಯಾಗಿದೆ. ಇದು ತಮಗೂ ಗೊತ್ತಿದೆ. ನಾವು ರೈಲು ಮಾರ್ಗದಲ್ಲಿ ಧಾರವಾಡದಿಂದ ಬೆಳಗಾವಿಗೆ ಹೋಗಬೇಕಾದರೆ ಸುಮಾರು ನಾಲ್ಕು ಗಂಟೆ ಸಮಯ ಆಗುತ್ತದೆ. ಹಿಂದೆ ಸನ್ಮಾನ್ಯ ಹೆಚ್.ಡಿ.ದೇವೇಗೌಡರವರು ಪ್ರಧಾನಮಂತ್ರಿಗಳಾಗಿದ್ದಾಗ, ಸರ್ವೇ ಮಾಡುವುದಕ್ಕೆ ಆದೇಶ ಮಾಡಿದ್ದರು. ಇತ್ತೀಚೆಗೆ ನಿಧನರಾದಂತಹ ಕೇಂದ್ರ ಸಚಿವರಾದ ಮಾನ್ಯ ಸುರೇಶ್ ಅಂಗಡಿಯವರು ಬೆಳಗಾವಿ-ಧಾರವಾಡ ಮಧ್ಯೆ ಪ್ರಮುಖವಾಗಿರತಕ್ಕಂಥ ರೈಲು ಮಾರ್ಗ ಮಾಡುವುದಕ್ಕೆ ನಿರ್ಧಾರ ತೆಗೆದುಕೊಂಡರು. ಆದರೆ, ಭೂಸ್ವಾಧೀನಪಡಿಸಿಕೊಳ್ಳುವಂಥ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲಿದೆ. ಈಗಾಗಲೇ ಒಂದು ವರ್ಷವಾಗುತ್ತಾ ಬಂತು. Land acquisition ವಿಚಾರದಲ್ಲಿ ಸರ್ಕಾರವೇನಾದರು ಮುಂದುವರೆದಿದೆಯೇ? ಅದಕ್ಕಾಗಿ ಏನಾದರೂ ಹಣವನ್ನು ನಿಗದಿಪಡಿಸಿದ್ದಾರೆಯೇ? ಏಕೆಂದರೆ, ಇದು ಸ್ವಾತಂತ್ರ್ಯ ಪೂರ್ವದಿಂದಲೂ ಇರತಕ್ಕಂಥ ಒಂದು ಪ್ರಮುಖವಾಗಿರತಕ್ಕಂಥ ಬೇಡಿಕೆ. ಇವತ್ತಿನ ದಿವಸ ನಾವೆಲ್ಲಾ ಲೋಂಡಾದ ಮುಖಾಂತರ ಹೋಗತಕ್ಕಂಥ ಪರಿಸ್ಥಿತಿ ಇದೆ. ಸುಮಾರು ಬೆಳಗಾವಿಯಿಂದ ಧಾರವಾಡಕ್ಕೆ ಹೋಗಬೇಕಾದರೆ ಸುಮಾರು 4 ಗಂಟೆ ಸಮಯವಾಗುತ್ತದೆ. ಬೆಳಗಾವಿಯಿಂದ ಧಾರವಾಡ ರೈಲು ಮಾರ್ಗ ಸರಿಯಾಗಿ ಆದಲ್ಲಿ, ನಾವು ಸುಮಾರು 45 ನಿಮಿಷಗಳಲ್ಲಿ ಬೆಳಗಾವಿ ತಲುಪಬಹುದು. ಆ ಹಿನ್ನೆಲೆಯಲ್ಲಿ, ಹಿಂದಿನ ಕೇಂದ್ರ ಸಚಿವರಾದ ದಿವಂಗತ ಸುರೇಶ್ ಅಂಗಡಿಯವರು ಒಂದು ಮಹತ್ವಾಕಾಂಕ್ಷೆ ಯೋಜನೆಗೆ ಚಾಲನೆ ಕೊಟ್ಟಿದ್ದರು. ಅದಕ್ಕೆ ಕೇಂದ್ರ ಸರ್ಕಾರದಿಂದ ಹಣಕಾಸನ್ನು ಕೂಡ ಮಂಜೂರು ಮಾಡಿದ್ದಾರೆ. But the responsibility of land acquisition lies with the State Government. ಆ ಹಿನ್ನೆಲೆಯಲ್ಲಿ, ಸರ್ಕಾರ ಈ land acquisition ಗೆ ಹಣಕಾಸನ್ನು ಯಾವಾಗ ಒದಗಿಸುತ್ತದೆ? ಈ ಬಜೆಟ್‌ನಲ್ಲಿ

ಏನಾದರೂ ಅದಕ್ಕೆ ಪ್ರತ್ಯೇಕವಾಗಿ ಹಣ ತೆಗೆದಿಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಲಿದೆಯೇ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಮೂಲ ಸೌಲಭ್ಯ ಅಭಿವೃದ್ಧಿ, ವಕ್ಫ್ ಮತ್ತು ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಧಾರವಾಡ-ಬೆಳಗಾವಿ ಮಧ್ಯೆ ಇರುವಂಥ ದೂರವನ್ನು ಕಡಿಮೆ ಮಾಡುವುದಕ್ಕೆ ಈ ಯೋಜನೆಯ ಹೊಸ ಪ್ರಸ್ತಾಪವನ್ನು 2020-21ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ರೈಲ್ವೇ ಬಜೆಟ್‌ನಲ್ಲಿ ಹಣ ನಿಗದಿಪಡಿಸಲಾಗಿದೆ. ಇದರಿಂದ 31 ಕಿಲೋಮೀಟರ್ ಪ್ರಯಾಣ ಕಡಿಮೆಯಾಗುತ್ತದೆ. ಸುಮಾರು 45 ರಿಂದ 50 ನಿಮಿಷಗಳು ಪ್ರಯಾಣಿಕರಿಗೆ ಅನುಕೂಲವಾಗುತ್ತದೆ. ಒಟ್ಟು ಯೋಜನೆ ವೆಚ್ಚ ರೂ.988.30 ಕೋಟಿಗಳು. ಇದರ ಶೇ.50ರಷ್ಟು ಅಂದರೆ ರೂ.494.15 ಕೋಟಿಗಳನ್ನು ರಾಜ್ಯ ಸರ್ಕಾರದಿಂದ ಭರಿಸಬೇಕಾಗುತ್ತದೆ. ಪ್ರಸ್ತುತ ಇರುವಂಥ ಪರಿಸ್ಥಿತಿಯಲ್ಲಿ ಈ ಯೋಜನೆ ಮಂಜೂರಾಗಿದೆ. ಅದಕ್ಕೆ ರಾಜ್ಯ ಸರ್ಕಾರದ ಸಹಮತವಿದೆ. D.P.R. (Detailed Project Report) ಸಿದ್ಧಪಡಿಸುತ್ತಿದ್ದಾರೆ. ರಾಜ್ಯ ಸರ್ಕಾರದಿಂದ ಈ ಯೋಜನೆ ಮಂಜೂರಾಗಿದ್ದು, ಡಿ.ಪಿ.ಆರ್ ಪೂರ್ಣವಾಗಿ ಸಿದ್ಧಪಡಿಸಿದ ನಂತರ, ಭೂ ಸ್ವಾಧೀನ ಪ್ರಕ್ರಿಯೆನ್ನು ಪ್ರಾರಂಭ ಮಾಡುತ್ತೇವೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ಈ ಯೋಜನೆ ಆದಷ್ಟು ಬೇಗನೆ ಆಗಬೇಕು. ಜನರಿಗೆ ಸಮಯದ ಉಳಿತಾಯವಾಗಬೇಕು ಎನ್ನುವುದಕ್ಕೆ ಸರ್ಕಾರ ಬದ್ಧವಾಗಿದೆ. ಅವರಿಗೆ ಬೇಕಾದ ಪೂರಕವಾದಂಥ ಅವಕಾಶವನ್ನು ಮಾಡಿಕೊಡಿಸುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಡಿಸ್ಟೆನ್ಸ್ ಬರೀ 31 ಕಿಲೋಮೀಟರ್ ಪ್ರಯಾಣ ಕಡಿಮೆಯಾಗುತ್ತದೆಂದು ಹೇಳುತ್ತಿದ್ದಾರೆ. ಎರಡು ಹಳಿಗಳ ರೈಲು ಪ್ರಯಾಣದ ಸಮಯ 31 ಕಿಲೋಮೀಟರ್ ಪ್ರಯಾಣ ಕಡಿಮೆಯಾಗುತ್ತದೆಂದು ಹೇಳುತ್ತಿದ್ದಾರೆ. 31 ಕಿಲೋಮೀಟರ್ ಪ್ರಯಾಣ ಕಡಿಮೆಯಾಗುತ್ತದೆಂದರೆ ಬರೀ ಅರ್ಧಗಂಟೆ ಸಮಯ ಉಳಿತಾಯವಾಗುತ್ತದೆ ಅಷ್ಟೆ. ಈಗ ಧಾರವಾಡ-ಬೆಳಗಾವಿ ರೈಲು ಮಾರ್ಗದಲ್ಲಿ ಪ್ರಯಾಣಿಸಲು ಸುಮಾರು 4 ಗಂಟೆ ಬೇಕಾಗುತ್ತದೆ. 60 ಕಿಲೋ ಮೀಟರ್ speed ನಲ್ಲಿ ಇನ್ನೂ ಹೆಚ್ಚಿಗೆ ಹೋಗುತ್ತದೆ. ಬರೀ 31 ಕಿಲೋಮೀಟರ್ ಪ್ರಯಾಣದ ಮಾರ್ಗವೆಂದು ಹೇಳುತ್ತಿದ್ದಾರೆ. ಅದು ರೂ.988.30 ಕೋಟಿಗಳ ಯೋಜನೆಯಾಗಿದೆ. ಮಾನ್ಯ ಸಚಿವರು ಡಿಸ್ಟೆನ್ಸ್ ತಪ್ಪು ಹೇಳುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ಬರೀ 31 ಕಿಲೋಮೀಟರ್ ಪ್ರಯಾಣ ಕಡಿಮೆಯಾಗುವುದಕ್ಕೋಸ್ಕರ ಸಾವಿರ ಕೋಟಿ ರೂಪಾಯಿಗಳು ಖರ್ಚು

ಮಾಡುವುದಕ್ಕಾಗುತ್ತದೆಯೇ? ಹೆಚ್ಚೆಂದರೆ ಅರ್ಧಗಂಟೆ ಉಳಿತಾಯವಾಗಬಹುದು. ಇನ್ನೂ 20 ನಿಮಿಷದಲ್ಲಿ ಅದನ್ನು cover ಮಾಡಬಹುದು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಆ ರೈಲು ಮಾರ್ಗದ ಉದ್ದ ಇನ್ನೂ ಹೆಚ್ಚಿಗೆ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬರೀ 31 ಕಿಲೋಮೀಟರ್ ಪ್ರಯಾಣ ಕಡಿಮೆಯಾಗುತ್ತದೆಂದು ಹೇಳುತ್ತಿದ್ದಾರಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ರೈಲ್ವೇ ಇಲಾಖೆಯವರು ಏನು ಮಾಡಿದ್ದಾರೆ ನೋಡಿ. Land acquisition ಗೆ ಎಷ್ಟು ಬೇಕು ಎಂಬುದನ್ನು ನೋಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ಪ್ರಯಾಣ ಮಾಡಿದ್ದಾರೆ, ನಾನೂ ಕೂಡ ಪ್ರಯಾಣ ಮಾಡಿದ್ದೇನೆ. ಪ್ರಸ್ತುತ ಧಾರವಾಡದಿಂದ ಬೆಳಗಾವಿಗೆ ಹೋಗಲು ಸುಮಾರು 4 ಗಂಟೆ ಸಮಯವಾಗುತ್ತದೆ. ಆದರೆ, ಇದು ಬಹಳ shortest route ಆಗಿದೆ. ಇದು ನೇರವಾದ ಮಾರ್ಗವಿರುವುದರಿಂದ ಅರ್ಧಗಂಟೆಯಲ್ಲಿ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಉತ್ತರ ಕೊಡುವಾಗ 31 ಕಿಲೋಮೀಟರ್ ಕಡಿಮೆಯಾಗುತ್ತದೆ. ಈ ಯೋಜನೆಯನ್ನು ಮಾಡುವುದರಿಂದ 31 ಕಿಲೋ ಮೀಟರ್‌ಗೆ 45 ರಿಂದ 50 ನಿಮಿಷಗಳ ಸಮಯ ಉಳಿತಾಯವಾಗುತ್ತದೆಂದು ಹೇಳಿದ್ದಾರೆ. ಮಾನ್ಯ ಪ್ರತಿಪಕ್ಷದ ನಾಯಕರನ್ನು ಹೇಳಿದ್ದನ್ನು. . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, 31 ಕಿಲೋಮೀಟರ್ ಪ್ರಯಾಣ ಕಡಿಮೆಯಾಗುತ್ತದೆಂದು ಹೇಳಿದರೆ ಏನು ಫಲಪ್ರದವಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಇಲಾಖೆ):–** ಮಾನ್ಯ ಸಭಾಪತಿಯವರೇ, ಬಹುಶಃ ಅಧಿಕಾರಿಗಳು ತಪ್ಪು ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಸರಿಪಡಿಸಿ ತರಿಸಿಕೊಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಉತ್ತರ ಕೊಟ್ಟಿರುವುದು ತಪ್ಪಿದೆ. ಇಲ್ಲವೆಂದರೆ ಅದನ್ನು ಡೆಫರ್ ಮಾಡಿ.

**ಸಭಾಪತಿಯವರು:-** ಇದನ್ನು ಡೆಫರ್ ಮಾಡುತ್ತೇನೆ.

**(ಪ್ರಶ್ನೆಯನ್ನು ತಡೆಹಿಡಿಯಲಾಯಿತು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ.735 ನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಪತ್ರವನ್ನು ತಮಗೆ ಕೊಟ್ಟಿದ್ದೇನೆ. ಸೋಮವಾರ ಉತ್ತರ ಒದಗಿಸಿ ಕೊಡುತ್ತೇನೆಂದು ಹೇಳಿದ್ದಾರೆ. ಒಳ್ಳೆಯ ಉತ್ತರ ಕೊಡಲಾಗುವುದು.

**ಸಭಾಪತಿಯವರು:-** ಹೌದು. ಮೊನ್ನೆ ದಿವಸ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ನನ್ನ ಅನುಮತಿಯನ್ನು ಪಡೆದಿದ್ದಾರೆ. ಮುಂದಿನ ವಾರ ಕೊಡಿಸುತ್ತೇನೆ.

**ಪ್ರಶ್ನೆ ಸಂಖ್ಯೆ.635**

**(ಉತ್ತರ ಲಗತ್ತಿಸಿದೆ)**

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತಿನ ದಿವಸ ರಾಜ್ಯದಲ್ಲಿ ಮ್ಯಾಕ್ಸಿಕ್ಯಾಬ್, ಇತರೆ ವಾಹನಗಳು ಮತ್ತು ಅದರಲ್ಲೂ ಸಾರಿಗೆ ವಾಹನಗಳು ಪ್ಯಾಸೆಂಜರ್ ವಾಹನಗಳಾಗಿ ಓಡಾಡುತ್ತಿವೆ. ಸರ್ಕಾರ ತಮ್ಮ ಉತ್ತರದಲ್ಲಿ ಅದನ್ನೆಲ್ಲಾ ಅವರ wheelbase ಮೇಲೆ ಸೀಟ್‌ನ್ನು ನಿಗದಿಪಡಿಸಲಾಗಿದೆ ಮತ್ತು ದಂಡ ವಿಧಿಸಿರುವಂಥ ವಿಚಾರವನ್ನೆಲ್ಲಾ ಹೇಳಿದೆ. ಆದರೆ, ಇದು ನಮ್ಮ ಬೆಂಗಳೂರಿನಿಂದಲೇ ಆರಂಭವಾಗುತ್ತದೆ. ನಾವು ಗಾರ್ಮೆಂಟ್ಸ್ ಫ್ಯಾಕ್ಟರಿಗಳನ್ನು ನೋಡಿದರೆ, ಪ್ರತಿ ದಿನ ಮ್ಯಾಕ್ಸಿಕ್ಯಾಬ್ ಸುಮಾರು 50 ಜನರನ್ನು ಕುರಿಗಳನ್ನು ತುಂಬಿಕೊಂಡು ಹೋದಂತೆ ಹೋಗುತ್ತಿದ್ದಾರೆ. ಈ ಹಿಂದೆಯೂ ಕೂಡ ಈ ಸದನದಲ್ಲಿ ಇದರ ಬಗ್ಗೆ ಕಠಿಣವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಸ್ತಾಪವಾಗಿತ್ತು. ಅದರಲ್ಲೂ garment factory ಗಳಿಗೆ ಮಹಿಳೆಯವರೇ ಹೆಚ್ಚು ಕೆಲಸಕ್ಕೆ ಹೋಗುತ್ತಾರೆ. ಅವರು ಬೆಳಗ್ಗೆ 8 ಗಂಟೆಗೆ ಮ್ಯಾಕ್ಸಿಕ್ಯಾಬ್ ಹತ್ತಿದರೆ, ಅದರ ಚಾಲಕರು ಅತಿವೇಗವಾಗಿ ಓಡಿಸುತ್ತಾರೆ. ಇವತ್ತಿನ ದಿವಸ ಅದಕ್ಕೆ ಯಾವುದೇ ನಿರ್ಬಂಧವಿಲ್ಲ. ಅದಕ್ಕೆ ನಿರ್ಬಂಧ ಹಾಕದೇ, ಯಾವುದೇ ರೀತಿ ಕ್ರಮ ತೆಗೆದುಕೊಳ್ಳದಿದ್ದರೆ ಮತ್ತೆ ಆ ವಾಹನಗಳೇನಾದರು ಅಪಘಾತಕ್ಕೆ ಈಡಾದಲ್ಲಿ; ಆ ಹೆಣ್ಣುಮಕ್ಕಳಿಗೆ insurance ಕೂಡ ಇರುವುದಿಲ್ಲ. ಮತ್ತೆ ಅವರ್‍ಯಾರು ಸತ್ತರು ಕೇಳುವವರು ಇಲ್ಲ. ಆದ್ದರಿಂದ ಅಂತಹ ವಾಹನಗಳ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಪ್ರತಿ ದಿನ ನಾವೆಲ್ಲಾ ಇನ್ನೊಂದನ್ನು ನೋಡುತ್ತಿದ್ದೇವೆ. ನಾವೆಲ್ಲಾ ಬೆಳಗ್ಗೆ ರೈಲ್ವೇ ಸ್ಟೇಷನ್‌ನಲ್ಲಿ ಇಳಿದರೆ, ಪ್ರಯಾಣಿಕರು ಕೇಳಿದ ಕಡೆಗೆ ಆಟೋದವರು ಬರುವುದಿಲ್ಲ. ಅವರು ಹೇಳಿದ ಕಡೆಗೆ ಪ್ರಯಾಣಿಕರು ಹೋಗಬೇಕಾದಂಥ ಪರಿಸ್ಥಿತಿ ಬಂದಿದೆ. ಬಹಳಷ್ಟು ಕಡೆ Prepaid Autorickshaw ವ್ಯವಸ್ಥೆ ಇದೆ. ಬೆಳಗಿನ ಸಮಯದಲ್ಲಿ ಅದು ಕೆಲಸ ಮಾಡುವುದಿಲ್ಲ. ಅದರಲ್ಲೂ ನಮ್ಮ ಶಿವಮೊಗ್ಗದಲ್ಲಿ ಹೊಸ ರೈಲ್ವೇ ನಿಲ್ದಾಣವಾಗಿದೆ. ಅಲ್ಲಿಗೆ ರೈಲುಗಳು ಬೆಳಗ್ಗೆ 5 ಗಂಟೆಗೆ ಬರುತ್ತವೆ. ಅಲ್ಲೆಲ್ಲೂ Prepaid Autorickshaw ವ್ಯವಸ್ಥೆ ಇಲ್ಲದೇ ಇರುವುದರಿಂದ, ಒಂದು ಆಟೋದಲ್ಲಿ ಸುಮಾರು 10 ಜನ ಪ್ರಯಾಣಿಕರನ್ನು ಕೂರಿಸಿಕೊಂಡು ಹೋಗುತ್ತಾರೆ. ಅವನು ಹೇಳಿದ ಕಡೆ ಹೋಗಬೇಕಾಗುತ್ತದೆ. ಬಸ್‌ನಿಲ್ದಾಣದ ಕಡೆಗೆ ಬರುವುದಾದರೆ ಅಲ್ಲಿಗೆ ಬನ್ನಿ ಎಂದು ಹೇಳಿ, ಅಲ್ಲಿಗೆ ಕರೆದುಕೊಂಡು ಬಿಡುತ್ತಾರೆ. ಇಲ್ಲವೆಂದರೆ, 1 ರಿಂದ 2 ಗಂಟೆಗಳ ಕಾಲ ಪ್ರಯಾಣಿಕರು ಕಾಯುವಂಥ ಪರಿಸ್ಥಿತಿ ಇದೆ. ಇಲ್ಲವೆಂದರೆ, ಅವರು ಕೇಳಿದಷ್ಟು ದುಡ್ಡು ಕೊಟ್ಟು ಪ್ರಯಾಣಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರ ಈ

ಸಂಬಂಧ ಏನು ಕ್ರಮ ತೆಗೆದುಕೊಳ್ಳುತ್ತದೆಂದು ತಿಳಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಅವರು ಮೂಲ ಕೇಳಿರತಕ್ಕಂಥ ಪ್ರಶ್ನೆಗೆ ಈಗೇನು 12 ಆಸನಗಳ ವಾಹನಗಳೇನಿವೆ, ಅದಕ್ಕಿಂತ ಹೆಚ್ಚು ಜನರನ್ನು ಹತ್ತಿಸಿಕೊಂಡು ಹೋಗುತ್ತಾರೆ.

**ಸಭಾಪತಿಯವರು:-** ಮಾನ್ಯ ಲಕ್ಷ್ಮಣ ಸವದಿಯವರೇ, ರಾಜ್ಯದ ಎಲ್ಲಾ ಕಡೆ ಈ ಸಮಸ್ಯೆ ಇದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಹೌದು. ಈ ಸಮಸ್ಯೆ ಇಡೀ ರಾಜ್ಯದಲ್ಲಿ ಇರತಕ್ಕಂಥದ್ದು. ನಾನು ಈ ಇಲಾಖೆಗೆ ಸಚಿವನಾಗಿ ಬಂದಮೇಲೆ ಅನೇಕ ದಿನಮಾನಗಳಿಂದ 12 ಸೀಟ್‌ಗಳ ವಾಹನಗಳಲ್ಲಿ ಸುಮಾರು 19, 20 ಮತ್ತು 25 ಜನರನ್ನು ಹತ್ತಿಸಿಕೊಂಡು ಹೋಗುತ್ತಿದ್ದರು. ಅದನ್ನು ಬದಲು ಮಾಡಿ, ಅವರಿಗೆ 19+1, 20+1 ಎನ್ನತಕ್ಕಂಥ ಒಂದು ಹೊಸ ನಿಯಮವನ್ನು ಜಾರಿಗೆ ತಂದು, ಅವರಿಗೆ ತೆರಿಗೆಯನ್ನು ಫಿಕ್ಸ್ ಮಾಡಿದ್ದೇವೆ. ಅವರಿಗೆ ಒಂದು ಸೀಟ್‌ಗೆ ಸುಮಾರು ರೂ.700 ಗಳು tax fix ಮಾಡಿದ್ದೇವೆ. ಎಲ್ಲಾ ಕಡೆಗಳಲ್ಲಿ ಪೊಲೀಸ್ ಇಲಾಖೆ ಮತ್ತು RTO ದವರಿಗೆ, Enforcement ದವರಿಗೆ ಕಾರ್ಯಾಚರಣೆ ಮಾಡಲು ಸೂಚನೆಯನ್ನು ಕೊಟ್ಟಿದ್ದೇವೆ. ಅವರ್‍ಯಾರು ಪರ್ಮಿಟ್‌ಗಳನ್ನು ಹೆಚ್ಚಿಗೆ ಮಾಡಿಕೊಳ್ಳುವುದಿಲ್ಲವೊ ಅಂಥವರನ್ನು ಹಿಡಿದು, ಅವರ ಮೇಲೆ ಕೇಸ್ ಹಾಕುತ್ತಿದ್ದಾರೆ. 12 ಸೀಟ್ ಇದ್ದುದನ್ನು 19+1, 20+1 ಎಂದು ನಿಗದಿಪಡಿಸಿ, ಟ್ಯಾಕ್ಸ್ ಫಿಕ್ಸ್ ಮಾಡಿಕೊಂಡು ಎಲ್ಲಾ ಕಡೆ ಪೊಲೀಸ್ ಇಲಾಖೆ ಮತ್ತು RTO Enforcement ದವರಿಗೆ ಸೂಚನೆಯನ್ನು ಕೊಟ್ಟು, ಅನೇಕ ಕಡೆಗಳಲ್ಲಿ ದಂಡಗಳನ್ನು ಹಾಕಿ, ಅದನ್ನು ಪರಿವರ್ತನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಇನ್ನೊಂದು ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಆಟೋದವರು ಅನೇಕ ರೈಲ್ವೇ ನಿಲ್ದಾಣಗಳಲ್ಲಿ ಅನೇಕ ಕಡೆ ಜನ ಬಯಸಿದ ಕಡೆಗೆ ಬರುವುದಿಲ್ಲ, ಬೇರೆ ಕಡೆಗೆ ಹೋಗುತ್ತಾರೆ ಎನ್ನತಕ್ಕಂಥದ್ದು ಇದೆ. ಇದಕ್ಕೂ ಕೂಡ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಅವರ Prepaid Autorickshaw ತೆಗೆದುಕೊಂಡ ಮೇಲೆ ಅವರು ಕಡ್ಡಾಯವಾಗಿ ಜನ ಕರೆದ ಕಡೆಗೆ ಹೋಗಲೇಬೇಕಾಗುತ್ತದೆ. ಅಂಥವರು ಯಾರಾದರು ತಿರಸ್ಕಾರ ಮಾಡಿದರೆ, ತಕ್ಷಣವೇ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪ್ಯಾಸೆಂಜರ್ ವಾಹನಗಳಿಗೆ ಸೀಟ್ ಹೆಚ್ಚಿಗೆ ಮಾಡಿದ್ದಾರೆ. ಆದರೆ, ಗೂಡ್ಸ್ ವೆಹಿಕಲ್‌ಗಳಲ್ಲಿ ಪ್ಯಾಸೆಂಜರ್

ಹೋಗುತ್ತಿದ್ದಾರೆ. ದಯವಿಟ್ಟು ಅದನ್ನು ತಡೆಯುವುದಕ್ಕೆ ಕ್ರಮ ಕೂಗೊಳ್ಳಬೇಕು. Prepaid Autorickshaw Stand ಗಳೇನಿವೆ, ಅವು work ಮಾಡುವುದಿಲ್ಲ. ಕಾಟಾಚಾರಕ್ಕೆ ಬೆಳಗ್ಗೆ ಸುಮಾರು 10 ಅಥವಾ 11 ಗಂಟೆಗೆ ಆರಂಭವಾಗುತ್ತದೆ. ಬೆಳಗ್ಗೆ ಬೇರೆ ಬೇರೆ ಊರುಗಳಿಂದ ರೈಲ್ವೇ ನಿಲ್ದಾಣಗಳಿಗೆ ಬಂದಂಥವರಿಗೆ ಬಹಳ ತೊಂದರೆಯಾಗುತ್ತಿದೆ. ಅಲ್ಲಿ ಒಬ್ಬೊಬ್ಬರು ಪೊಲೀಸ್ ಇರುತ್ತಾರೆ.

**(ಮುಂದು)**

**(299)5.3.2021/12.00/ಎಂ.ಎಂ–ಆರ್.ಎಸ್**

**ಶ್ರೀ ಆರ್. ಪ್ರಸನ್ನ ಕುಮಾರ್ (ಮುಂದು):–**

ಒಂದು ದಿವಸವೂ ಸಾರಿಗೆ ಅಧಿಕಾರಿಗಳು ಬಂದು ಇದನ್ನು ನೋಡಲೇ ಇಲ್ಲ. ಅಲ್ಲಿ ಒಬ್ಬ ಕಂಟುಛಿಜ ಅಂಟಿಣಚಿಛಿಟಜ ಇರುತ್ತಾನೆ, ಅವನೊಬ್ಬನೇ ಪ್ರಯತ್ನ ಮಾಡುತ್ತಾನೆ. ಸಾರಿಗೆ ಅಧಿಕಾರಿಗಳಿಗೆ ಅದು ಗೊತ್ತಿದ್ದರೂ ಅದನ್ನು ನೋಡಿಕೊಂಡು ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ದಯವಿಟ್ಟು ಸರ್ಕಾರ ಅವರಿಗೆ ಸೂಕ್ತವಾದ ಎಚ್ಚರಿಕೆ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಾರಿಗೆ ಇಲಾಖೆ ಮತ್ತು ಗೃಹ ಇಲಾಖೆಯವರು ಸೇರಿ ಒಂದು ಜಂಟಿ ಸಭೆ ಮಾಡುತ್ತೇವೆ. ಇದನ್ನು ತಡೆಯುವುದಕ್ಕೆ ಪೊಲೀಸರ ಮುಖಾಂತರ ಏನೇನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 762**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಒಟ್ಟು ಕೃಷಿ ವಿಶ್ವವಿದ್ಯಾಲಯಗಳೆಷ್ಟು, ಅಲ್ಲಿರುವಂತಹ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೆ. ಮುಂದುವರೆದು ಖಾಲಿಯಿರುವ ಹುದ್ದೆಗಳನ್ನು ಯಾವಾಗ ನೇಮಕಾತಿ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ವಿವರವಾದಂತಹ ಉತ್ತರ ಕೊಟ್ಟಿದ್ದಾರೆ. ಆದರೆ ನನ್ನ ಪ್ರಶ್ನೆ ಇಷ್ಟೇ. ರಾಜ್ಯದಲ್ಲಿ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳಿವೆ. ಈ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಶೇ.50ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ವಿಶೇಷವಾಗಿ ಹೊಸದಾಗಿ ಆರಂಭವಾದಂತಹ ರಾಯಚೂರು ಮತ್ತು ಶಿವಮೊಗ್ಗ ವಿಶ್ವವಿದ್ಯಾಲಯಗಳಲ್ಲಿ ಶೇ.60ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಉದಾಹರಣೆಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಒಟ್ಟು 2215 ಹುದ್ದೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸೇರಿಸಿ 1230 ಹುದ್ದೆಗಳು ಖಾಲಿ ಇವೆ. ಧಾರವಾಡದಲ್ಲಿ 1669ರೊಳಗೆ ಬೋಧಕ ಮತ್ತು ಬೋಧಕೇತರ ಸೇರಿಸಿ 883 ಹುದ್ದೆಗಳು ಖಾಲಿ ಇವೆ. ಅದೇ ರೀತಿ ರಾಯಚೂರಿನಲ್ಲಿ 811, ಶಿವಮೊಗ್ಗದಲ್ಲಿ 588 ಬೋಧಕ ಮತ್ತು ಬೋಧಕೇತರ ಹುದ್ದೆಗಳು ಖಾಲಿ ಇವೆ. ವಿಶೇಷವಾಗಿ ಬೋಧಕರ ಹುದ್ದೆ ಖಾಲಿ ಇದ್ದಾಗ ಅಲ್ಲಿ ಬೋಧನಾ ಕಾರ್ಯ ಕುಂಠಿತವಾಗುತ್ತದೆ ಮತ್ತು ಗುಣಮಟ್ಟದ ಶಿಕ್ಷಣ ಕೊಡುವುದಕ್ಕೆ ಆಗುವುದಿಲ್ಲ. ಅದೇ ರೀತಿ ಬೋಧಕೇತರ ಹುದ್ದೆ ಹೆಚ್ಚು ಖಾಲಿ ಇದ್ದಾಗ ಕುಲಪತಿಗಳು ಆಡಳಿತವನ್ನು ಸರಿಯಾಗಿ ನಡೆಸುವುದಕ್ಕೆ ಆಗುವುದಿಲ್ಲ. ಒಟ್ಟಾರೆ ಕೃಷಿ ವಿಶ್ವವಿದ್ಯಾಲಯದ ಪ್ರಗತಿಯಾಗುವುದಿಲ್ಲ. ಆ ದಿಸೆಯೊಳಗೆ ಕೃಷಿ ಸಚಿವರಲ್ಲಿ ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಕೋವಿಡ್ ಅವಧಿಯೊಳಗೆ ಇಡೀ ರಾಜ್ಯವನ್ನು, ಪ್ರತಿ ಜಿಲ್ಲೆಯನ್ನು ಸಂಚಾರ ಮಾಡಿ ಯಾವ ರೀತಿ ಕೃಷಿಕರಿಗೆ ಆತ್ಮವಿಶ್ವಾಸ ತುಂಬಿ ಕೃಷಿ ಚಟುವಟಿಕೆಗಳು ನಿಲ್ಲಲಾರದಂತೆ ಏನು ನೋಡಿಕೊಂಡಿರಿ ಅದೇ ರೀತಿ ನಮ್ಮ ರಾಜ್ಯದಲ್ಲಿರುವಂತಹ ಈ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳನ್ನು; ಏಕೆಂದರೆ, ನೀವು ಜನರ ಪ್ರೀತಿಗೆ ಪಾತ್ರರಾಗಿರುವಿರಿ, ರೈತರು ನಿಮಗೆ ಅಭಿನಂದಿಸಿದ್ದಾರೆ. ಅದೇ ರೀತಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಏನು ಹುದ್ದೆಗಳು ಖಾಲಿ ಇವೆ, ಆ ಎಲ್ಲಾ ಹುದ್ದೆಗಳನ್ನು ತುಂಬುವುದಕ್ಕೆ ತಾವು ವಿಶೇಷವಾದಂತಹ ಆಸಕ್ತಿ ವಹಿಸಬೇಕು. ಆರ್ಥಿಕ ಇಲಾಖೆಯ ಜೊತೆ ಮಾತನಾಡಿ ಬೇಗನೆ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಒಂದು ಉತ್ತರ ಕೊಟ್ಟಿದ್ದೀರಿ, ನೇಮಕಾತಿಯನ್ನು ಯಾವಾಗ ಮಾಡುತ್ತೀರಿ ಎಂದಾಗ ಕೋವಿಡ್ ಹಿನ್ನೆಲೆಯಲ್ಲಿ ಆರ್ಥಿಕ ಮಿತವ್ಯಯವನ್ನು ಪಾಲಿಸುವುದು ಬಹಳ ಅವಶ್ಯಕವಾಗಿದೆ.

**ಸಭಾಪತಿಯವರು:–** ಮಾನ್ಯ ಸಂಕನೂರರವರೇ, ಮಾನ್ಯ ಸಚಿವರು ಉತ್ತರ ಹೇಳಲು ಬಿಡಿ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಟ್ಟಾರೆ ಉತ್ತರ ಕೊಡಲಿ. ಕೋವಿಡ್ ಹಿನ್ನೆಲೆಯಲ್ಲಿ ಆರ್ಥಿಕ ಮಿತವ್ಯಯವನ್ನು ಪಾಲಿಸಬೇಕಾದ ಹಿನ್ನೆಲೆಯೊಳಗೆ ನೇಮಕಾತಿಯನ್ನು ನಿಲ್ಲಿಸಿದ್ದೇವೆ ಎಂದು ಹೇಳಿದ್ದೀರಿ. ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಇದೇ ರೀತಿ ಆರ್ಥಿಕ ಮಿತವ್ಯಯವನ್ನು ಪ್ರೈಮರಿ, ಸೆಕೆಂಡರಿ ಮತ್ತು ಹೈಯರ್ ಎಜುಕೇಷನ್‌ನಲ್ಲಿ ವಹಿಸಿದ್ದರು. ಆದರೆ ಉನ್ನತ ಶಿಕ್ಷಣ ಸಚಿವರಾದಂತಹ ಶ್ರೀ ಅಶ್ವಥ್ ನಾರಾಯಣ್‌ರವರು ಮತ್ತು ಪ್ರೈಮರಿ ಮತ್ತು ಸೆಕೆಂಡರಿ ಶಿಕ್ಷಣ ಸಚಿವರಾದ ಶ್ರೀ ಸುರೇಶ್ ಕುಮಾರ್‌ರವರು ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಈಗಾಗಲೇ ಅಲ್ಲಿ ಆರ್ಥಿಕ ಮಿತವ್ಯಯವನ್ನು ತಡೆಹಿಡಿದಿರುವುದನ್ನು ವಾಪಸ್ ತೆಗೆದಿದ್ದಾರೆ. ನಿಮಗೆ ಆ ಆದೇಶದ ಪ್ರತಿಗಳನ್ನು ಕೊಡುತ್ತೇನೆ. ಪ್ರೈಮರಿ, ಸೆಕೆಂಡರಿ ಶಿಕ್ಷಣ ಇಲಾಖೆಯೊಳಗೆ ಏನು ಆರ್ಥಿಕ ಮಿತವ್ಯಯವನ್ನು ಹೇರಿದ್ದರು ಅದನ್ನು ವಾಪಸ್ ತೆಗೆದುಕೊಂಡಿದ್ದಾರೆ. ಹೈಯರ್ ಎಜುಕೇಷನ್‌ನಲ್ಲಿ ಕೂಡ ವಾಪಸ್ ತೆಗೆದುಕೊಂಡಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಕೂಡ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ನಿಮಗೆ ಯಾವ ರೀತಿ ಆರ್ಥಿಕ ಮಿತವ್ಯಯವನ್ನು ನಿರ್ಬಂಧ ಮಾಡಿದ್ದಾರೆ ಅದಕ್ಕೆ ತಾವು ಕೂಡ ಒತ್ತಾಯ ಮಾಡಿ ಆರ್ಥಿಕ ಮಿತವ್ಯಯಕ್ಕೆ ಕೊಟ್ಟಿರುವ ಸ್ಟೇ ಅನ್ನು ವಾಪಸ್ ಪಡೆದು ಆದಷ್ಟು ಬೇಗನೆ ಒಂದು ತಿಂಗಳೋ, ಎರಡು ತಿಂಗಳೋ ಹೇಳಿ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಎಸ್.ವ್ಹಿ. ಸಂಕನೂರರವರು ಮಾನ್ಯ ಕೃಷಿ ಸಚಿವರಿಗೆ ಸರ್ಕಾರದ ಆದೇಶ ಪತ್ರದ ಪ್ರತಿಗಳನ್ನು ನೀಡಿದರು)**

**ಶ್ರೀ ಬಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೃಷಿ ವಿಶ್ವವಿದ್ಯಾಲಯಗಳಲ್ಲಿ ಹುದ್ದೆಗಳು ಖಾಲಿ ಇರುವುದು ಸತ್ಯವಾಗಿದೆ. ಕೋವಿಡ್ ನಿಯಮಗಳ ಪ್ರಕಾರ ಯಾವುದೇ ನೇಮಕಾತಿಗಳು ಆಗಿರಲಿಲ್ಲ. ಇದು ಅತಿ ಜರೂರಾಗಿರುವುದರಿಂದ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ವಿಶೇಷವಾದ ಪ್ರಸ್ತಾವನೆಗಳನ್ನು ಸಲ್ಲಿಸಿ ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಕ್ರಮ ಜರುಗಿಸುತ್ತದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ನೀವು ಮುಖ್ಯಮಂತ್ರಿಯವರನ್ನು ಭೇಟಿ ಮಾಡಬಾರದು; ಫೈಲ್ ತೆಗೆದುಕೊಂಡು ಹೋಗಿ ಅಪ್ರೂವ್ ಮಾಡಿಸಿಕೊಂಡು ಬರಬೇಕು. ಮುಖ್ಯಮಂತ್ರಿಯವರನ್ನು ಭೇಟಿಯಾಗುವುದಕ್ಕೆ ಅವರೇನು ನಿಮ್ಮ ಬೀಗರೇ? ಅವರು ಹೇಳುತ್ತಿರುವುದು ಅಷ್ಟು ಪ್ರಮುಖವಾಗಿದೆ,

ಫೈಲ್ ತೆಗೆದುಕೊಂಡು ಹೋಗಿ ಅಪ್ರೂವ್ ಮಾಡಿಸಿಕೊಂಡು ಬನ್ನಿ. ಕೃಷಿ ಸಚಿವರಾದ ನೀವು ಇಂತಹವುಗಳನ್ನು ಸರಿ ಮಾಡಿ.

**ಶ್ರೀ ಬಿ.ಸಿ. ಪಾಟೀಲ್:–** ಫೈಲ್ ತೆಗೆದುಕೊಂಡು ಹೋಗುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ನಾನು ಸಚಿವರಿಗೆ ಆದೇಶದ ಪ್ರತಿಗಳನ್ನು ಕೊಟ್ಟಿದ್ದೇನೆ. ಪ್ರೈಮರಿ, ಸೆಕೆಂಡರಿ ಶಿಕ್ಷಣ ಇಲಾಖೆಯವರು ಡಿಣಖಜಡಿಚಿತಿ ಮಾಡಿರುವುದನ್ನು ಕೊಟ್ಟಿದ್ದೇನೆ. ಅವರು ಮನಸ್ಸು ಮಾಡಿ 1–2 ತಿಂಗಳೊಳಗೆ ಈ ಕೆಲಸವನ್ನು ಮಾಡಲು ತಿಳಿಸಿ. ಅದು ತುಂಬಾ ಪ್ರಮುಖವಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಅವರು ಹೇಳುತ್ತಿರುವುದು ಸರಿ ಇದೆ. ಇದನ್ನು ಮಾಡಲು ಎಷ್ಟು ಸಮಯ ಬೇಕೆಂದು ತಿಳಿಸಿ.

**ಶ್ರೀ ಬಿ.ಸಿ. ಪಾಟೀಲ್:–** ನನಗೆ ಈ ಆದೇಶದ ಪ್ರತಿ ಕೊಟ್ಟಿದ್ದಾರೆ, ಈ ಮೊದಲು ನನಗೆ ಈ ಆದೇಶದ ಪ್ರತಿ ಬಂದಿರಲಿಲ್ಲ, ಬಂದಿದ್ದರೆ ಇಷ್ಟು ಹೊತ್ತಿಗೆ ಮುಖ್ಯಮಂತ್ರಿಯವರ ಹತ್ತಿರ ಹೋಗುತ್ತಿದ್ದೆ. ಇದನ್ನು ಆದಷ್ಟು ಬೇಗ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 772**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರ ಸಿಕ್ಕಿದೆ. ತಾವೇ ತಿಳಿಸಿದ ಹಾಗೆ ಈ ರಾಜ್ಯದಲ್ಲಿ 551 ಸರ್ಕಾರಿ ಬಸ್ ನಿಲ್ದಾಣಗಳಿವೆ. ಬೆಂಗಳೂರು, ಮೈಸೂರುನಂತಹ ನಗರಗಳನ್ನು ಬಿಟ್ಟರೆ ಕೆಲವು ಮಟ್ಟಿಗೆ ಜಿಲ್ಲಾ ಕೇಂದ್ರಗಳಲ್ಲೂ ಪರವಾಗಿಲ್ಲ. ಇನ್ನುಳಿದ ಬಹುಪಾಲು ಜಿಲ್ಲಾ ಕೇಂದ್ರಗಳು, ತಾಲ್ಲೂಕು, ಹೋಬಳಿ ಕೇಂದ್ರಗಳ ಬಸ್ ನಿಲ್ದಾಣಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ತಾವೇ ಒಪ್ಪಿಕೊಂಡಂತೆ 165 ಬಸ್ ನಿಲ್ದಾಣಗಳಲ್ಲಿ 66 ಬಸ್ ನಿಲ್ದಾಣಗಳಿಗೆ ಮಹಿಳೆಯರ ವಿಶ್ರಾಂತಿ ಕೊಠಡಿಗಳೇ ಇಲ್ಲ. This is very much needed. ಕೋವಿಡ್ ಆದ ಮೇಲೆ ಎಂದು ತಾವು ಒಪ್ಪಿಕೊಂಡಿದ್ದೀರಿ. ಶುಚಿತ್ವದ ನಿರ್ವಹಣೆಗೆ ಎಲ್ಲಿ ಗುತ್ತಿಗೆ ಕೊಟ್ಟಿದ್ದೀರಿ ಅಲ್ಲಿ ಚೆನ್ನಾಗಿದೆ. ಗುತ್ತಿಗೆ ಇಲ್ಲದೇ ನಿಮ್ಮವರೇ manage ಮಾಡುತ್ತಾರಲ್ಲ ಅಲ್ಲಿ ನಾವು ಮುಖವನ್ನೂ ಹಾಕುವುದಕ್ಕಾಗುವುದಿಲ್ಲ, ಹೋಗುವುದಕ್ಕೂ ಆಗುವುದಿಲ್ಲ. ದಯಮಾಡಿ ಈ ರಾಜ್ಯದಲ್ಲಿ ಕೊರತೆಯಿರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಮಹಿಳೆಯರ ವಿಶ್ರಾಂತಿ ಕೊಠಡಿಯನ್ನು ಮತ್ತು ಸ್ವಚ್ಛತೆಯನ್ನು ಮತ್ತು ಶೌಚಾಲಯಗಳ ನಿರ್ವಹಣೆಯ ಜವಾಬ್ದಾರಿಗೆ ತಾವು ಕಟಿಬದ್ಧರಾಗಬೇಕು. ನನ್ನ ಇನ್ನೊಂದು ಸಲಹೆಯೇನೆಂದರೆ, ಏನು Satellite Bus Station ಮಾದರಿಯಲ್ಲಿ ಬೆಂಗಳೂರನ್ನು ಮಾಡಿದ್ದೀರೋ ಅದೇ ಮಾದರಿಯಲ್ಲಿ ಎಲ್ಲಾ ಕಡೆ ಬಸ್ ನಿಲ್ದಾಣಗಳನ್ನು ಮಾಡಿ. ಅದರಿಂದ ನಿಮಗೆ ಆದಾಯವೂ ಬರುತ್ತದೆ ಜೊತೆಗೆ ಬಸ್ ನಿಲ್ದಾಣವೂ ಆಗುತ್ತದೆ. ಜನರು ಬಸ್ಸುಗಳಿಗೆ ಕಾಯುವ ಬದಲು ಅಲ್ಲಿ ಏನಾದರೂ ಶಾಪಿಂಗ್ ಅನ್ನೂ ಮಾಡುತ್ತಾರೆ, ಹಣ, ಬಾಡಿಗೆ ಎಲ್ಲವೂ ಬರುತ್ತದೆ. ಆ ಮಾದರಿಯಲ್ಲಿ ಹೋಗುವುದಾದರೆ ಜನರು ಬಸ್ ನಿಲ್ದಾಣಕ್ಕೆ ಬರಲು ಇಷ್ಟಪಡುತ್ತಾರೆ. ಆದ್ದರಿಂದ ಮೊದಲು ಮಹಿಳೆಯರ ವಿಶ್ರಾಂತಿ ಕೊಠಡಿ, maintenance, ಶೌಚಾಲಯ ಮತ್ತು ಸ್ಯಾಟಲೈಟ್ ಮಾದರಿಯ ಹೊಸ ಬಸ್ ನಿಲ್ದಾಣದ ಆಲೋಚನೆಯ ಬಗ್ಗೆ ಉತ್ತರ ಹೇಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಶ್ರೀಕಂಠೇಗೌಡರು ಅನೇಕ ಕಡೆ ಇನ್ನೂ ಮಹಿಳೆಯರ ವಿಶ್ರಾಂತಿ ಗೃಹಗಳಿಲ್ಲ, ಅವುಗಳನ್ನು ತುರ್ತಾಗಿ ಪ್ರಾರಂಭ ಮಾಡಬೇಕು, ಅದು ಅತ್ಯಂತ ಅವಶ್ಯಕತೆ ಇರುವುದರಿಂದ ಅದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳಿದರು. ಖಂಡಿತವಾಗಲೂ ನಿಮ್ಮ ಸಲಹೆಯನ್ನು ಸ್ವೀಕಾರ ಮಾಡುತ್ತೇವೆ. ಈ ವರ್ಷಕ್ಕೆ ಕೊರೋನಾ ಬಂದ ಕಾರಣದಿಂದ ಆದಾಯದಲ್ಲಿ ಬಹಳ ಕೊರತೆಯಾಗಿದೆ. ಬಹುಶಃ ನೀವು ಅದನ್ನು ತಿಳಿದುಕೊಂಡಿದ್ದೀರಿ ಎಂದು ಭಾವಿಸಿದ್ದೇನೆ. ಕೋವಿಡ್ ಬಂದ ಮೇಲೆ ನಮ್ಮ ನಾಲ್ಕು

ನಿಗಮಗಳಲ್ಲಿ ಸುಮಾರು 4,000 ಕೋಟಿಯಷ್ಟು ಆದಾಯದಲ್ಲಿ ಕೊರತೆಯಾಗಿದೆ. ನಿವ್ವಳ ಹಾನಿಯಾಗಿರುವಂತಹದ್ದು ಸುಮಾರು 2980 ಕೋಟಿ ರೂಪಾಯಿಗಳು. ಹೀಗಾಗಿ ಅನೇಕ ಕಡೆ ಮಹಿಳೆಯರಿಗೆ ವಿಶ್ರಾಂತಿ ಗೃಹ ಮಾಡಬೇಕಾಗಿದೆ, ಅನೇಕ ಕಡೆ ನಮ್ಮ ಶಾಸಕರು ಬಸ್ ನಿಲ್ದಾಣಗಳನ್ನು, ವಿಶ್ರಾಂತಿ ಗೃಹಗಳನ್ನು ಮತ್ತು ಹೊಸ ಬಸ್ಸುಗಳನ್ನು ಕೇಳುತ್ತಿದ್ದಾರೆ. ಈಗಾಗಲೇ ಇದನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇವೆ. ಈ ವರ್ಷದ ಆಯವ್ಯಯದಲ್ಲಿ ನಮಗೆ ನಿರೀಕ್ಷೆ ಪ್ರಕಾರ ಹಣ ಕೊಡಬೇಕೆಂದು ಕೇಳಿದ್ದೇವೆ. ಸಧ್ಯದ ಮಟ್ಟಿಗೆ ನಮ್ಮ ಆದಾಯದ ಚೌಕಟ್ಟಿನಲ್ಲಿ ಏನು ಸಹಾಯವಾಗುತ್ತದೆ ಅದನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಬಜೆಟ್ ಆದ ಮೇಲೆ ಪ್ರಥಮ ಆದ್ಯತೆಯನ್ನು ನಾವು ಮಹಿಳೆಯರ ವಿಶ್ರಾಂತಿ ಗೃಹಕ್ಕೆ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರ ಅನೇಕ ಯೋಜನೆಗಳನ್ನು ಕೊಟ್ಟಿರುವುದು ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಅದು ಅವಶ್ಯಕವಾಗಿದೆ ಎಂಬ ಅನೇಕ ಸಲಹೆಗಳನ್ನು ಕೊಟ್ಟಿದ್ದರು. ಅದರ ಜೊತೆಗೆ ತಾವು ಹೇಳಿದ ಹೊಸ ಸ್ಯಾಟಲೈಟ್ ಬಸ್ ನಿಲ್ದಾಣಗಳನ್ನು ಮಾಡಬೇಕೆಂಬ ಬಗ್ಗೆ ನಾವು ಕೂಡ ಆಸಕ್ತಿ ವಹಿಸಿದ್ದೇವೆ. ಏಕೆಂದರೆ, ಹೊಸ ತರಹದ ಬಸ್ ನಿಲ್ದಾಣಗಳನ್ನು ನಿರ್ಮಾಣ ಮಾಡಿದಾಗ ಪ್ರಯಾಣಿಕರು ಬಂದಂತಹ ಸಂದರ್ಭದಲ್ಲಿ; ಉದಾಹರಣೆಗೆ ಮೊನ್ನೆ ದಾವಣಗೆರೆಯಲ್ಲಿ ಸುಮಾರು 100 ಕೋಟಿ ರೂಪಾಯಿಗಳ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಹೊಸ ಬಸ್ ನಿಲ್ದಾಣವನ್ನು ಪ್ರಾರಂಭ ಮಾಡಲು ಅಡಿಗಲ್ಲು ಹಾಕಿದೆವು. ಅಲ್ಲಿ ಶಾಪಿಂಗ್ ಕಾಂಪ್ಲೆಕ್ಸ್, ಸಿನಿಮಾ ಥಿಯೇಟರ್, ಎಲ್ಲವನ್ನೂ ಇಟ್ಟುಕೊಂಡಿದ್ದೇವೆ. ಅಂದರೆ ಪ್ರಯಾಣಿಕ ಬಂದಂತಹ ಸಂದರ್ಭದಲ್ಲಿ ಅವನ ಶಾಪಿಂಗ್, ಮನರಂಜನೆ ಈ ರೀತಿಯ ವ್ಯವಸ್ಥೆಗಳೆಲ್ಲ ಇರಬೇಕು ಮತ್ತು ತನ್ನ ಬಸ್ ಬಂದಂತಹ ಸಮಯದಲ್ಲಿ ಬಸ್ ಹಿಡಿದು ಹೋಗುವ ವ್ಯವಸ್ಥೆಯಾಗಲಿ ಎನ್ನುವ ವಿಚಾರವನ್ನಿಟ್ಟುಕೊಂಡು ಹೆಚ್ಚಿನ ಆದ್ಯತೆ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ನಿಮ್ಮ ಸಲಹೆಯನ್ನು ನಾವು ಅತ್ಯಂತ ಗೌರವದಿಂದ ಸ್ವೀಕಾರ ಮಾಡುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ಕಾಂಟ್ರ್ಯಾಕ್ಟ್ ಇಲ್ಲದಿರುವ ಕಡೆ ಹಳ್ಳಿಗಳ bus stand maintenance ಬಗ್ಗೆ ಮಾಹಿತಿ ಬೇಕು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಶೌಚಾಲಯಗಳ ನಿರ್ವಹಣೆಯನ್ನು outsource ಗೆ ಕೊಟ್ಟಿದ್ದೇವೆ. ಇಲಾಖೆಯಿಂದ ಮಾಡುತ್ತಿರುವುದನ್ನು ಕೂಡ ಮುಂದಿನ ದಿನಮಾನಗಳಲ್ಲಿ outsource ಗೆ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. Outsource ಗೆ ಕೊಟ್ಟರೆ ಅವರ ಮೇಲೆ ನಾವು ಹೆಚ್ಚು

ಒತ್ತಡ ಹಾಕಿ ಸುರಕ್ಷತೆ ಮತ್ತು ಸ್ವಚ್ಛತೆಯನ್ನು ಕಾಪಾಡುವುದು ಎಲ್ಲವೂ ಆಗುತ್ತದೆ. ಮುಂದಿನ ದಿನಮಾನಗಳಲ್ಲಿ ಎಲ್ಲವನ್ನೂ ಹಂತ ಹಂತವಾಗಿ outsource ಮಾಡುತ್ತೇವೆ.

**(ಮುಂದು)**

**(300) 05-03-2021/ 12-10/ ಕೆಹೆಚ್-ಆರ್‌ಎನ್**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಆರ್.ಧರ್ಮಸೇನರವರೇ, ತಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ. ಈಗಾಗಲೇ ತಾವು ಕೇಳಿರುವಂತಹ ಪ್ರಶ್ನೆಗೆ ಉತ್ತರ ಬಂದಿದ್ದು, ಅದಕ್ಕೆ ಸಂಬಂದಪಟ್ಟ ಮಾನ್ಯ ಸಚಿವರೇ ಉತ್ತರವನ್ನು ಕೊಡಬೇಕೆನ್ನುವ ಸಲುವಾಗಿ ಅವರು ಅನುಮತಿಯನ್ನು ತೆಗೆದುಕೊಂಡಿದ್ದು, ಸಂಬಂಧಪಟ್ಟ ಮಾನ್ಯ ಸಚಿವರೇ ಉತ್ತರವನ್ನು ಕೊಡಲಿ ಎನ್ನುವ ಬಗ್ಗೆ ನನ್ನ ಸಹಮತಿಯೂ ಕೂಡ ಇದೆ. ಆದ್ದರಿಂದ, ನಾನು ಈ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಬೇರೆ ಬೇರೆ ಮಾನ್ಯ ಸದಸ್ಯರು ವರ್ಗಾವಣೆ ವಿಷಯದ ಬಗ್ಗೆ ಪ್ರಶ್ನೆಗಳನ್ನು ಏನು ಕೇಳಿದ್ದಾರೆ. ದಯಮಾಡಿ, ಅದನ್ನು ತಾವು initial stage ನಲ್ಲಿ ನೋಡಬೇಕು. ಸದನಕ್ಕೆ ಬಂದಾಗ ವರ್ಗಾವಣೆ ವಿಚಾರ ಎಂದು ಹೇಳಬಾರದು. ಇದರ ಬಗ್ಗೆ ದಯಮಾಡಿ, ತಾವು ಸಂಬಂಧಪಟ್ಟ ಮಾನ್ಯ ಸಚಿವರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು.

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 05ನೇ ಮಾರ್ಚ್ 2021 ಸಮೂಹ–5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 71 ಪ್ರಶ್ನೆಗಳ ಪೈಕಿ 28 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)

## 04 .ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

### ಅ) ವಿಷಯ:-ಗ್ರಂಥಾಲಯದ ಮೇಲ್ವಿಚಾರಕರ ಕನಿಷ್ಟ ವೇತನ ರೂ.13,200 ಗಳಿಗೆ ನಿಗದಿಪಡಿಸಿ, ಗ್ರಂಥಾಲಯದ ಅವಧಿ ಕಡಿತ ಮಾಡಿರುವ ಬಗ್ಗೆ.

***

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯದ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ, ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಪ್ರತಿ ಗ್ರಾಮ ಪಂಚಾಯತಿಗೆ ಒಂದು ಗ್ರಂಥಾಲಯವನ್ನು ಪ್ರಾರಂಭಿಸಿದ್ದು, ಗ್ರಾಮ ಪಂಚಾಯತ್ ಗ್ರಂಥಾಲಯಗಳು, ಅಲೆಮಾರಿ ಕೊಳಚೆ ಹಾಗೂ ಸಮುದಾಯ ಮಕ್ಕಳ ಕೇಂದ್ರ ಗ್ರಂಥಾಲಯಗಳು ಸೇರಿದಂತೆ ಒಟ್ಟು 6055 ಗ್ರಂಥಾಲಯಗಳಲ್ಲಿ 6055 ಮೇಲ್ವಿಚಾರಕರುಗಳು ಕಳೆದ 25 ವರ್ಷಕ್ಕೂ ಹೆಚ್ಚು ವರ್ಷಗಳಿಂದ ಯಾವುದೇ ಸರ್ಕಾರಿ ಸವಲತ್ತುಗಳು ಇಲ್ಲದೆ ಗೌರವಧನ ಎಂಬ ಹೆಸರಿನಲ್ಲಿ ಬೆಳಿಗ್ಗೆ 9 ರಿಂದ 12.30 ರವರೆಗೆ ಸಂಜೆ 4 ರಿಂದ 8 ರವರೆಗೆ ಕೆಲಸ ನಿರ್ವಹಿಸುತ್ತಿರುವುದು ಸರಿಯಷ್ಟೆ. ದಿನಾಂಕ:05-08-2016 ರಂದು ಗ್ರಾಮ ಪಂಚಾಯತ್ ಗ್ರಂಥಾಲಯ ಮೇಲ್ವಿಚಾರಕರ ಕನಿಷ್ಟ ವೇತನ ರೂ.13,200/- ಗಳನ್ನು ಜಾರಿ ಮಾಡಿ ಕರ್ನಾಟಕ ರಾಜ್ಯ ಪತ್ರದಲ್ಲಿ ಕಾರ್ಮಿಕ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಇದನ್ನು ತಿಳಿದ ಕೆಲವು ಅಧಿಕಾರಿಗಳು ಯಾವುದೇ ಓದುಗಾರರಾಗಲಿ, ಸಾಹಿತ್ಯಗಳಾಗಲಿ, ಜನಪ್ರತಿನಿಧಿಗಳಾಗಲಿ, ಗ್ರಂಥಾಲಯದ ಅವಧಿಯನ್ನು ಕಡಿತಗೊಳಿಸುವಂತೆ ಮನವಿ ಸಲ್ಲಿಸದಿದ್ದರೂ, ಗ್ರಂಥಾಲಯದ ಅವಧಿಯನ್ನು 4 ಗಂಟೆ ಅವಧಿಗೆ ಕಡಿತ ಮಾಡಿರುತ್ತಾರೆ. ಇದರಿಂದ ಮೇಲ್ವಿಚಾರಕರಿಗೆ ಕನಿಷ್ಟ ವೇತನ ಸಿಗದೆ ಅನ್ಯಾಯವಾಗಿರುತ್ತದೆ.

ಆದ್ದರಿಂದ, ಸದರಿ ಮೇಲ್ವಿಚಾರಕರನ್ನು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ನೀಡಿ ಪ್ರೌಢಶಾಲೆಗಳಲ್ಲಿ ಗ್ರಂಥಾಲಯವನ್ನು ನಡೆಸುವುದರಿಂದ, ಶಾಲಾ ಮಕ್ಕಳಿಗೆ ಅನುಕೂಲವಾಗುತ್ತದೆ. ಅಲ್ಲದೇ ಗ್ರಂಥಾಲಯದ ಅವಧಿಯನ್ನು 8 ಗಂಟೆಗಳ ಕಾಲ ವಿಸ್ತರಿಸಿ ಮೇಲ್ವಿಚಾರಕರುಗಳಿಗೆ ಕಾರ್ಮಿಕ ಇಲಾಖೆಯ ಆದೇಶದಂತೆ ಕನಿಷ್ಟ ವೇತನವನ್ನು ನೀಡಿ ಸೇವಾ ಭದ್ರತೆ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿ ಈ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರವರು ಕೇಳಿರುವಂತಹ ಗ್ರಂಥಾಲಯದ ಮೇಲ್ವಿಚಾರಕರ ಕನಿಷ್ಟ ವೇತನದ ಕುರಿತು ಮಾನ್ಯ ಪೌರಾಡಳಿತ ಸಚಿವರಲ್ಲಿ ಉತ್ತರವನ್ನು ಕೇಳಿದ್ದಾರೆ. ಗ್ರಂಥಾಲಯದ ಮೇಲ್ವಿಚಾರಕರ ಕನಿಷ್ಟ ವೇತನದ ವಿಚಾರವು ಪಂಚಾಯತ್ ರಾಜ್ ಇಲಾಖೆಯಲ್ಲಿ ಇದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಉತ್ತರವನ್ನು ತರಿಸಿಕೊಡುತ್ತೇವೆ ಎಂದು ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾನಾಯಕರೇ, ಗ್ರಂಥಾಲಯದ ಮೇಲ್ವಿಚಾರಕರ ಕನಿಷ್ಠ ವೇತನದ ವಿಚಾರವು ಪಂಚಾಯತ್ ರಾಜ್ ಇಲಾಖೆಯಲ್ಲಿಯೇ ಇರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾನಾಯಕರೇ, ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಕೊಡಿಸಿ. ಅಲ್ಲಿ ಏನಾಗಿದೆಯೆಂದರೆ, ಗ್ರಂಥಾಲಯದ ಅವಧಿಯನ್ನು 4 ಗಂಟೆಯ ಅವಧಿಗೆ ಕಡಿತ ಮಾಡಿರುತ್ತಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರವರೇ, ಶೂನ್ಯವೇಳೆಯಲ್ಲಿ ಈ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

**ಆ) ವಿಷಯ:– ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿನ ಖಾಸಗಿ ಬಿ.ಇಡಿ. ಕಾಲೇಜುಗಳಲ್ಲಿ ಸೀಟು ಮಾರಾಟ ದಂಧೆ ನಡೆಸುತ್ತಿರುವ ಬಗ್ಗೆ.**

***

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಖಾಸಗಿ ಬಿ.ಇಡಿ., ಕಾಲೇಜುಗಳಲ್ಲಿ 1,60,000 ರೂಪಾಯಿಗಳಿಗೆ ಸೀಟುಗಳು ಮಾರಾಟವಾಗುತ್ತಿದೆ. ವಿದ್ಯಾರ್ಥಿಗಳು ಕಾಲೇಜುಗಳಿಗೆ ಬರುವುದೇ ಬೇಡ ಎಂಬ ತಲೆಬರಹದ ಅಡಿಯಲ್ಲಿ ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಮಾಹಿತಿಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ಧನ್ಯವಾದಗಳು.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ವ್ಯಾಪ್ತಿಯಲ್ಲಿ ಇರುವ ಖಾಸಗಿ ಬಿ.ಇಡಿ., ಕಾಲೇಜುಗಳಲ್ಲಿ ಬಿ.ಇಡಿ., ಸೀಟುಗಳನ್ನು ಹಣಕ್ಕಾಗಿ ಮಾರಾಟ ಮಾಡುವ ದಂಧೆ ಪ್ರಾರಂಭವಾಗಿದೆ ಎಂದು ವಿಜಯವಾಣಿ ಪತ್ರಿಕೆಯಲ್ಲಿ ವರದಿಯಾಗಿರುವುದು. ಬಳ್ಳಾರಿ ವಿಜಯನಗರ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ ಸುಮಾರು 20 ಕಾಲೇಜುಗಳಲ್ಲಿ 6000 ಬಿ.ಇಡಿ., ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಆದರೆ, ಹಲವು ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ತರಗತಿಗೆ ಹಾಜರಾಗದೇ ನೇರವಾಗಿ

ಪರೀಕ್ಷೆಗೆ ಬರುವುದಾಗಿ ಹೇಳಿದರೂ, ಅಂತಹ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿ ಹೆಚ್ಚಿನ ಹಣ ಪಡೆದು ಪ್ರವೇಶ ನೀಡಲಾಗುತ್ತಿದೆ. ಈ ಹಿಂದೆ ಕಾಲೇಜಿಗೆ ಬಾರದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕ ನೀಡಿದ್ದಕ್ಕಾಗಿ ಕೃಷಿ ವಿದ್ಯಾಲಯ ಕೆಲವೊಂದು ಕಾಲೇಜುಗಳಿಗೆ ದಂಡ ವಿಧಿಸಿದ ಉದಾಹರಣೆಗಳಿವೆ.

ಉನ್ನತ ಶಿಕ್ಷಣ ಸಚಿವರು ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯಗಳ ಸತ್ಯಾಸತ್ಯತೆಗಳನ್ನು ಪರಿಶೀಲಿಸಲು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಮತ್ತು ಬಿ.ಇಡಿ., ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಶಾಲೆಗಳಿಗೆ ತೆರಳಿ ಪಾಠ ಮಾಡಬೇಕಾಗುತ್ತದೆ. ಆದರೆ ಕೆಲವು ಸರ್ಕಾರಿ ಶಾಲೆಯ ಮುಖ್ಯಸ್ಥರು ಹಣ ಪಡೆದುಕೊಂಡು ಪ್ರಶಿಕ್ಷಣಾರ್ಥಿಗಳು ಪಾಠ ಮಾಡದಿದ್ದರೂ, ಪಾಠ ಮಾಡಿದ್ದಾರೆಂದು ಪತ್ರವನ್ನು ಕೊಡುತ್ತಿದ್ದಾರೆ. ಬಿ.ಇಡಿ., ಸೀಟುಗಳ ಮಾರಾಟಕ್ಕೆ ಅನುಕೂಲವಾಗಿದೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಸಚಿವರು ರಾಜ್ಯದಲ್ಲಿರುವ ಒಟ್ಟಾರೆ ಬಿ.ಇಡಿ., ಕಾಲೇಜುಗಳಲ್ಲಿ ತರಗತಿಗೆ ಹಾಜರಾಗದೇ ನೇರವಾಗಿ ಪರೀಕ್ಷೆ ಬರೆಯದಂತೆ ಮತ್ತು ಈ ರೀತಿ ಬಿ.ಇಡಿ., ಸೀಟುಗಳು ಹರಾಜಾಗದಂತೆ ನಿಗವಹಿಸಲು ಮತ್ತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಈ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಉಪ ಮುಖ್ಯಮಂತ್ರಿಯವರ ಕಡೆಯಿಂದ ಉತ್ತರವನ್ನು ಒದಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ನಿರಾಣಿ ಹಣಮಂತ್ ರುದ್ರಪ್ಪನವರೇ, ತಮ್ಮ ಹೆಸರನ್ನು ಸದನದಲ್ಲಿ ಪ್ರಸ್ತಾಪಿಸಿದಾಗ ತಾವು ಸದನದಲ್ಲಿ ಹಾಜರಿರಬೇಕು. ಇದೊಂದು ಬಾರಿ ತಮಗೆ ಅವಕಾಶವನ್ನು ಕೊಡುತ್ತೇನೆ. ಮುಂದಿನ ಬಾರಿ ತಮ್ಮನ್ನು ಕರೆದಾಗ ಇರದಿದ್ದರೆ, ಗೈರುಹಾಜರಿ ಎಂದು ಪರಿಗಣಿಸಲಾಗುವುದು.

**ಇ) ವಿಷಯ:- ಪರಿಶುದ್ಧವಾದ ಮಲಪ್ರಭಾ ನದಿ ನೀರಿಗೆ ಖಾನಾಪುರ ಪಟ್ಟಣದ ಚರಂಡಿ ನೀರು ಮತ್ತು ತ್ಯಾಜ್ಯಗಳು ಸೇರಿ ಕಲುಷಿತಗೊಂಡಿರುವ ಬಗ್ಗೆ.**

***

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ, ಖಾನಾಪುರ ತಾಲ್ಲೂಕಿನ ಕಣಕುಂಬಿ ಗ್ರಾಮದ ಹತ್ತಿರ ಹುಟ್ಟುವ ಸದರಿ ನದಿಯು

ಖಾನಾಪುರ ಪಟ್ಟಣ ತಲುಪುವವರೆಗೂ ಪರಿಶುದ್ಧವಾಗಿ ಹರಿದುಬರುತ್ತದೆ. ನಂತರದಲ್ಲಿ ಖಾನಾಪುರ ಪಟ್ಟಣದ ಚರಂಡಿ ನೀರು ಮತ್ತು ತ್ಯಾಜ್ಯ ನೀರು ಶುದ್ಧೀಕರಣಗೊಳ್ಳದೇ ನೇರವಾಗಿ ನದಿಗೆ ಸೇರಿ, ನದಿ ನೀರು ಕಲುಷಿತವಾಗುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಉತ್ತರ ಕರ್ನಾಟಕದ ಜೀವನದಿಯಾಗಿರುವ ಮಲಪ್ರಭಾ ನದಿಗೆ ಚರಂಡಿ ನೀರು ಮತ್ತು ಇತರೆ ತ್ಯಾಜ್ಯಗಳು ಸೇರುತ್ತಿರುವುದರಿಂದ ನದಿ ನೀರು ವಿಷಯುಕ್ತವಾಗುತ್ತಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ, ಬೈಲಹೊಂಗಲ, ರಾಮದುರ್ಗ, ಮುನವಳ್ಳಿ ಮತ್ತು ಧಾರವಾಡ ಜಿಲ್ಲೆಗಳ ಹುಬ್ಬಳ್ಳಿ–ಧಾರವಾಡ ಸೇರಿದಂತೆ ಅನೇಕ ಗ್ರಾಮಗಳ ಜನರು ತಮ್ಮ ನೀರಿನ ದಾಹವನ್ನು ಇಂಗಿಸಿಕೊಳ್ಳಲು ಇದೇ ನದಿಯ ನೀರನ್ನೇ ಅವಲಂಬಿಸಿದ್ದಾರೆ. ಅಲ್ಲದೇ, ನಮಗೆಲ್ಲಾ ತಿಳಿದಿರುವಂತೆ, ಇದೇ ನದಿಯು ಮುಂದೆ ನೂರಾರು ಕಿ.ಮೀ. ಕ್ರಮಿಸಿದ ನಂತರ ಬಾಗಲಕೋಟೆ ಜಿಲ್ಲೆಗೆ ಪ್ರವೇಶಿಸಿ ಕೂಡಲಸಂಗಮದ ಬಳಿ ಕೃಷ್ಣಾ ನದಿಯನ್ನು ಸೇರುತ್ತದೆ ಹಾಗೂ ನದಿ ತೀರದ ಗ್ರಾಮಗಳ ಜನರು ಸಾಮಾನ್ಯವಾಗಿ ಇದೇ ನದಿಯ ನೀರನ್ನೇ ಸೇವನೆಗೆ ಬಳಸುತ್ತಾರೆ. ಇದರಿಂದಾಗಿ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ತೀವ್ರ ತೊಂದರೆಯಾಗುತ್ತಿದ್ದು, ಹಲವಾರು ರೋಗರುಜಿನಗಳಿಗೆ ತುತ್ತಾಗುತ್ತಿದ್ದಾರೆ.

ಈ ಹಿನ್ನಲೆಯಲ್ಲಿ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸುತ್ತಾ, ಉತ್ತರ ಕರ್ನಾಟಕದ ಜೀವಜಲ ಎಂದು ಪ್ರಸಿದ್ಧಿಯಾಗಿರುವ ಮಲಪ್ರಭಾ ನದಿಗೆ ಚರಂಡಿ ನೀರನ್ನು ಮತ್ತು ಇತರೇ ತ್ಯಾಜ್ಯಗಳನ್ನು ಸೇರದಂತೆ ತಡೆಯಲು ಅತೀ ಶೀಘ್ರವಾಗಿ ಕ್ರಮಕೈಗೊಳ್ಳಬೇಕೆಂದು ಈ ಮೂಲಕ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನಿರಾಣಿ ಹಣಮಂತ್ ರುದ್ರಪ್ಪರವರು ಕೇಳಿರುವಂತಹ ಪ್ರಶ್ನೆಗೆ ಪೌರಾಡಳಿತ ಮತ್ತು ಸಕ್ಕರೆ ಸಚಿವರಿಂದ ಉತ್ತರವನ್ನು ಒದಗಿಸಿಕೊಡುತ್ತೇನೆ.

**ಸಭಾಪತಿಯವರು:–** ಇವತ್ತು ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಮಾನ್ಯ ಸಚಿವರುಗಳೆಂದರೆ, ಶ್ರೀ ಗೋವಿಂದ ಎಂ.ಕಾರಜೋಳ, ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ ಇಲಾಖೆ), ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಸಭಾನಾಯಕರು (ಮುಜರಾಯಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ), ಶ್ರೀ ಅರವಿಂದ ಲಿಂಬಾವಳಿ, (ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು) ಶ್ರೀ ಅರಬೈಲು ಶಿವರಾಮ ಹೆಬ್ಬಾರ್, (ಕಾರ್ಮಿಕ ಸಚಿವರು) ಡಾ॥

ಕೆ.ಸಿ.ನಾರಾಯಣಗೌಡ, (ಯುವಜನ ಸೇವೆ, ಕ್ರೀಡೆ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಸಾಂಖ್ಯಿಕ ಸಚಿವರು) ಇಷ್ಟು ಜನ ಮಾನ್ಯ ಸಚಿವರುಗಳು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕು.

ಇಲಾಖೆಯ ಅಧಿಕಾರಿಗಳಾದ ಶ್ರೀ ಎಲ್.ಕೆ.ಅತೀಕ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶ್ರೀ ಟಿ.ವೆಂಕಟೇಶ್, ಭಾ.ಆ.ಸೇ. ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ, ಶಾಂತಿನಗರ, ಬೆಂಗಳೂರು, ಶ್ರೀ ಎಂ.ಬಾಣವಾಡಿ, ಸರ್ಕಾರದ ಉಪ ಕಾರ್ಯದರ್ಶಿಗಳು, ಶ್ರೀ ಬಸವರಾಜು, ಸರ್ಕಾರದ ಉಪ ಕಾರ್ಯದರ್ಶಿಗಳು, ಇವರುಗಳು ವಿಧಾನ ಪರಿಷತ್ತು ಅಧಿವೇಶನ ಪ್ರಾರಂಭದಿಂದ ಮಧ್ಯಾಹ್ನದವರೆಗೆ ಸದನದಲ್ಲಿ ಹಾಜರಿರಬೇಕು. ಶ್ರೀ ಆರ್.ಎಸ್.ಪೆದ್ದಪ್ಪಯ್ಯ, ಭಾ.ಆ.ಸೇ. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, ಶ್ರೀ ಶ್ರೀಧರ್ ಮೂರ್ತಿ, ಐ.ಆರ್.ಎಸ್. ಸರ್ಕಾರದ ಅಪರ ಕಾರ್ಯದರ್ಶಿ, ರೈಲ್ವೆ ಮೂಲ ಸೌಲಭ್ಯ ಮತ್ತು ಬಂದರು ಒಳನಾಡು ಜಲಸಾರಿಗೆ ಇಲಾಖೆ, ಶ್ರೀ ರವಿ, ಸರ್ಕಾರದ ಉಪ ಕಾರ್ಯದರ್ಶಿಗಳು, ಶ್ರೀ ಚೆನ್ನಬಸವರಾಜು, ಉಪ ಕಾರ್ಯದರ್ಶಿಗಳು, ಇವರುಗಳು ವಿಧಾನ ಪರಿಷತ್ತು ಅಧಿವೇಶನ ಮಧ್ಯಾಹ್ನದಿಂದ ಮುಕ್ತಾಯವಾಗುವರೆಗೆ ಸದನದಲ್ಲಿ ಹಾಜರಿರಬೇಕು.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರಾದ ಪ್ರಾಣೇಶ್ ಎಂ.ಕೆ. ಯವರು ಸಭಾಪೀಠವನ್ನು ಅಲಂಕರಿಸಿದರು.)**

## 05.ಅರ್ಜಿಗಳನ್ನೊಪ್ಪಿಸುವುದು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕುಂದಾಪುರ ತಾಲ್ಲೂಕಿನ ಹಂಗಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಡಾಕೆರೆಗೆ ತುರ್ತಾಗಿ 2 ಕೊಠಡಿಗಳನ್ನು ಮಂಜೂರು ಮಾಡಿ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಉತ್ತೇಜನ ನೀಡುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಕುಂದಾಪುರ ತಾಲ್ಲೂಕಿನ ಹಂಗಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಟ್ಯಾನ್ ಬೆಟ್ಟು ಗ್ರಾಮದ ಜನವಸತಿ ಪ್ರದೇಶದ ಕೈಪಾಡಿ ದೇವಸ್ಥಾನದ ಹತ್ತಿರ ಕಿರು ಸೇತುವೆ ನಿರ್ಮಿಸಿ ರೈತರು ಮತ್ತು ಜನಸಾಮಾನ್ಯರಿಗೆ ಸಂಚಾರ ವ್ಯವಸ್ಥೆ ಕಲ್ಪಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿ ಆವಾಸ್ ವಸತಿ ಯೋಜನೆಯಡಿ ವಸತಿ ಹಂಚಿಕೆಯಲ್ಲಿ ಮೀಸಲಾತಿ ಪಾಲನೆ ಮಾಡದಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಪೇಟೆಯ ಹೃದಯ ಭಾಗದಲ್ಲಿ ಸೂರಪ್ಪ ಕಾಂಪೌಂಡ್ ಮುಖಾಂತರ ತೆರೆದ ಚರಂಡಿಯಲ್ಲಿ ಕೊಳಚೆ ನೀರು ಹರಿಯುತ್ತಿದ್ದು, ಸಾರ್ವಜನಿಕರ ಆರೋಗ್ಯ ಸುರಕ್ಷತೆ ದೃಷ್ಟಿಯಿಂದ ಭೂಗತ ಚರಂಡಿ ವ್ಯವಸ್ಥೆ ಕಲ್ಪಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಅರ್ಜಿಗಳನ್ನೊಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆಯಲ್ಲಿ ಶ್ರೀಯುತರುಗಳಾದ ಕೆ.ಟಿ.ಶ್ರೀಕಂಠೇಗೌಡ, ಮರಿತಿಬ್ಬೇಗೌಡ ಮತ್ತು ಪುಟ್ಟಣ್ಣ ಈ ಮೂರು ಮಾನ್ಯ ಸದಸ್ಯರುಗಳ ಗಮನ ಸೆಳೆಯುವ ವಿಷಯಗಳು ಇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ನಿಯಮ 330ರ ವಿಷಯವನ್ನು ತೆಗೆದುಕೊಳ್ಳೋಣ. ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರವರೇ, ತಾವು ನಿಯಮ 330ರ ಅಡಿಯಲ್ಲಿ ನೀಡಿರುವ ವಿಷಯವನ್ನು ಈಗ ಚರ್ಚೆಗೆ ತೆಗೆದುಕೊಳ್ಳೋಣ.

**(301) 05/03/2021/ಎಸ್‌ಪಿಆರ್/ವಿಕೆ/12:20 (ಉಪ ಸಭಾಪತಿಯವರ ಉಪಸ್ಥಿತಿ)**

**06. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲಿನ ಚರ್ಚೆ**

**ವಿಷಯ:- 1995 ರಿಂದ 2005ನೇ ಸಾಲಿನವರೆಗೆ ಪ್ರಾರಂಭವಾಗಿರುವ ಕನ್ನಡ ಮಾಧ್ಯಮ ಶಾಲಾ/ಕಾಲೇಜುಗಳ ಬೋಧಕ ಬೋಧಕೇತರರಿಗೆ ವೇತನಾನುದಾನ ನೀಡಬೇಕೆಂದು ಹಾಗೂ ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವ ಸೌಲಭ್ಯಗಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೂ ವಿಸ್ತರಿಸುವ ಬಗ್ಗೆ**

* * *

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ – 330 ರಡಿ ನಮ್ಮ ರಾಜ್ಯದ ಅನುದಾನರಹಿತ ಶಾಲೆಗಳ ಬಗ್ಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಸ್ವಾತಂತ್ರ್ಯ ಬಂದ ನಂತರ ನಮ್ಮ ದೇಶದಲ್ಲಿ ಎಲ್ಲರಿಗೂ ಶಿಕ್ಷಣವನ್ನು

ನೀಡಬೇಕೆನ್ನುವ ಚಳುವಳಿಯು ಆರಂಭವಾಯಿತು. ಸರ್ಕಾರವೊಂದರಿಂದಲೇ ಎಲ್ಲಾ ಜನರಿಗೆ ಶಿಕ್ಷಣವನ್ನು ಪೂರೈಸಲು ಸಾಧ್ಯವಾಗುವುದಿಲ್ಲ; ಹೀಗಾಗಿ ಸಾರ್ವಜನಿಕರು, ಖಾಸಗಿಯವರು, ಮಠ-ಮಾನ್ಯದವರು ಶಿಕ್ಷಣ ಚಳುವಳಿಯಲ್ಲಿ ಭಾಗಿಯಾಗಬೇಕು ಎನ್ನುವ ಕರೆಯನ್ನು ಕೊಟ್ಟ ಹಿನ್ನೆಲೆಯಲ್ಲಿ ಈ ದೇಶದಲ್ಲೆಲ್ಲಾ, ರಾಜ್ಯದ ಉದ್ದಗಲಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಮಠ-ಮಾನ್ಯಗಳು ಜನರಿಗೆ ಶಿಕ್ಷಣ ನೀಡುವ ಚಳುವಳಿಯಲ್ಲಿ ಭಾಗಿಯಾದರು. ಇಂತಹ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡುವ ಹೊತ್ತಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳೇ ಶಿಕ್ಷಣಕ್ಕಾಗಿ ಅವಶ್ಯಕವಾದ ಸ್ಥಳಾವಕಾಶ, ಕಟ್ಟಡ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಕೊಡುವ ಪರಿಪಾಠವು ಪ್ರಾರಂಭವಾಯಿತು. ಸರ್ಕಾರಿ ಶಾಲೆಗಳಲ್ಲಿ ಸರ್ಕಾರವೇ ಅವಶ್ಯಕವಾದ ಕಟ್ಟಡ, ಇನ್ನಿತರೆ ಮೂಲಭೂತ ಸೌಕರ್ಯಗಳೊಂದಿಗೆ ಶಿಕ್ಷಕ ಸಮುದಾಯವನ್ನು ನೀಡುವ ಪರಿಪಾಠವು ಇತ್ತು. ಸರ್ಕಾರಿ ವ್ಯವಸ್ಥೆಯಲ್ಲಿ ಎಲ್ಲವನ್ನೂ ಸರ್ಕಾರವೇ ನೀಡುತ್ತಿತ್ತು ಮತ್ತು ಇದಕ್ಕಾಗಿ ಆರಂಭದಲ್ಲಿ ಶಿಕ್ಷಕರ ನೇಮಕಾತಿಯನ್ನೂ ಸಹ ಮಾಡುತ್ತಿತ್ತು. ಶಿಕ್ಷಣ ವ್ಯವಸ್ಥೆಯ ಆರಂಭದ ದಿನಗಳಲ್ಲಿ ಯಾರೆಲ್ಲಾ ಖಾಸಗಿಯಾಗಿ ಶಾಲಾ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾರೋ, ಅಂತಹ ಸಂಸ್ಥೆಯ ಶಿಕ್ಷಕರಿಗೆ ವೇತನಾನುದಾನ ನೀಡುವ ಮತ್ತು ಕಟ್ಟಡಗಳಿಗೆ ಸ್ವಲ್ಪ ಪ್ರಮಾಣದಲ್ಲಿ 'ನಿರ್ವಹಣಾ ಅನುದಾನ' ನೀಡುವ ಪರಿಪಾಠವು ಇತ್ತು. ಆ ನಂತರದ ದಿನಗಳಲ್ಲಿ ಶಿಕ್ಷಕರಿಗೆ ಕೊಡಲಾಗುತ್ತಿದ್ದ ವೇತನಾನುದಾನವನ್ನು ಸ್ಥಗಿತಗೊಳಿಸಲಾಯಿತು. ನಂತರದಲ್ಲಿ ಸಭಾಪತಿಗಳಾದ ಶ್ರೀಯುತ ಬಸವರಾಜ ಹೊರಟ್ಟಿಯವರು ಶಿಕ್ಷಣ ಮಂತ್ರಿಗಳಾದಾಗ ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾವುಗಳೆಲ್ಲರೂ ಈ ಸದನದಲ್ಲಿ ದೊಡ್ಡ ಹೋರಾಟವನ್ನು ಮಾಡಿದೆವು. ಶ್ರೀ ಕುಮಾರಸ್ವಾಮಿ ಮತ್ತು ಶ್ರೀ ಬಿ.ಎಸ್.ಯಡಿಯೂರಪ್ಪನವರ ಸಮ್ಮಿಶ್ರ ಸರ್ಕಾರವು ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿ, ಮಾನ್ಯ ಸಭಾಪತಿಯವರು ಶಿಕ್ಷಣ ಮಂತ್ರಿಗಳಾಗಿದ್ದರು. ಆಗ 1985 ನೇ ಇಸವಿಯಿಂದ 1995 ನೇ ಇಸವಿಯವರೆಗೆ ಅಂದರೆ ಒಟ್ಟು 10 ವರ್ಷಗಳ ಕಾಲ ಅನುದಾನ ನೀಡುವ ಐತಿಹಾಸಿಕ ಆದೇಶವಾಯಿತು. 1995ರ ನಂತರದಲ್ಲಿ ಅನುದಾನ ನೀಡುವ ಪ್ರಕ್ರಿಯೆಯು ಸ್ಥಗಿತಗೊಂಡಿತು. ನಾವು ಆಂಗ್ಲ ಮಾಧ್ಯಮದ ಶಾಲೆಗಳಿಗೆ ಅನುದಾನವನ್ನು ಕೇಳುತ್ತಿಲ್ಲ. ನಾವು ಕನ್ನಡ ಭಾಷೆಯನ್ನು ಉಳಿಸಿಕೊಳ್ಳಬೇಕು. ಹೀಗಾಗಿ ಇವತ್ತಿನ ದಿವಸ ಕನ್ನಡ ಶಾಲೆಗಳ ರಕ್ಷಣೆಗೆ ಸರ್ಕಾರವು ಬರಬೇಕಾಗಿದೆ. 1995 ನೇ ಇಸವಿಯ ನಂತರ ಪ್ರಾರಂಭವಾದ ಶಾಲೆಗಳು ಅತ್ಯಂತ ಕಷ್ಟದಲ್ಲಿವೆ. ಅವರಿಗೆ ಸರ್ಕಾರದ ಯಾವುದೇ ಸೌಲಭ್ಯಗಳು ದೊರೆತಿಲ್ಲ. ಸರ್ಕಾರಿ ಶಾಲೆಗಳಲ್ಲಿ ನೀಡಲಾಗುವ ಬಿಸಿಯೂಟದಿಂದ ಹಿಡಿದು ಮಕ್ಕಳಿಗೆ ಕೊಡುವ ಪುಸ್ತಕಗಳು ಇತ್ಯಾದಿ ಯಾವುದೇ ಸೌಲಭ್ಯಗಳು ಅನುದಾನರಹಿತ ಶಾಲೆಗಳಲ್ಲಿ ದೊರೆಯುವುದಿಲ್ಲ. ಅಲ್ಲಿನ ವಿದ್ಯಾರ್ಥಿಗಳಿಗೆ ಕೇವಲ ಸೈಕಲ್ ವಿತರಣೆ ಮಾಡುತ್ತಿದ್ದು, ಇದೂ ಸಹ ನಾವು ಮಾಡಿದ ಗಲಾಟೆಗಳ ಪರಿಣಾಮವಾಗಿದೆ. ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳಿಗೆ 1995ನೇ ಇಸವಿಯಿಂದ ಅನುದಾನ

ನೀಡುವ ಪ್ರಕ್ರಿಯೆಯು ಸ್ಥಗಿತಗೊಂಡಿದೆ. ಆ ವ್ಯವಸ್ಥೆಯನ್ನು ಪುನರ್ ಪ್ರಾರಂಭಿಸಬೇಕೆಂದು ನಾವು ವಾದ ಮಾಡುತ್ತಿದ್ದೇವೆ. ಈ ಮೊದಲು ಶಾಲೆ ಪ್ರಾರಂಭಗೊಂಡ ದಿನದಿಂದಲೇ ಸರ್ಕಾರವು ಅನುದಾನವನ್ನು ನೀಡಲಾಗುತ್ತಿತ್ತು. ಆ ಪೈಕಿ ಕೇವಲ ವೇತನಾನುದಾನವನ್ನು ಮಾತ್ರವೇ ಸರ್ಕಾರವು ನೀಡುತ್ತಿತ್ತು. ಇವತ್ತಿನ ದಿವಸ building and matching grants ನ್ನು ಸರ್ಕಾರವು ಸ್ಥಗಿತಗೊಳಿಸಿದೆ. ಈ ಹಿಂದೆ ಶಾಲೆ ಪ್ರಾರಂಭಗೊಂಡ 5–10 ವರ್ಷಗಳ ನಂತರ ಅನುದಾನ ನೀಡುವ ಪ್ರಕ್ರಿಯೆಯು ಚಾಲ್ತಿಯಲ್ಲಿತ್ತು. ಆದರೆ ಈಗ ಶಾಲೆಗಳು ಪ್ರಾರಂಭಗೊಂಡು ಒಂದೆರೆಡು ದಶಕಗಳೇ ಕಳೆದಿವೆ. ಕೊಡುವ ಅಲ್ಪ ಸಂಬಳಕ್ಕಾಗಿ ಶಿಕ್ಷಕರು ಅಂತಹ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕೆಲವು ಶಾಲೆಗಳಲ್ಲಿ 3 ರಿಂದ 10 ಸಾವಿರ ರೂಪಾಯಿಗಳನ್ನು ಮಾತ್ರವೇ ನೀಡಲಾಗುತ್ತಿದೆ. ಆ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಕಷ್ಟವಂತೂ ಹೇಳತೀರದು. ಅದರಲ್ಲೂ ಕೋವಿಡ್–19 ಸಂದರ್ಭದಲ್ಲಿ ಖಾಸಗಿ ಶಾಲೆಗಳ ಶಿಕ್ಷಕರ ನೋವು ಹೇಳತೀರದು. ಆ ಶಿಕ್ಷಕರು ತರಕಾರಿಯನ್ನು ಮಾರಲು ಮಾರುಕಟ್ಟೆಗೆ ಹೋದರು ಮತ್ತು ಬೀದಿಯಲ್ಲಿ ಕುಳಿತು ಮಾರಾಟ ಮಾಡಿದರು. ಇಷ್ಟೇ ಅಲ್ಲದೇ, ಆ ಶಿಕ್ಷಕರು ಜವಾಹರಲಾಲ್ ನೆಹರು ನವೋದಯ ಯೋಜನೆಯ 'ಕೂಲಿಗಾಗಿ ಕಾಳು' ಇದರಲ್ಲಿಯೂ ಸಹ ದುಡಿದರು. ಶಿಕ್ಷಕರಿಗೆ ಅಂತಹ ಕ್ಲಿಷ್ಟ ಪರಿಸ್ಥಿತಿ ಎದುರಾಯಿತು. ಹೀಗಾಗಿ ನಾನು ಸರ್ಕಾರಕ್ಕೆ ಆಗ್ರಹಿಸುವುದೇನೆಂದರೆ, 1995 ನೇ ಇಸವಿಯ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮದ ಖಾಸಗಿ ಶಾಲೆಗಳಿಗೆ ಕನಿಷ್ಠ 10 ವರ್ಷಗಳವರೆಗೆ ಅಂದರೆ 2005 ನೇ ಸಾಲಿನವರೆಗೆ ಅನುದಾನವನ್ನು ನೀಡಬೇಕೆಂದು ನಾನು ವಿನಂತಿಸುತ್ತೇನೆ. 2020 ನೇ ಸಾಲಿನವರೆಗೆ ನೀಡಿ ಎಂದು ನಾನು ಕೇಳುವುದಿಲ್ಲ. ಹತ್ತು ವರ್ಷಗಳ ಕಾಲ ಯಶಸ್ವಿಯಾಗಿ ನಡೆದ ಖಾಸಗಿ ಕನ್ನಡ ಮಾಧ್ಯಮ ಶಾಲೆಗಳಿಗೆ ಮಾತ್ರವೇ ವೇತನಾನುದಾನವನ್ನು ನೀಡುವ ಕೆಲಸವನ್ನು ಸರ್ಕಾರವು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮಾಡಿದರೆ, ಆ ಶಾಲೆಗಳ ಶಿಕ್ಷಕರು ನಿಟ್ಟುಸಿರು ಬಿಡುತ್ತಾರೆ. ಅನುದಾನರಹಿತ ಶಾಲೆಗಳಲ್ಲಿನ ಶಿಕ್ಷಕರ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಅಂತಹ ಶಿಕ್ಷಕರು ಮದುವೆ ಮಾಡಿಕೊಳ್ಳಲು ಹೋದರೆ, ಅವರಿಗೆ ಕನ್ಯೆಯನ್ನು ನೀಡುವುದಿಲ್ಲ. ಒಂದು ವೇಳೆ ಈಗಾಗಲೇ ಮದುವೆಯಾಗಿದ್ದರೆ, ಅವರಿಗೆ ಸಂಸಾರ ನಡೆಸಲು, ಮನೆ ಬಾಡಿಗೆ, ಮಕ್ಕಳ ವಿದ್ಯಾಭ್ಯಾಸದ ವೆಚ್ಚ ಇವುಗಳನ್ನು ಭರಿಸಲು ಕಷ್ಟವಾಗಿದೆ. ಮದುವೆಯಾಗುವ ಹಾಗೂ ಮದುವೆಯಾಗಿರುವ ಎಲ್ಲಾ ರೀತಿಯ ಶಿಕ್ಷಕರುಗಳಿದ್ದಾರೆ. ಅವರುಗಳ ಪರಿಸ್ಥಿತಿಯು ಹೇಳಲು ಅಸದಳವಾಗಿದೆ. ಅನುದಾನರಹಿತ ಶಾಲೆಯ ಎಷ್ಟೋ ಶಿಕ್ಷಕರು ಆತ್ಮಹತ್ಯೆಯನ್ನೂ ಸಹ ಮಾಡಿಕೊಂಡಿದ್ದಾರೆ. ಈ ಹಿಂದೆ 1985 ನೇ ಇಸವಿಯಿಂದ 1995 ನೇ ಇಸವಿಯವರೆಗೆ ನೂರಾರು ಖಾಸಗಿ ಶಾಲೆಗಳಿಗೆ ಅನುದಾನವನ್ನು ನೀಡಲಾಗಿತ್ತು. ಆ ಪೈಕಿ ಕೇವಲ 38 ಶಾಲೆಗಳು ಮಾತ್ರವೇ ಅನುದಾನದಿಂದ ಉಳಿದುಕೊಂಡುಬಿಟ್ಟಿವೆ. ಈ 38 ಶಾಲೆಗಳ ಶಿಕ್ಷಕರ ಪರಿಸ್ಥಿತಿಯಂತೂ ಸಹ ಹೇಳಲಿಕ್ಕೆ

ಅಸದಳವಾಗಿದೆ. ಅನುದಾನದ ಬಗ್ಗೆ ಅಲ್ಲಿನ ಶಿಕ್ಷಕರು ವಿಚಾರಿಸಿದಾಗ, ಅನುದಾನ ಕೋರಿ ಕಡತವನ್ನು ಕಳುಹಿಸಲಾಗಿದೆ, ಅಲ್ಲಿಗೆ ಹೋಗಿ ಅನುದಾನ ಮಾಡಿಸಿಕೊಳ್ಳಿ; ನಾವು ಸಂಬಳವನ್ನು ನೀಡುವುದಿಲ್ಲ ಎಂಬುದಾಗಿ ಅಲ್ಲಿನ ಆಡಳಿತ ಮಂಡಳಿಯವರು ತಿಳಿಸುತ್ತಾರೆ. ಆ ಶಾಲಾ ಶಿಕ್ಷಕರುಗಳಿಗೆ ಆಡಳಿತ ಮಂಡಳಿಯಿಂದ ಸಂಬಳವೂ ಇಲ್ಲ; ಸರ್ಕಾರದಿಂದ ಅನುದಾನವೂ ಇಲ್ಲ. ಹೀಗಾಗಿ ಈ ಹಿಂದಿನಿಂದಲೂ ನೆನೆಗುದಿಗೆ ಬಿದ್ದಿರುವ 38 ಶಾಲೆಗಳಿಗೆ ಅನುದಾನ ನೀಡುವುದರ ಜೊತೆಗೆ 1995 ರಿಂದ 2005 ನೇ ಇಸವಿಯವರೆಗೆ ಕನಿಷ್ಠ ಹತ್ತು ವರ್ಷಗಳ ಕಾಲ ಅನುದಾನವನ್ನು ಕೊಡುವಂತಹ ಐತಿಹಾಸಿಕ ನಿರ್ಧಾರವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮಾಡಿದರೆ, ಕನ್ನಡ ಮಾಧ್ಯಮ ಶಾಲೆಗಳು ಮತ್ತು ಶಿಕ್ಷಕರ ಕುಟುಂಬಗಳು ಉಳಿಯುತ್ತವೆ. ಸರ್ಕಾರಿ ಭರವಸೆಗಳ ಸಮಿತಿಯು ರಾಜ್ಯದ ಗಡಿನಾಡು ಭಾಗಗಳಿಗೆ ಭೇಟಿ ನೀಡಿತ್ತು. ಮರಾಠಿ ಮತ್ತು ಮಲಯಾಳಂ ಭಾಷೆಯವರು ತಮ್ಮ ಗಡಿಭಾಗದ ಶಾಲೆಗಳಿಗೆ ಅಂದರೆ ಅದು ಅವರ ರಾಜ್ಯದಲ್ಲಿರಲಿ ಅಥವಾ ನಮ್ಮ ರಾಜ್ಯದಲ್ಲಿರಲಿ ಇನ್ನಿಲ್ಲದ ಸೌಕರ್ಯಗಳನ್ನು ನೀಡುತ್ತಿದ್ದಾರೆ. ಆದರೆ ನಮ್ಮ ಸರ್ಕಾರವು ಕನ್ನಡ ಮಾಧ್ಯಮದ ಶಾಲೆಗಳನ್ನು ಉಳಿಸುವ ದಿಸೆಯಲ್ಲಿ ಯಾವ ಪ್ರಯತ್ನವನ್ನೂ ಸಹ ಮಾಡುತ್ತಿಲ್ಲ. ಗಡಿಭಾಗದ ಶಾಲೆಗಳಿಗೆ ಶಿಕ್ಷಕರನ್ನು ಒಳಗೊಂಡಂತೆ ಯಾವುದೇ ರೀತಿಯ ಸೌಕರ್ಯಗಳನ್ನು ನೀಡುತ್ತಿಲ್ಲ. ಈ ಎಲ್ಲಾ ಕಾರಣಗಳಿಗಾಗಿ ಕನ್ನಡ ಮಾಧ್ಯಮದ ಶಾಲೆಗಳಿಗೆ ಅನುದಾನ ನೀಡುವ ಸ್ಥಗಿತಗೊಂಡ ಪ್ರಕ್ರಿಯೆಯನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮುಂದುವರೆಸುವುದರ ಮೂಲಕ ಇಡೀ ಶಿಕ್ಷಕರ ಸಮುದಾಯಕ್ಕೆ ಮತ್ತು ಕನ್ನಡ ಶಾಲೆಗಳಿಗೆ ಶಕ್ತಿ ಮತ್ತು ಜೀವವನ್ನು ಸರ್ಕಾರವು ತುಂಬಬೇಕೆಂದು ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎಸ್.ವಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ನಮ್ಮ ರಾಜ್ಯದಲ್ಲಿರುವ ಅನುದಾನರಹಿತ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಕಷ್ಟಗಳ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಆದರೆ ನಾನೂ ಸಹ ಎರಡು-ಮೂರು ವಿಷಯಗಳ ಬಗ್ಗೆ ಹೇಳುತ್ತೇನೆ. ಸರ್ಕಾರವು ಅನುದಾನ ನೀಡುವ ವ್ಯವಸ್ಥೆಯು ಪ್ರಾರಂಭಗೊಂಡು ಇಲ್ಲಿಗೆ 26 ವರ್ಷಗಳಾಯಿತು. ಮಾನ್ಯ ಸದಸ್ಯರು ಕೇವಲ 5-6 ಸಾವಿರ ರೂಪಾಯಿಗಳಿಗೆ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ತಿಳಿಸಿದರು. ಆದರೆ ಕೆಲವೊಂದು ಖಾಸಗಿ ಶಾಲೆಯ ಆಡಳಿತ ಮಂಡಳಿಯವರು ಒಂದು ಪೈಸೆಯನ್ನೂ ಸಹ ನೀಡುವುದಿಲ್ಲ. ಆದರೆ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ 'ಇವತ್ತಲ್ಲ, ನಾಳೆಯಲ್ಲ, ಈ ವರ್ಷ ಅಥವಾ ಮುಂದಿನ ವರ್ಷ ಸರ್ಕಾರವು ಅನುದಾನ ನೀಡುತ್ತದೆ' ಎನ್ನುವ ಆಸೆಯೊಂದು ಇದೆ. ಇಷ್ಟೇ ಅಲ್ಲದೇ, ಶ್ರೀ ಯಡಿಯೂರಪ್ಪನವರ ಸರ್ಕಾರವು ಅನುದಾನವನ್ನು ಕೊಟ್ಟೇ ಕೊಡುತ್ತಾರೆ ಎನ್ನುವ ಬಹಳ ಬಲವಾದ ಇಚ್ಛೆಯನ್ನಿಟ್ಟುಕೊಂಡು

ಕೆಲಸ ನಿರ್ವಹಿಸುತ್ತಿದ್ದಾರೆ. ಇನ್ನೆರೆಡು–ಮೂರು ವರ್ಷಗಳಲ್ಲಿ ಸರ್ಕಾರವು ಅನುದಾನಕ್ಕೆ ಅನುಮತಿಸದಿದ್ದರೆ ಬಹಳಷ್ಟು ಶಿಕ್ಷಕರು ಸೇವೆಯಿಂದ ನಿವೃತ್ತಿಯಾಗುತ್ತಾರೆ. ಅಂತಹ ಶಿಕ್ಷಕರ ಬದಕು ಬಹಳ ಕಷ್ಟ ಹಾಗೂ ಸಮಸ್ಯೆಗಳಿಂದ ಕೂಡಿದೆ. ಈ ದಿಸೆಯಲ್ಲಿ ನಾನು ಅನುದಾನರಹಿತ ಶಾಲಾ–ಕಾಲೇಜುಗಳಲ್ಲಿನ ಶಿಕ್ಷಕರ ಪರವಾಗಿ ಸರ್ಕಾರಕ್ಕೆ ಕಳಕಳಿಯ ವಿನಂತಿ ಮತ್ತು ಒತ್ತಾಯವನ್ನು ಮಾಡುತ್ತೇನೆ. ದಯಮಾಡಿ ಮುಂಬರುವ ಆಯವ್ಯಯದಲ್ಲಿ ಕನಿಷ್ಠ 10 ವರ್ಷಗಳ ಅಥವಾ ಎಷ್ಟು ಸಾಧ್ಯವೋ ಅಷ್ಟು ವರ್ಷಗಳ ಕಾಲ ಸ್ಥಗಿತಗೊಂಡಿರುವ ಅನುದಾನವನ್ನು ನೀಡುವ ಕಾರ್ಯವನ್ನು ಮಾಡಬೇಕೆಂಬ ಕಳಕಳಿಯ ಪ್ರಾರ್ಥನೆಯನ್ನು ಮಾಡುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸರ್ಕಾರವು ಆಡಳಿತಕ್ಕೆ ಬಂದ ಮೇಲೆ ನಾಲ್ಕು ವರ್ಷಗಳ ಅಂದರೆ 1991–92, 1992–93, 1993–94, 1994–95 ಸಾಲುಗಳವರೆಗೆ ಅನುದಾನವನ್ನು ನೀಡಿತು. ಆದರೆ ಈ ಅವಧಿಯಲ್ಲಿ ಇನ್ನೂ ಹಲವಾರು ಶಾಲಾ–ಕಾಲೇಜುಗಳು ಅನುದಾನ ವ್ಯವಸ್ಥೆಯಲ್ಲಿ ಸೇರ್ಪಡೆಯಾಗಬೇಕಾಗಿತ್ತು. ಅಂತಹ ಶಾಲಾ–ಕಾಲೇಜುಗಳವರು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಎಲ್ಲಕ್ಕಿಂತ ಮೊದಲು ಬಾಕಿಯಿರುವ ಅನುದಾನಗಳನ್ನು ನೀಡುವ ಕೆಲಸವನ್ನು ಸರ್ಕಾರವು ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ಇಷ್ಟೇ ಅಲ್ಲದೇ ಮುಂಬರುವ ಆಯವ್ಯಯದಲ್ಲಿ ಮಾನ್ಯ ಸದಸ್ಯರಾದ ಶ್ರೀ ಶ್ರೀಕಂಠೇಗೌಡರು 10 ವರ್ಷಗಳ ಕಾಲ ಅನುದಾನ ನೀಡುವಂತಾಗಬೇಕು ಎಂಬ ಅಂಶವನ್ನು ಪ್ರಸ್ತಾಪಿಸಿದ್ದಾರೆ. ಆದರೆ ನನಗನ್ನಿಸಿದಂತೆ, ಪ್ರತಿ ಆಯವ್ಯಯದಲ್ಲಿ 2 ರಿಂದ 4 ವರ್ಷಗಳ ಕಾಲ ಅನುದಾನವನ್ನು ನೀಡುವಂತಹ ಪರಂಪರೆ ಅಥವಾ ಪದ್ಧತಿಯನ್ನು ನಾವು ಹಾಕಿಕೊಳ್ಳಬೇಕು. ಆಗ ಮಾತ್ರವೇ ಖಂಡಿತವಾಗಿಯೂ ಸಹ ಸ್ಥಾಪನೆಯಾದ ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ನೀಡುವ ಕೆಲಸವು ನಿರಂತರವಾಗಿ ನಡೆಯಲಿ ಎಂದು ನಾನು ಹೇಳಲಿಚ್ಛಿಸುತ್ತೇನೆ. ಆಗ ಮಾತ್ರವೇ ಕನ್ನಡ ಮಾಧ್ಯಮದ ಶಾಲೆಗಳು ಉಳಿಯುತ್ತವೆ ಇಲ್ಲದಿದ್ದರೆ ಯಾವುದೇ ಕನ್ನಡ ಮಾಧ್ಯಮದ ಶಾಲೆಗಳು ಮುಂದುವರೆಯುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಸರ್ಕಾರವು ಇಂತಹ ಪರಂಪರೆಯನ್ನು ಹಾಕಿಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

(ಉತ್ತರವನ್ನು ಲಗತ್ತಿಸಲಾಗಿದೆ)

ಹಿರಿಯ ಸದಸ್ಯರುಗಳಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಎಸ್.ವ್ಹಿ.ಸಂಕನೂರ ಮತ್ತು ಶ್ರೀ ಶಶೀಲ್ ಜಿ.ನಮೋಶಿ ರವರುಗಳು ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವೇತನಾನುದಾನವನ್ನು ನೀಡಬೇಕೆಂದು ಒತ್ತಾಯ ಮಾಡಿದ್ದಾರೆ. ಅವರುಗಳು ನೀಡಿರುವ ಕಾರಣ ಮತ್ತು ಸಮಸ್ಯೆ ಎರಡೂ ಅಂಶಗಳು ಸರಿಯಾಗಿವೆ. ಇಲ್ಲಿ ಯಾವುದೇ ರೀತಿಯ ಗೊಂದಲಗಳಿಲ್ಲ. ವಾಸ್ತವವಾಗಿ 1995 ನೇ ಇಸವಿಯವರೆಗಿನ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಕೆಲಸಗಳು ಸರ್ಕಾರದಿಂದ ಈ ಹಿಂದೆ ಆಗಿವೆ. ಆದರೆ, 1995 ರಿಂದ 2005 ನೇ ಇಸವಿಯವರೆಗೆ ಮತ್ತು 2000 ರಿಂದ 2005 ನೇ ಇಸವಿಯವರೆಗೆ ಅನುದಾನ ನೀಡುವ ಪ್ರಶ್ನೆಯು ಇಲ್ಲಿದೆ. ಎಲ್ಲಾ ಅನುದಾನರಹಿತ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಬೇಕು; ಅಲ್ಲಿನ ಶಿಕ್ಷಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಆರ್ಥಿಕ ಭದ್ರತೆಯನ್ನು ನೀಡಬೇಕೇನ್ನುವುದು ಅವರುಗಳ ಒತ್ತಾಯವಾಗಿದೆ. ಇಂತಹ ಎಲ್ಲಾ ವಿಚಾರಗಳ ಬಗ್ಗೆ ಎಲ್ಲರಿಗೂ ಸಹ ತಿಳಿದಿದೆ. ವೇತನಾನುದಾನವಾಗಬೇಕು ಎನ್ನುವ ಬಗ್ಗೆ ಯಾರದೂ ವಾದವಿರಲಿಲ್ಲ. ಮೊದಲೂ ಸಹ ಈ ವ್ಯವಸ್ಥೆಯು ಸರಿಯಾಗಿತ್ತು. 1995 ರಿಂದ 2005 ನೇ ಸಾಲಿನವರೆಗೆ ಪ್ರಾರಂಭವಾದ ಅನುದಾನರಹಿತ ಕನ್ನಡ ಮಾಧ್ಯಮ ಶಾಲಾ-ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಬೇಕು ಎನ್ನುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿದೆ. ಇದರ ಬಗ್ಗೆ ಈಗಾಗಲೇ ಎರಡು ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಆರ್ಥಿಕ ಕಾರಣಗಳ ಮತ್ತು ಕರೋನಾ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯವರು ವೇತನಾನುದಾನವನ್ನು ಒಪ್ಪುತ್ತಿಲ್ಲ.

**(ಮುಂದು)**

**(302)05-03-2021(12-30)ಬಿಎಸ್‌ಡಿ-ವಿಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)**

ಇದರ ಬಗ್ಗೆ ಪರಿಶೀಲನೆ ಮತ್ತೆ ಪರಿಶೀಲನೆ ಮಾಡುವ ಕೆಲಸ ಮಾಡುತ್ತೇನೆ. ಇನ್ನು ಮಾನ್ಯ ಶ್ರೀಕಂಠೇಗೌಡರು ಮುಂದುವರೆದು ಸದರಿ ಶಾಲೆಗಳಲ್ಲಿರುವ ಎಲ್ಲಾ ಮಕ್ಕಳಿಗೂ ಸರ್ಕಾರಿ ಶಾಲೆಯ ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಈಗಾಗಲೇ ಛುಭಿಥಿಭಿಟಛ ಸೇರಿದಂತೆ ಕೆಲವು ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಆರ್ಥಿಕ ನಿಯಮಗಳು ಸಡಿಲವಾದ ನಂತರ ಮತ್ತು ನಮಗೆ ಆರ್ಥಿಕ ಶಕ್ತಿ ಬಂದ ನಂತರ ಈ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡುವ ಕೆಲಸ ಮಾಡುತ್ತೇನೆ. ದಯವಿಟ್ಟು ಸಹಕರಿಸಬೇಕೆಂದು ವಿನಂತಿಸುತ್ತೇನೆ.

**07. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ**

**ವಿಷಯ: 2006ರ ನಂತರ ನೇಮಕಗೊಂಡಿರುವ ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಕಡ್ಡಾಯವಾಗಿ ಜಾರಿಗೊಳಿಸುವ ಬಗ್ಗೆ**

– – –

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2006ರ ನಂತರ ನೇಮಕಗೊಂಡಿರುವ ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪತ್ರಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆ ಪ್ರಶ್ನೋತ್ತರ ಅವಧಿಯಲ್ಲಿ ಈ ಬಗ್ಗೆ ಚರ್ಚೆಯಾಗಿದ್ದು, 2006ರ ನಂತರ ನೇಮಕಗೊಂಡ ನೌಕರರಿಗೆ ಹೊಸ ಪಿಂಚಣಿ ಯೋಜನೆ, NPS (New Pension Scheme) ಅನ್ನು ಜಾರಿಗೆ ಕೊಡುವ ಬಗ್ಗೆ ರಾಜ್ಯ ಮತ್ತು ದೇಶದಲ್ಲಿ ಒಂದೆರಡು ರಾಜ್ಯಗಳನ್ನು ಹೊರತುಪಡಿಸಿ ಬೇರೆ ಕಡೆ ಜಾರಿಯಲ್ಲಿದೆ. ಆದರೆ ಈ ಪಿಂಚಣಿ ಯೋಜನೆ ಜಾರಿಗೆ ಬರುವಾಗ ಆಡಿದ ಬಣ್ಣ ಬಣ್ಣದ ಮಾತುಗಳಿಂದ ಎಲ್ಲಾ ನೌಕರರು ಬಹಳ ಸಂತೋಷದಿಂದ ಸ್ವಾಗತ ಮಾಡಿದರು. ಅಂದು " ನೌಕರರಿಂದ ಕಟಾಯಿಸುವಷ್ಟೇ ಪ್ರಮಾಣದ ಹಣವನ್ನು ಸರ್ಕಾರವು ಖಾತೆಗೆ ತೊಡಗಿಸಿ, ಆ ಹಣವನ್ನು Multinational Company ಗಳು ಅಥವಾ ಬೇರೆ ಬೇರೆ ವಹಿವಾಟುಗಳಲ್ಲಿ ತೊಡಗಿಸುತ್ತೇವೆ, ಆ ವಹಿವಾಟುಗಳಲ್ಲಿ ತೊಡಗಿಸಿದ ಹಣ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗುತ್ತದೆ. ನೌಕರರು ನಿವೃತ್ತಿಯಾದ ಸಂದರ್ಭದಲ್ಲಿ ಬಹಳ ದೊಡ್ಡ ಪ್ರಮಾಣದ ಹಣ ಸಿಗುತ್ತದೆ" ಎನ್ನುವ ಮಾತುಗಳನ್ನು ಹೇಳಿದರು. ಹಾಗಾಗಿ ಲಾಭದಾಯಕ ಉದ್ಯಮಗಳಲ್ಲಿ ಹಣವನ್ನು ತೊಡಗಿಸಿದಾಗ ಹೆಚ್ಚಿನ ಲಾಭ ಬರುತ್ತದೆ ಎನ್ನುವ ಖುಷಿಯಿಂದ ದೇಶದ ನೌಕರರು ಬಹಳ ಸಂತೋಷದಿಂದ NPS ಅನ್ನು ಸ್ವಾಗತ ಮಾಡಿದರು. ಆನಂತರದ ದಿನಗಳಲ್ಲಿ ಹತ್ತಾರು ಕಾರಣಗಳಿಂದ, ಆರ್ಥಿಕ ಹಿಂಜರಿತವೂ ಸೇರಿದಂತೆ...... ಈ scheme ಬೇರೆ ದೇಶಗಳಲ್ಲಿ ಬಹಳ ಯಶಸ್ವಿಯಾಗಿತ್ತು. ಬಹಳ ಯಶ್ವಸ್ವಿಯಾಗಿ ದುಪ್ಪಟ್ಟು, ನಾಲ್ಕೈದು ಪಟ್ಟು benefit ಗಳನ್ನು ನೌಕರರು ಪಡೆದಿದ್ದರು. ಆಮೇಲೆ ಹತ್ತಾರು ಕಾರಣಗಳಿಂದ ಎಲ್ಲಾ ಲಾಭದಾಯಕ ಉದ್ಯಮಗಳು ತೊಂದರೆಗೆ ಸಿಕ್ಕಿಹಾಕಿಕೊಳ್ಳುವುದು, ಹೂಡಿಕೆ ಮಾಡಿದ ಹಣ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹಾಗಾಗಿ ನೌಕರರು ಸಂಕಷ್ಟಕ್ಕೆ ಸಿಲುಕುವ ಸಂದರ್ಭ ಬಂತು. ಈಗ ಎಲ್ಲಾ ಸರ್ಕಾರಿ ನೌಕರರು ಹೊಸ ಪಿಂಚಣಿ ಯೋಜನೆ ಬೇಡ, ಹಳೆಯ ಪಿಂಚಣಿ ಯೋಜನೆ ಬೇಕು ಎನ್ನುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ನಮ್ಮ ಬೀದಿಯಲ್ಲಿ ಒಬ್ಬರು ಯಜಮಾನರು ವಾಸವಿದ್ದು, ಆ ಯಜಮಾನರ ಆರೈಕೆಯನ್ನು ಮನೆಯವರೆಲ್ಲರೂ ಬಹಳ ಚೆನ್ನಾಗಿ ಮಾಡುತ್ತಾರೆ. ಯಜಮಾನರಿಗೆ ಸ್ನಾನ ಮಾಡಿಸುತ್ತಾರೆ, walking ಕರೆದುಕೊಂಡು ಹೋಗಿ ಬರುತ್ತಾರೆ. ತಿಂಗಳಿಗೆ ಒಂದು ಸಾರಿ ಒಳ್ಳೆಯ dress ಹಾಕಿಸಿ ಹೊರಗಡೆ ಕರೆದುಕೊಂಡು ಹೋಗುತ್ತಾರೆ. ನಾನು ಅವರನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀರಿ ಎಂದು ಕೇಳುತ್ತೇನೆ. ಆಗ ಅವರು ' ಇವತ್ತು bank ನಿಂದ pension ತೆಗೆದುಕೊಂಡು ಬರಲು ಕರೆದುಕೊಂಡು ಹೋಗುತ್ತಿದ್ದೇವೆ' ಎಂದು ಹೇಳುತ್ತಾರೆ. ಯಜಮಾನರನ್ನು ಇಷ್ಟೊಂದು ಆರೈಕೆ ಮಾಡಿ ನೋಡಿಕೊಳ್ಳುತ್ತಿರುವ ಬಗ್ಗೆ ಕೇಳಿದಾಗ ' ನಮ್ಮ ತಾತನಿಗೆ ರೂ.20,000 pension ಬರುತ್ತದೆ, ಆ pension ನಲ್ಲಿ ನಮ್ಮ ಇಡೀ ಕುಟುಂಬ ಸಾಗುತ್ತಿದೆ, ಹಾಗಾಗಿ ತಾತನನ್ನು ಬಹಳ ಚೆನ್ನಾಗಿ

ನೋಡಿಕೊಳ್ಳುತ್ತಿದ್ದೇವೆ' ಎಂದು ಹೇಳುತ್ತಾರೆ. I mean, ನಿವೃತ್ತಿ ಆನಂತರದ ಬದುಕಿನ ಭದ್ರತೆಗೆ ೩ಜಟಟ೦ಟ ಅಗತ್ಯವಾಗಿದೆ. ಈ pension ಆತನ ಆಯುಷ್ಯವನ್ನು ಹೆಚ್ಚು ಮಾಡುತ್ತದೆ ಮತ್ತು ಕುಟುಂಬವನ್ನು ಸಾಕುತ್ತದೆ. ಆದರೆ ಹೊಸ pension scheme ಬಹಳ ಗೊಂದಲದಲ್ಲಿ ಇದೆ. ನೌಕರರಿಗೆ ಜೀವನ ಭದ್ರತೆ ಕೊಡುವಲ್ಲಿ ಸೋತಿದೆ, ಹಾಗಾಗಿ ನೌಕರರು ಹಳೆಯ pension scheme ಬೇಕು ಎನ್ನುತ್ತಿದ್ದಾರೆ. ನಿನ್ನೆ ಮಾನ್ಯ ಭೋಜೇಗೌಡರು ಮಾತನಾಡುತ್ತಾ, ' ಇನ್ನೂ ಹಳೆಯ pension scheme ಯಾರ್‍ಯಾರಿಗೆ ಬೇಕೋ, ಅವರಿಗೆ ಇದೆ' ಎಂದು ಹೇಳಿದರು. ಹಳೆಯ ಪಿಂಚಣಿ ಯೋಜನೆ ನಮಗೆ ಇದೆ, Parliament Members ಗೆ ಇದೆ, ಈ ರೀತಿಯವರೆಲ್ಲರಿಗೂ ಇದೆ. ನ್ಯಾಯಾಲಯದ Supreme Court, Judge ಗಳಿಂದ ಹಿಡಿದು ಎಲ್ಲರಿಗೂ ಇದೆ. ಆದರೆ ಶ್ರೀಸಾಮಾನ್ಯ ನೌಕರರಿಗೆ ಯಾಕಿಲ್ಲ? ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತನ್ನಿ. ಅವರು 25–30–35–40 ವರ್ಷಗಳ ಕಾಲ ಅವರ ಜೀವಿತದ ಅತ್ಯಂತ ಮಹತ್ವದ ಭಾಗವನ್ನು ಈ ಸೇವೆಯಲ್ಲಿ ಕಳೆದಿರುತ್ತಾರೆ. ತಮ್ಮ ದುಡಿಮೆ ಶ್ರಮವನ್ನು ಹಾಕಿ, ಸುಮಾರು 30–40 ವರ್ಷಗಳಷ್ಟು ದೀರ್ಘಕಾಲ ಸೇವೆ ಮಾಡಿದವರು ಸಮಾಧಾನವಾಗಿ ಬದುಕಬೇಕಲ್ಲವೇ? ಆ ರೀತಿ ಬದುಕಲು ನಿವೃತ್ತಿ ವೇತನ ಇದೆ. ಹಾಗಾಗಿ OPS (Old Pension Scheme) ಅನ್ನೇ ಜಾರಿಗೆ ಕೊಡಬೇಕು. ಮಾನ್ಯ ಸಭಾಪತಿಯವರೇ, ಇನ್ನೊಂದು ಕಡೆ ನಮ್ಮಲ್ಲಿ ಸರ್ಕಾರಿ, ಅನುದಾನಿತ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಶಾಲಾ–ಕಾಲೇಜುಗಳು ಇವೆ. ಈ pension scheme Government and Aided ನವರಿಗೂ ಇತ್ತು. KPTCL ಸೇರಿದಂತೆ ಬೇರೆ ಬೇರೆ ನಗರಸಭೆ ಹಾಗೂ ನಗರಪಾಲಿಕೆಗಳು ನಡೆಸುತ್ತಿದ್ದ ಶಾಲೆಗಳಿಗೂ ಇತ್ತು. ಈಗ NPS ಅನ್ನು ಕೇವಲ ಸರ್ಕಾರಿ ಶಿಕ್ಷಕರು ಮತ್ತು ನೌಕರರಿಗೆ ಮಾತ್ರ ಅನ್ವಯ ಮಾಡಿದ್ದಾರೆ. ಅನುದಾನಿತ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ, ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವ ಸಂಸ್ಥೆಯ ನೌಕರರಿಗೆ ಕೈಬಿಟ್ಟಿದ್ದಾರೆ. ಅಲ್ಲಿ ಏನು ಹೇಳುತ್ತಾರೆಂದರೆ, ಶಿಕ್ಷಕರ ಪಾಲಿನ ಹಣವನ್ನು ಶಿಕ್ಷಕರು ಕೊಡಲು ತಯಾರಿದ್ದಾರೆ, ಶಿಕ್ಷಕರು ಕೊಡಬೇಕಾದ ಏನು cut off percentage ಇದೆ, they are ready for it. ಹಣವನ್ನು ಕೊಡಲು ತಯಾರಿದ್ದಾರೆ, ಇನ್ನುಳಿದಂತೆ ಸರ್ಕಾರ ಭರಿಸಬೇಕಾದ ಹಣವನ್ನು ಆಡಳಿತ ಮಂಡಳಿಯವರು ಭರಿಸುವಂತೆ ಹೇಳಿದ್ದಾರೆ. ಆಡಳಿತ ಮಂಡಳಿಯವರ ಪರಿಸ್ಥಿತಿ ಬಗ್ಗೆ ಹೇಳಬೇಕೆಂದರೆ ಇವತ್ತು ಕನ್ನಡ ಶಾಲೆಗಳ ಪರಿಸ್ಥಿತಿ ಎಲ್ಲಿಗೆ ಹೋಗಿ ನಿಂತಿದೆ ಎಂದರೆ, ಶಾಲೆ ನಡೆಸಿದರೆ ಸಾಕಾಗಿದೆ ಎನ್ನುವಂತಹ ಪರಿಸ್ಥಿತಿ ಇದೆ. English Medium ನವರ ಪರಿಸ್ಥಿತಿ ಬಿಡಿ. International Schools ಅನ್ನು ಬಿಡಿ, ಅವರ

ಪರಿಸ್ಥಿತಿಯೇ ಬೇರೆ ಇದೆ. ಸಾಮಾನ್ಯ ಅನುದಾನಿತ ಹಾಗೂ ಅರೆ ಸರ್ಕಾರಿ ಸಂಸ್ಥೆಗಳ ಶಾಲೆಗಳ ಪರಿಸ್ಥಿತಿ ಬಹಳ ಸಂಕಷ್ಟದಲ್ಲಿದೆ. ಯಾವ ಆಡಳಿತ ಮಂಡಳಿಗಳಿಗೂ ನಿರ್ದಿಷ್ಟವಾದ ಆದಾಯ ಇಲ್ಲ. ಅವರು ಸರ್ಕಾರದ ಪರವಾಗಿ ನೌಕರರಿಗೆ ಹಣ ತುಂಬಿಕೊಡುವ ಶಕ್ತಿ ಇಲ್ಲ. ಹಾಗಾಗಿ ಆಡಳಿತ ಮಂಡಳಿಯವರು ಹಣ ಭರಿಸಿಲ್ಲ ಎಂದು NPS ಅನ್ನು aided ಸಂಸ್ಥೆಯಲ್ಲಿ ಕೆಲಸ ಮಾಡುವವರಿಗೆ ಜಾರಿ ಮಾಡಲಿಲ್ಲ.. ಅರೆ ಸರ್ಕಾರಿ ಸಂಸ್ಥೆಗಳಿಗೂ ಜಾರಿ ಮಾಡಲಿಲ್ಲ. ಇವರೆಲ್ಲರಿಗೂ ಹಳೆ ಮತ್ತು ಹೊಸ ಪಿಂಚಣಿ ಪದ್ಧತಿಗಳೂ ಇಲ್ಲ. ಅವರ ಕಷ್ಟ ದೇವರಿಗೊಬ್ಬನಿಗೆ ಪ್ರೀತಿ. ಅವರು OPS ಅನ್ನೇ ಜಾರಿಗೆ ಕೊಡುವರೆಗೂ NPS ಅನ್ನು ಜಾರಿಗೆ ಕೊಡಿ ಎಂದು ಅಂಗಲಾಚುತ್ತಿದ್ದಾರೆ, ಪ್ರತಿಭಟನೆ, ಉಪವಾಸ, ಪಾದಯಾತ್ರೆಗಳೆಲ್ಲವನ್ನೂ ಮಾಡಿದ್ದಾರೆ. ಅವರು ಪ್ರತಿ ಸಲವೂ ಪ್ರತಿಭಟನೆ ಕೈಗೊಂಡಾಗ ಮಾತು ಕೊಟ್ಟು ಕಳುಹಿಸುವುದೇ ಆಗಿದೆ. ಹಾಗಾಗಿ ಈಗಾಗಲೇ NPS ನಿಂದ ವಂಚಿತರಾಗಿರುವ ಎಲ್ಲಾ ನೌಕರರಿಗೆ ಈ ಓಕಖ ಅನ್ನು ವಿಸ್ತರಿಸುವುದು ಮತ್ತು ಹಿಡಿಯಾಗಿ NPS ಅನ್ನು ರದ್ದು ಮಾಡಿ, ಹಳೆಯ pension scheme ಗೆ ಹೋಗುವ ಮೂಲಕ ನೌಕರರಿಗೆ ಭದ್ರತೆಯನ್ನು ತಂದುಕೊಡಬೇಕು. ಏಕೆಂದರೆ pension scheme ಗೂ ಹಾಗೂ ಆತ ಸೇವೆಯಲ್ಲಿರುವಾಗ ಸೇವೆ ಮಾಡಿರುವ ಅವಧಿಗೂ ಬಹಳ ಸಂಬಂಧ ಇದೆ. ಭವಿಷ್ಯದಲ್ಲಿ ನಿವೃತ್ತಿಯಾದ ನಂತರ ಭದ್ರತೆ ಸಿಗುತ್ತದೆ ಎಂದಾಗ ಅತ್ಯಂತ ಪ್ರಾಮಾಣಿಕತೆಯಿಂದ ಹಾಗೂ ನಿಷ್ಪಲತೆಯಿಂದ ಕೆಲಸ ಮಾಡುತ್ತಾನೆ. ಹಗಲು-ರಾತ್ರಿ ಕೆಲಸ ಮಾಡುತ್ತಾನೆ. ಇವತ್ತು ಈ ರಾಜ್ಯದ ಇಡೀ ವ್ಯವಸ್ಥೆ ನೌಕರರಿಂದ ನಡೆಯುತ್ತಿದೆ. ಅಂತಹ ನೌಕರರ ಪ್ರಾಮಾಣಿಕವಾಗಿ 30-40 ವರ್ಷಗಳ ಕಾಲ ಸೇವೆ ಸಲ್ಲಿಸಬೇಕೆಂದರೆ ಅವನು retire ಆದಾಗ ಭದ್ರತೆ ಕೊಡಬೇಕಲ್ಲವೇ? ಚೆನ್ನಾಗಿ ದುಡಿಸಿಕೊಂಡು ಬಿಸಾಕುವುದಕ್ಕೆ ಆಗುತ್ತದೆಯೇ? ಹಾಗಾಗಿ ದಯಮಾಡಿ OPS ಜಾರಿಗೆ ತರಬೇಕು, ಯಾವುದೇ pension ಇಲ್ಲದಿರುವ ಎಲ್ಲಾ ನೌಕರರನ್ನು ಠಿಜಟಿಛಿಂಟಿ ವ್ಯಾಪ್ತಿಗೆ ತರುವಂತಹ ಕೆಲಸವನ್ನು ಮಾಡಬೇಕು. ಹಿಂದೆ ಠಿಜಟಿಛಿಂಟಿ ಅನ್ನು ಸರ್ಕಾರವೇ ಹಿಡಿಯಾಗಿ ಕೊಡುತ್ತಿತ್ತು. ಹಿಡಿಯಾಗಿ pension ಕೊಡುತ್ತಿದ್ದವರಿಗೆ share ಕಟ್ಟಲು ಏನು ತೊಂದರೆ ಇದೆ. ಅರೆಸರ್ಕಾರಿ, aided ನವರೆಲ್ಲರಿಗೂ ಕೊಡುತ್ತಿದ್ದರು. ಈಗ ಹೊಸ pension scheme ನಲ್ಲಿ Management ನವರು ಎಲ್ಲಿಂದ ಹಣ ತಂದು ಕಟ್ಟುತ್ತಾರೆ? ಅದು ಬೇಡವೆಂದರೆ ಅವರ ಸೇವೆಯನ್ನು ರಾಷ್ಟ್ರೀಕರಣ ಮಾಡಿಕೊಂಡು ಬಿಡಲಿ. ನಮ್ಮದು no problem. ಅಡ್ಡಿಯೇ ಇಲ್ಲ. ಸರ್ಕಾರಿ ಮತ್ತು ಖಾಸಗಿಯಲ್ಲಿರುವ ಎಲ್ಲಾ ಶಿಕ್ಷಕರು ಮತ್ತು ನೌಕರರ service ಅನ್ನು nationalized ಮಾಡಿಕೊಳ್ಳಲಿ. We need pension scheme. ಏಕೆಂದರೆ we need security

after the retirement. ಹಾಗಾಗಿ ಎಲ್ಲಾ ನೌಕರರಿಗೆ ಯಾವುದೇ ಯೋಜನೆಯನ್ನಾದರೂ ಜಾರಿಗೆ ಕೊಡುವುದು ಒಂದು ಅಂಶ. ಎರಡನೆಯದಾಗಿ ಹೊಸ ಯೋಜನೆ ಬದಲಾಗಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ಕೊಡಬೇಕು ಎಂದು ಕಳೆದ ಹತ್ತದಿನೈದು ವರ್ಷಗಳಿಂದ ಹೋರಾಟ ನಡೆಯುತ್ತಿದೆ, ಆ ಹೋರಾಟಕ್ಕೆ ಶಕ್ತಿ ತುಂಬುವ ನಿರ್ಣಯ ಸರ್ಕಾರದಿಂದ ಆಗಬೇಕು ಎಂದು ಮನವಿ ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಆಯನೂರು ಮಂಜುನಾಥ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಲಕ್ಷಾಂತರ ಜನರ ಬದುಕಿಗೆ ಸಂಬಂಧಪಟ್ಟ ನಿವೃತ್ತಿ ವೇತನದ ಪ್ರಸ್ತಾವವನ್ನು ಬಹಳ ಸಮಯೋಚಿತವಾಗಿ ಮಾನ್ಯ ಶ್ರೀಕಂಠೇಗೌಡರು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿದಂತೆ ಹಿಂದೆ ಕರ್ನಾಟಕ ಸರ್ಕಾರ ಲಾಟರಿ ticket ಗಳನ್ನು ಮಾರುತ್ತಿತ್ತು, ticket ತೆಗೆದುಕೊಂಡು ಬಿಟ್ಟರೆ ಮನೆ ಕಟ್ಟಬಹುದು, ಬಂಗಲೆ ಕಟ್ಟಬಹುದು, car ಎಲ್ಲವನ್ನು ಪಡೆಯಬಹುದು ಎಂಬಂತೆ ಇತ್ತು. ಅದು ಏನಾದರೂ ಠುಸ್ ಎಂದರೆ ಹಾಕಿದ ಬಂಡವಾಳ ಹೋಗಿಯೇ ಬಿಡುತ್ತಿತ್ತು. ಆವತ್ತಿನ ದಿವಸ ಕನಸುಗಳನ್ನು ಮಾರಾಟ ಮಾಡಿದಂತೆ, ನಿವೃತ್ತಿ ವೇತನವನ್ನು ಇದರಲ್ಲಿ ತೊಡಗಿಸಿಬಿಟ್ಟರೆ ಮುಂದೆ ಅಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಬರುತ್ತದೆ, ಆ ಹಣವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಿ, ಹೆಚ್ಚು ಲಾಭ ಬರುತ್ತದೆ ಎನ್ನತಕ್ಕ ಕನಸನ್ನು ನೌಕರರ ಮಧ್ಯೆ ಮಾರಿದರು.

**(ಮುಂದು)**

**(303)/05.03.2021/12.40/ಹೆಚ್‌ವಿಃಬಿಎನ್‌ಎಸ್**

**ಶ್ರೀ ಆಯನೂರು ಮಂಜುನಾಥ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದಂತಹ ಮೊದಲನೆಯ ಅವಧಿಯಲ್ಲಿ ಈ ಪ್ರಸ್ತಾವ ಮಂಡನೆ ಆಗಿತ್ತು. ನಂತರ ಯು.ಪಿ.ಎ. ಸರ್ಕಾರ ಎರಡನೆಯ ಅವಧಿಗೆ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಇದಕ್ಕೆ ಅಂಗೀಕಾರ ದೊರಕಿತು. ಕೇವಲ ಹದಿನೈದು ದಿನಗಳೊಳಗಾಗಿ ಎರಡೂ ಸದನಗಳಲ್ಲಿ ಈ ವಿಧೇಯಕ ಅಂಗೀಕರಿಸಲ್ಪಟ್ಟು, ಘನತೆವೆತ್ತ ರಾಷ್ಟ್ರಪತಿಗಳ ಅಂಗೀಕಾರದ ಮುದ್ರೆ ಸಹ ದೊರೆತಿತ್ತು. ಭಾರತ ದೇಶದ ಇತಿಹಾಸದಲ್ಲಿ ಯಾವುದೇ ಒಂದು ಮಸೂದೆ ಹದಿನೈದು ದಿನಗಳೊಳಗಾಗಿ ಲೋಕಸಭೆಯಲ್ಲಿ ಪ್ರಸ್ತಾವ ಆಗಿ, ರಾಜ್ಯ ಸಭೆಗೆ ಬಂದು, ರಾಜ್ಯ ಸಭೆಯಲ್ಲಿ ಪ್ರಸ್ತಾವವಾಗಿ, ಘನತೆವೆತ್ತ ರಾಷ್ಟ್ರಪತಿಗಳ ಅಂಕಿತವನ್ನು ಪಡೆದುಕೊಂಡಂತಹ ಯಾವುದಾದರೊಂದು ಮಸೂದೆ ಇದ್ದರೆ, ಅದು ಈ ಎನ್.ಪಿ.ಎಸ್. ಮಸೂದೆಯಾಗಿದೆ. ಕರ್ನಾಟಕ ರಾಜ್ಯದಲ್ಲಿ 2006ನೇ ಸಾಲಿನ ಆಯವ್ಯಯದಲ್ಲಿ ಈ ವಿಷಯ ಪ್ರಸ್ತಾವವಾಯಿತು. 2010ರಲ್ಲಿ, 2006ರಿಂದ

ಪೂರ್ವಾನ್ವಯವಾಗುವಂತೆ ಇದನ್ನು ಜಾರಿಗೊಳಿಸಲಾಯಿತು. ಯಾವುದಾದರೊಂದು ಕಾಯಿದೆಯನ್ನು 04 ವರ್ಷಗಳ ಕಾಲ ಪೂರ್ವಾನ್ವಯಗೊಳಿಸಿ ಜಾರಿ ಮಾಡಿದಂತಹ ಉದಾಹರಣೆಗಳು ಬಹಳ ಕಡಿಮೆಯಾಗಿದೆ. ಎನ್.ಪಿ.ಎಸ್. ವಿಷಯದಲ್ಲಿ ಈ ಕಾಯಿದೆಯನ್ನು 2010ರಲ್ಲಿ ಜಾರಿಗೊಳಿಸಿದರೂ ಸಹ 2006ನೇ ಇಸವಿಯಿಂದ ಪೂರ್ವಾನ್ವಯಗೊಳಿಸಲಾಯಿತು. ಪ್ರತಿಯೊಂದು ಸರ್ಕಾರವು, ಪ್ರತಿಯೊಬ್ಬ ನಾಗರಿಕ ತನ್ನ ಬದುಕಿನ ಕೊನೆಯ ದಿನಗಳಲ್ಲಿ ನೆಮ್ಮದಿಯಿಂದ ಗೌರವಯುತವಾಗಿ ಬದುಕಬೇಕೆಂದು ಬಯಸುತ್ತದೆ. ಅದಕ್ಕೋಸ್ಕರ ಸಾಮಾಜಿಕ ಭದ್ರತೆಯ ಯೋಜನೆಗಳನ್ನು ಅಂದರೆ, ವೃದ್ಧಾಪ್ಯವೇತನ ಇತ್ಯಾದಿಗಳನ್ನು  ಜಾರಿಗೆ ತಂದಿರುತ್ತದೆ. ಸರ್ಕಾರಿ ನೌಕರನಲ್ಲದೇ ಇರುವಂತಹ ಸಾಮಾನ್ಯ ವ್ಯಕ್ತಿಗೆ ವೃದ್ಧಾಪ್ಯವೇತನವನ್ನು ಕೊಟ್ಟು ನೆಮ್ಮದಿಯಿಂದ ಬದುಕು ಎಂದು ಹೇಳುತ್ತೇವೆ. ಆ ವ್ಯಕ್ತಿಗೆ ಬರುವಷ್ಟು ಹಣ ಈ ಎನ್.ಪಿ.ಎಸ್. ಯೋಜನೆಯಡಿಯಲ್ಲಿ ಬರುವ ಸರ್ಕಾರಿ ನೌಕರನಿಗೆ ನಿವೃತ್ತಿಯಾದ ಮೇಲೆ ಸಿಗುತ್ತಿಲ್ಲ.

ಒಬ್ಬ ಸಾಮಾನ್ಯ ಭಿಕ್ಷುಕ ಅಥವಾ ಕೂಲಿಕಾರ್ಮಿಕನಿಗೆ ಖಾತ್ರಿಯಾಗಿ ಇಷ್ಟು ಪ್ರಮಾಣದಲ್ಲಿ ವೃದ್ಧಾಪ್ಯವೇತನ ದೊರೆಯುತ್ತದೆಂದು ಗೊತ್ತಿರುತ್ತದೆ. ಆದರೆ, ಎನ್.ಪಿ.ಎಸ್.ಯೋಜನೆಯೊಳಗೆ ಬರುವಂತಹ ನೌಕರರಿಗೆ ಖಾತ್ರಿಯಾಗಿ ತಾವು ನಿವೃತ್ತಿ ಹೊಂದಿದ ಮೇಲೆ ಎಷ್ಟು ಹಣ ಬರುತ್ತದೆಂದು ಗೊತ್ತಿಲ್ಲ. ಬಹಳ ಜನಕ್ಕೆ ತಮ್ಮ ವೇತನದಲ್ಲಿ ಕಡಿತಗೊಳಿಸಿದಂತಹ ಶೇಕಡಾ 10 ಮತ್ತು ಸರ್ಕಾರದ ಪಾಲು ಶೇಕಡಾ 14 ಒಟ್ಟಾರೆಯಾಗಿ ಶೇಕಡಾ 24 ಅನ್ನು ಯಾವ ಕ್ಷೇತ್ರದಲ್ಲಿ ಹೂಡಿಕೆ ಮಾಡಲಾಗಿದೆಯೆನ್ನುವುದರ ಬಗ್ಗೆ ಮಾಹಿತಿ ಇರುವುದಿಲ್ಲ. ನನ್ನ ಗಳಿಕೆಯ ಹಣವನ್ನು ಎಲ್ಲಿ ಹೂಡಿಕೆ ಮಾಡಿದ್ದಾರೆ, ಯಾರ ಅನುಮತಿಯನ್ನು ತೆಗೆದುಕೊಂಡು ಹೂಡಿಕೆ ಮಾಡಲಾಗಿದೆ, ಅದರ ಲಾಭ ನಷ್ಟಗಳೇನು ಮತ್ತು ಆದರ ಆರ್ಥಿಕ ಸ್ಥಿತಿಯೇನು ಎನ್ನುವ ಅಂಶ ನಮ್ಮ ನೌಕರರಿಗೆ ಗೊತ್ತೇ ಇರುವುದಿಲ್ಲ. ಒಂದು ರೀತಿಯಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ನಾನು ಗಮನಿಸಿದಂತಹ ಒಂದು ಸಂಗತಿ ಏನೆಂದರೆ, ನಾನು 1994ಕ್ಕೂ ಮೊದಲೇ ಶಾಸಕನಾಗಿದ್ದೆ, 2006ನೇ ಇಸವಿಯ ನಂತರವೂ ಶಾಸಕನಾಗಿದ್ದೆ. ಕಾಯಿದೆ ಪ್ರಕಾರ ಒಬ್ಬ ಶಾಸಕ ಮತ್ತು ಸಂಸದ ಸರ್ಕಾರಿ ನೌಕರನಾಗಿದ್ದಾನೆ, public servant. ಆ ಕಾರಣಕ್ಕಾಗಿ ಶಾಸಕರಿಗೆ ವೇತನ, ಭತ್ಯೆಗಳು, ಹೆಚ್.ಆರ್.ಎ., ಟಿ.ಎ., ಮೆಡಿಕಲ್ ಅಲೋಯೆನ್ಸ್ ಮತ್ತು ನಿವೃತ್ತಿ ವೇತನದ ಸವಲತ್ತುಗಳು ಇವೆ. ಒಬ್ಬ ಶಾಸಕನ ನಿಧನದ ನಂತರ ಆ ಎಲ್ಲ ಸೌಲಭ್ಯಗಳು ಆತನ ಮನೆಯವರಿಗೆ ವರ್ಗಾಯಿಸಲ್ಪಡುತ್ತದೆ. ಇದೇ ವ್ಯವಸ್ಥೆ ಸರ್ಕಾರಿ ನೌಕರರಲ್ಲಿಯೂ ಇದೆ. ಆದರೆ, ಇದು 2006ರ ನಂತರ ನೇಮಕಾತಿ ಹೊಂದಿದವರಿಗೆ ಈ ಯಾವ ಸವಲತ್ತುಗಳು ಸಿಗುವುದಿಲ್ಲವೆಂದು ಎಲ್ಲವನ್ನು ತೆಗೆದುಹಾಕಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ನಾನು ಶಾಸಕನಾಗಿ ಸರ್ಕಾರಿ ನೌಕರ ಅಲ್ಲವೋ-ಹೌದೋ; 2010ರಿಂದ ರಾಜ್ಯಸಭಾ ಸದಸ್ಯನಾಗಿದ್ದೆ, 2018ನೇ ಇಸವಿಯಿಂದ ವಿಧಾನ ಪರಿಷತ್ತಿನ ಸದಸ್ಯನಾಗಿದ್ದೇನೆ.

ಇದಕ್ಕಿಂತ ಮುಂಚೆ 1998ನೇ ಇಸವಿಯಲ್ಲಿ ಲೋಕಸಭಾ ಸದಸ್ಯನಾಗಿದ್ದೆ, 1994ರಲ್ಲಿ ವಿಧಾನಸಭಾ ಸದಸ್ಯನಾಗಿದ್ದೆ. ನಾನು 2006ಕ್ಕೂ ಮುಂಚೆ ಶಾಸಕನಾಗಿದ್ದೆ, 2006ರ ನಂತರವೂ ಶಾಸಕನಾಗಿದ್ದೇನೆ. ನನಗೆ ಎನ್.ಪಿ.ಎಸ್., ಓ.ಪಿ.ಎಸ್. ಎರಡೂ ಅನ್ವಯವಾಗುತ್ತದೆಯೇ ಅಥವಾ ಒಂದೇ ಅನ್ವಯವಾಗುತ್ತದೆಯೇ? ಶಾಸಕ ಒಂದು ವರ್ಷದ ಮಟ್ಟಿಗೆ ಆಯ್ಕೆಯಾಗಿ ಬಂದರೂ ಸಹ ಆತನನ್ನು ಸರ್ಕಾರಿ ನೌಕರನೆಂದು ಪರಿಗಣಿಸಿ 2006ಕ್ಕೂ ಮೊದಲಿನ ಓ.ಪಿ.ಎಸ್. ಪಿಂಚಣಿ ಸೌಲಭ್ಯಗಳನ್ನು ನೀಡುತ್ತಿರುವುದಕ್ಕೆ ಕಾರಣವೇನು? ಶಾಸಕರ ಸರ್ಕಾರಿ ನೌಕರ ಎನ್ನುವುದಾದರೆ, ಆತ ಇತರೆ ಸರ್ಕಾರಿ ನೌಕರನಿಗೆ ಸಮನಾಗಿರುತ್ತಾನೆ. Public servant ನ ವ್ಯಾಪ್ತಿ ಏನಿದೆ? ಎಲ್ಲ ಅಧಿಕಾರಿಗಳು ಪಬ್ಲಿಕ್ ಸರ್ವೆಂಟೇ. What does public servant mean?

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸರ್ಕಾರಿ ನೌಕರರು ಜನರ ಸೇವೆಗಾಗಿ ಇರುವವರು. ನಾವು public servants ಅವರುಗಳು Government servants.

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ಅದು ಆ ರೀತಿಯಾಗಿಲ್ಲ. ಸರ್ಕಾರದ ನೌಕರರ ರೀತಿ ನಾವಿದ್ದೇವೆ ಎನ್ನುವ ಕಾರಣಕ್ಕಾಗಿ ಒಂದು ಭ್ರಷ್ಟಾಚಾರದ ಆರೋಪ ಕೇಳಿ ಬಂದರೆ ಹೇಗೆ ಸರ್ಕಾರಿ ನೌಕರರ ಮೇಲೆ ಲೋಕಾಯುಕ್ತ ದಾಳಿ ಮಾಡಬಹುದು, ಅದೇ ರೀತಿಯಲ್ಲಿ ಶಾಸಕರ ಮೇಲೂ ಮಾಡಬಹುದು.

**Sri S.R.PATIL** :- Public servants are also amenable.

**ಶ್ರೀ ಆಯನೂರು ಮಂಜುನಾಥ್:–** 2006ರ ನಂತರ ಶಾಸಕನಾಗಿರುವ ನನಗೆ ಓ.ಪಿ.ಎಸ್. ಪಿಂಚಣಿ ಸೌಲಭ್ಯವನ್ನು ನೀಡಲಾಗುತ್ತಿದೆ ಯಾಕೆ ಎನ್.ಪಿ.ಎಸ್. ಪಿಂಚಣಿಯನ್ನು ನೀಡುತ್ತಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ. ಶಾಸಕರು ಮತ್ತು ಸಂಸದರು ಯಾವಾಗ ಆಯ್ಕೆಯಾದರು ನಾವು ಓ.ಪಿ.ಎಸ್. ಪಿಂಚಣಿ ಯೋಜನೆಯಡಿಯಲ್ಲಿ ಬರುತ್ತೇವೆ. ಆದರೆ, ಸರ್ಕಾರಿ ನೌಕರರಿಗೆ ಮಾತ್ರ ಆ ರೀತಿ ಇಲ್ಲ. ಬಹಳ ಆಶ್ಚರ್ಯದ ಸಂಗತಿಯನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಲೋಕಸಭಾ ಸದಸ್ಯನಾಗಿದ್ದೆ ಮತ್ತು ರಾಜ್ಯ ಸಭಾ ಸದಸ್ಯನಾಗಿದ್ದೆ, ನನಗೆ ಆ ಪಿಂಚಣಿ ಸಹ ಬರುತ್ತಿದೆ. ವಿಧಾನಸಭಾ ಸದಸ್ಯನಾಗಿದ್ದೆ, ಅದರ ಪಿಂಚಣಿಯೂ ಬರುತ್ತಿದೆ; ಪಾರ್ಲಿಮೆಂಟ್ ಮತ್ತು ವಿಧಾನಸಭೆಯ ಎರಡೂ ಪಿಂಚಣಿಯ ಸೌಲಭ್ಯವನ್ನು ನಾನು ಪಡೆಯುತ್ತಿದ್ದೇನೆ. ನನ್ನ ರೀತಿ ಯಾರ್ಯಾರು ಬಂದಿದ್ದಾರೋ ಅವರೆಲ್ಲರಿಗೂ ಈ ಸೌಲಭ್ಯ ಸಿಗುತ್ತಿದೆ. ಅವರೆಲ್ಲರಿಗೂ ಓ.ಪಿ.ಎಸ್. ಪಿಂಚಣಿ ಸೌಲಭ್ಯವನ್ನೇ ನೀಡಲಾಗುತ್ತಿದೆ. ಈಗ ನಾನು ಹಾಲಿ ವಿಧಾನ ಪರಿಷತ್ತಿನ ಶಾಸಕನಾಗಿದ್ದೇನೆ. ಪಿಂಚಣಿ ನಿಂತಿದೆ ಆದರೆ, ಕನಿಷ್ಠ ಮೊತ್ತವಾಗಿರುವ 28

ಸಾವಿರ ರೂಪಾಯಿಗಳು ನನಗೆ ಪ್ರತಿ ತಿಂಗಳು ದೊರೆಯುತ್ತಿದೆ. ಅಂದರೆ, ಶಾಸಕ ಮಾತ್ರ ಮನುಷ್ಯನೇ? ನೌಕರರು ಮನುಷ್ಯರಲ್ಲವೇ? ಹೇಗೆ ನಾವು ಸರ್ಕಾರವನ್ನು ನಡೆಸುತ್ತೇವೆಯೋ ಆ ಸರ್ಕಾರದ ಒಂದು ಭಾಗವಾಗಿ, ಸರ್ಕಾರದ ಯಂತ್ರವಾಗಿ.....

**ಡಾ||ವೈ.ಎ.ನಾರಾಯಣಸ್ವಾಮಿಃ-** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ವಿಧಾನಸಭೆಯ ಶಾಸಕನಾಗಿದ್ದೆ ನನಗೆ ಪಿಂಚಣಿ ಬರುತ್ತಿಲ್ಲ. ಯಾಕೆ ಬರುತ್ತಿಲ್ಲವೆನ್ನುವುದು ನನಗೆ ಗೊತ್ತಿಲ್ಲ.

**ಶ್ರೀ ಆಯನೂರು ಮಂಜುನಾಥ್ಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಕಾನೂನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ ಅದಕ್ಕೋಸ್ಕರ ಅವರಿಗೆ ಪಿಂಚಣಿ ಬರುತ್ತಿಲ್ಲ. ಸಂಸದರಾಗಿದ್ದರೆ ಪಿಂಚಣಿ ಬರುತ್ತದೆ. ಶ್ರೀಮತಿ ತೇಜಸ್ವಿನಿಗೌಡ, ಶ್ರೀಯುತರುಗಳಾದ ಹೆಚ್.ವಿಶ್ವನಾಥ್ ಮತ್ತು ಬಿ.ಕೆ. ಹರಿಪ್ರಸಾದ್ ಇವರುಗಳಿಗೆಲ್ಲ ಪಿಂಚಣಿ ಬರುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್ಃ-** ಸನ್ಮಾನ್ಯ ಸಭಾಪತಿಯವರೇ, ಅವರು ಎಲ್ಲ ಮಜಲುಗಳನ್ನು ದಾಟಿ ಬಂದಿದ್ದಾರೆ.

**ಶ್ರೀ ಆಯನೂರು ಮಂಜುನಾಥ್ಃ-** ಸನ್ಮಾನ್ಯ ಸಭಾಪತಿಯವರೇ, ದುಡ್ಡಿನ ವಿಚಾರ ಬಂದಾಗ, ಎಲ್ಲ ಮಜಲುಗಳು ಬೇರೆಯಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಸರ್ಕಾರ ನಡೆಸುವವರಿಗೆ ಓ.ಪಿ.ಎಸ್. ಪಿಂಚಣಿ ಬೇಕು, ಸರ್ಕಾರದ ಯಂತ್ರವಾಗಿರುವ ನೌಕರರಿಗೆ ಯಾಕೆ ಬೇಡ? They are the machinery, parts of the Government and they are running the Government. ಸರ್ಕಾರದ ಎಲ್ಲ ಆಶಯಗಳನ್ನು ಯೋಜನೆಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವವರು ಸರ್ಕಾರಿ ನೌಕರರು. ಅವರಿಗೆ ಯಾಕೆ ಓ.ಪಿ.ಎಸ್. ಪಿಂಚಣಿ ಯೋಜನೆ ಬೇಡ, ನಮಗೆ ಯಾಕೆ ಬೇಕು? ಅವರುಗಳು 20-30 ವರ್ಷಗಳ ಕಾಲ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಾರೆ. ನಾವು ಶಾಸಕರಾಗಿ 5 ವರ್ಷಗಳು ಮಾತ್ರ ಸೇವೆ ಸಲ್ಲಿಸಿದರೂ ಅಥವಾ ಮಧ್ಯಂತರ ಚುನಾವಣೆಯಾಗಿ ಎರಡು ವರ್ಷ ಅಥವಾ ಒಂದು ವರ್ಷ ಸೇವೆ ಸಲ್ಲಿಸಿದ್ದರೂ ಸಹ ಶಾಶ್ವತವಾಗಿ ಓ.ಪಿ.ಎಸ್. ಪಿಂಚಣಿ ದೊರೆಯುತ್ತದೆ. ಆತನ ಮಕ್ಕಳಿಗೂ ದೊರೆಯುತ್ತದೆ. ನಿವೃತ್ತಿ ವೇತನವನ್ನು ನೀಡುವ ವಿಚಾರದಲ್ಲಿ ಈ ತಾರತಮ್ಯ ಬರಬಾರದು. ಎನ್.ಪಿ.ಎಸ್. ಯೋಜನೆ ಒಟ್ಟಾರೆಯಾಗಿ ಅವೈಜ್ಞಾನಿಕವಾಗಿದೆ ಮತ್ತು ಅಮಾನವೀಯವಾಗಿದೆ. ಪ್ರತಿಯೊಬ್ಬ ಪ್ರಜೆಯೂ ಗೌರವಯುತವಾಗಿ ತನ್ನ ಕೊನೆಯ ದಿನಗಳನ್ನು ಕಳೆಯಬೇಕಾಗಿದೆ. ಆ ಕಾರಣದಿಂದಾಗಿ ಎನ್.ಪಿ.ಎಸ್. ಪಿಂಚಣಿ ಯೋಜನೆ ರದ್ದಾಗಿ ಓ.ಪಿ.ಎಸ್. ಪಿಂಚಣಿ ಯೋಜನೆ ಜಾರಿಗೆ ಬರಬೇಕಾಗಿದೆ. ಓ.ಪಿ.ಎಸ್. ಪಿಂಚಣಿ ಯೋಜನೆಯನ್ನು ಜಾರಿಗೆ

ತರುವುದಕ್ಕೆ ಸಾಧ್ಯವಾಗದೇ ಇರುವಂತಹ ಕಾರಣಗಳು ಸರ್ಕಾರಕ್ಕಿದ್ದರೆ, ನಾವೆಲ್ಲರೂ ಹೊಸದಾಗಿ ಶಾಸಕರಾಗಿ ಆಯ್ಕೆಗೊಂಡಿದ್ದೇವೆ. 2006ರ ನಂತರ ಯಾರ್ಯಾರು ಆಯ್ಕೆಗೊಂಡಿದ್ದಾರೆ ಅವರೆಲ್ಲರಿಗೂ ಎನ್.ಪಿ.ಎಸ್. ಪಿಂಚಣಿ ಯೋಜನೆಯನ್ನು ಜಾರಿಗೆ ತರಲಿ ಎನ್ನುವುದು ನನ್ನ ಅಭಿಪ್ರಾಯವಾಗಿದೆ. We will save the money. ನಮಗೆ ಯಾಕೆ ಎನ್.ಪಿ.ಎಸ್. ಪಿಂಚಣಿ ಯೋಜನೆ ಅನ್ವಯವಾಗುವುದಿಲ್ಲ, ನ್ಯಾಯಾಧೀಶರಿಗೆ ಯಾಕೆ ಅನ್ವಯವಾಗುವುದಿಲ್ಲ. ಈ ತಾರತಮ್ಯದ ಮೂಲಕ ಬದುಕನ್ನು ಕಟ್ಟಿಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ಎನ್.ಪಿ.ಎಸ್.ಯನ್ನು ಜಾರಿಗೆ ತರುವುದರ ಬಗ್ಗೆ ನನಗೆ ಒಪ್ಪಿಗೆ ಇದೆ. ನಾನು 2006ನೇ ಇಸವಿಯ ನಂತರ ಆಯ್ಕೆಗೊಂಡಿದ್ದೇನೆ. ನನ್ನನ್ನು ಎನ್.ಪಿ.ಎಸ್. ಪಿಂಚಣಿ ಯೋಜನೆಗೆ ಒಳಪಡಿಸಿ. ಯಾವ ಶಾಸಕರು ಓ.ಪಿ.ಎಸ್. ಪಿಂಚಣಿ ಯೋಜನೆ ಬೇಡವೆಂದು ಹೇಳುತ್ತಾರೆ ಅವರೆಲ್ಲರನ್ನೂ ಎನ್.ಪಿ.ಎಸ್. ಪಿಂಚಣಿ ಯೋಜನೆಗೆ ಒಳಪಡಿಸಿ, ಈ ಕೆಲಸವನ್ನು ಏತಕ್ಕೋಸ್ಕರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ನ್ಯಾಯದ ವಿಚಾರ ಮತ್ತು ಸಾಮಾಜಿಕ ಬದ್ಧತೆಯ ವಿಚಾರವನ್ನು ಮಾತನಾಡುವುದಾದರೆ, ನನ್ನನ್ನೂ ಒಳಗೊಂಡಂತೆ ನಮ್ಮ ಎಲ್ಲ ಶಾಸಕರನ್ನು ಮತ್ತು ಸಂಸದರನ್ನು ಎನ್.ಪಿ.ಎಸ್.ಗೆ ಒಳಪಡಿಸಬೇಕು ಇಲ್ಲದಿದ್ದರೆ, ನಮ್ಮ ರೀತಿಯಲ್ಲಿಯೇ ಎಲ್ಲ ಸರ್ಕಾರಿ ನೌಕರರನ್ನು ಓ.ಪಿ.ಎಸ್. ಪಿಂಚಣಿ ಯೋಜನೆಗೆ ಒಳಪಡಿಸಬೇಕು. ಇದರ ಬಗ್ಗೆ ದೀರ್ಘವಾಗಿ ಮಾತನಾಡುವಂತಹ ಸಂದರ್ಭ ಬಂದಾಗ ಮಾತನಾಡುತ್ತೇನೆ. ಎನ್.ಪಿ.ಎಸ್. ಯೋಜನೆ ರದ್ದಾಗಬೇಕು, ಓ.ಪಿ.ಎಸ್. ಪಿಂಚಣಿ ಯೋಜನೆ ಜಾರಿಗೆ ಬರಬೇಕು. ಎಲ್ಲ ನಿವೃತ್ತರ ಬದುಕಿನಲ್ಲಿ ನೆಮ್ಮದಿಯನ್ನು ಮತ್ತು ಯಾರ ಮುಂದೆಯೂ ಕೈ ಒಡ್ಡದೇ ಇರುವಂತಿರಬೇಕಾಗುತ್ತದೆ. ಮಾನ್ಯ ಶ್ರೀಕಂಠೇಗೌಡರು ಹೇಳಿದಂತೆ ನಮ್ಮ ಸಾಮಾಜಿಕ ಬದುಕು ಜಾಳುಜಾಳಾಗಿದೆ. ಸಂಬಂಧಗಳು ತೆಳುವಾಗಿವೆ. ವಯಸ್ಸಾದ ನಂತರ ಒಂದಿಷ್ಟು ಹಣ ಬರುತ್ತಿದೆಯೆಂದರೆ, ಮಗ, ಸೊಸೆ ನೋಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಅವರ ಪರಿಸ್ಥಿತಿ ಹಾಳಾಗಿ ಹೋಗುತ್ತದೆ. ಇಲ್ಲದಿದ್ದರೆ, ಮಾನ್ಯ ಎಸ್.ಆರ್.ಪಾಟೀಲ್‌ರವರ ರೀತಿಯಲ್ಲಿ ನೂರಾರು ಎಕರೆ ಜಮೀನಿನ ಮಾಲೀಕರಾಗಿದ್ದರೆ, ಆ ಆಸ್ತಿಯನ್ನು ನಮ್ಮ ಹೆಸರಿನಲ್ಲಿ ಇಟ್ಟುಕೊಂಡಿದ್ದರೆ ಮತ್ತು ನಮ್ಮ ಹೆಸರಿನಲ್ಲಿ ಎಲ್ಲಿಯವರೆಗೆ ಆದಾಯ ಬರುತ್ತಿರುತ್ತದೆ ಅಲ್ಲಿಯವರೆಗೆ ಭವಿಷ್ಯ ಭದ್ರವಾಗಿರುತ್ತದೆ. ಇಲ್ಲದಿದ್ದರೆ ಬಹಳ ಅತಂತ್ರವಾಗುತ್ತದೆ. ಆ ಕಾರಣದ ಹಿನ್ನೆಲೆಯಲ್ಲಿ ಸರ್ಕಾರ ಈ ಗಮನಸೆಳೆಯುವ ಸೂಚನೆಯನ್ನು ಗಂಭೀರವಾಗಿ ತೆಗೆದುಕೊಂಡು ಸರ್ಕಾರ ದೊಡ್ಡ ಮನಸ್ಸು ಮಾಡಿ ಎನ್.ಪಿ.ಎಸ್. ಪಿಂಚಣಿ ಯೋಜನೆಯನ್ನು ರದ್ದುಪಡಿಸಿ ಓ.ಪಿ.ಎಸ್. ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**(304) 5.3.2021 12.50 ಪಿಕೆ:ಬಿಎಸ್ಎಸ್**

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಇಬ್ಬರು ಹಿರಿಯ ಸದಸ್ಯರು ಎನ್‌ಪಿಎಸ್ ಮತ್ತು ಓಪಿಎಸ್ ಬಗ್ಗೆ ಚರ್ಚೆ ಮಾಡಿದರು. ನಿನ್ನೆ ನಾನೂ ಕೂಡ ಮುಖ್ಯಮಂತ್ರಿಗಳಿಗೆ ಪ್ರಶ್ನೆ ಕೇಳಿದ್ದೆ. ಅದಕ್ಕೆ ಸಭಾನಾಯಕರು ಉತ್ತರ ಕೊಟ್ಟಿದ್ದಾರೆ. ಆ ಉತ್ತರ ಅಷ್ಟೊಂದು ಸಮಂಜಸವಾಗಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎನ್‌ಪಿಎಸ್ ಅಥವಾ ಯಾವುದೇ ಕಾಯಿದೆಗಳನ್ನು ಜಾರಿಗೆ ತರುವುದಕ್ಕೆ ಮುಂಚೆ ಚರ್ಚೆಗಳು ಆಗಬೇಕಾಗುತ್ತದೆ. ಇದನ್ನು ಪಾರ್ಲಿಮೆಂಟ್‌ನಲ್ಲಿ ಪ್ಲೇಸ್ ಮಾಡಿದಂತಹ ಸಂದರ್ಭದಲ್ಲಿ ಅಂದರೆ, ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಈ ಕುರಿತು ಚರ್ಚೆ ಆಗಲಿಲ್ಲವೇ? ಇಷ್ಟೊಂದು ಗಂಭೀರವಾಗಿರುವ ವಿಚಾರ ಚರ್ಚೆ ಆಗದೇ ಹೇಗೆ ಆಚೆ ಬಂತು ಎನ್ನುವುದು ಬಹಳ ಜಿಜ್ಞಾಸೆಯಾಗಿ ಉಳಿದಿದೆ. ತದನಂತರದಲ್ಲಿ ಇಡೀ ದೇಶದ ವಿಧಾನಸಭೆ ಮತ್ತು ವಿಧಾನ ಪರಿಷತ್ತುನಲ್ಲಿ option ಬಿಟ್ಟಿದ್ದಾರೆ. ಇದನ್ನು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಆದರೆ ನಮ್ಮ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅದೇ ಪರಿಸ್ಥಿತಿ ನಿರ್ಮಾಣ ಆಗಿ ಇದು ಆಚೆ ಬಂದಿದೆ. ಇದು ಆಚೆ ಬಂದಮೇಲೆ ಎನ್‌ಪಿಎಸ್ ಮತ್ತು ಓಪಿಎಸ್‌ಗೆ ಇರುವ ವ್ಯತ್ಯಾಸಗಳೇನು ಎನ್ನುವುದು ಇತ್ತೀಚಿನ ದಿನಗಳಲ್ಲಿ ಗೊತ್ತಾಗಿದೆ. ಕೆಲವು ಜನ ನಿವೃತ್ತಿಯಾದರು. ಎನ್‌ಪಿಎಸ್ ನಿಂದ ಬಹಳ ಸಿಗುತ್ತದೆ ಎಂದು ಏನು ಬಿಂಬಿಸಿದ್ದರೋ ಅದು ಎಷ್ಟರಮಟ್ಟಿಗೆ ಬಂತು ಎನ್ನುವುದು ನಿವೃತ್ತಿಯಾದವರಿಗೆ ಗೊತ್ತಾಗಿದೆ. ಇದು ಅತ್ಯಂತ ಶೋಚನೀಯವಾದುದು. ಈ ಕುರಿತು ಚರ್ಚೆ ಆಯಿತೋ ಬಿಟ್ಟಿತೋ ಇದು ಇವತ್ತು ಆಚೆ ಬಂದನಂತರ ಅದರ ಪರಿಣಾಮ ಏನು ಎನ್ನುವುದು ಅರ್ಥವಾಗಿದೆ. 35-40 ವರ್ಷಗಳ ಕಾಲ ಅವಿರತವಾಗಿ ಸೇವೆ ಮಾಡಿ ಆಚೆ ಹೋಗಬೇಕಾದರೆ ಬರಿಗೈಲಿ ಹೋಗುತ್ತಿರುವುದರಿಂದ ಅವರ ಕುಟುಂಬಗಳ ಪರಿಸ್ಥಿತಿ ಏನು? ಅವರು ಕುಟುಂಬದ ನಿರ್ವಹಣೆಯನ್ನು ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಈಗಾಗಲೇ ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡುತ್ತಾ, ನಾನು 2006ರ ನಂತರ ಶಾಸಕನಾಗಿ ಆಯ್ಕೆಯಾಗಿದ್ದೇನೆ; ನನಗೆ ಓಪಿಎಸ್ ಬೇಡ ಎನ್‌ಪಿಎಸ್ ಕೊಡಲಿ ಎಂದು ಹೇಳಿದರು. ನಾನು ವೈಯಕ್ತಿವಾಗಿ ಹೇಳುತ್ತಿರುವುದರಿಂದ ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬೇಡಿ. ಒಬ್ಬ ಶಾಸಕನಾದವನು ಬಡವನಾಗಿರುವುದಕ್ಕೆ ಸಾಧ್ಯವೇ ಇಲ್ಲ ಎಂದು ಸಮಾಜ ತಿಳಿದುಕೊಳ್ಳುತ್ತದೆ. ರಾಜಕಾರಣಿಗಳ ಬಗ್ಗೆ ಸಮಾಜ ಯಾವರೀತಿ ತಿಳಿದುಕೊಂಡಿದೆ ಎಂದು ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಮ್ಮೆ ಶಾಸಕನಾದವನ ಆರ್ಥಿಕ ಪರಿಸ್ಥಿತಿ ಎಷ್ಟರಮಟ್ಟಿಗೆ ಸುಧಾರಿಸುತ್ತದೆ ಎನ್ನುವ ವಿಚಾರವನ್ನೂ ಕೂಡ ಸಮಾಜ ತಿಳಿದುಕೊಂಡಿದೆ. ಕೆಲವು ನಿಷ್ಠಾವಂತ ಶಾಸಕರೂ ಇದ್ದಾರೆ, ನಾನು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ರಾಜಕಾರಣದಲ್ಲಿ ಭ್ರಷ್ಟರೂ

ಇದ್ದಾರೆ, ಒಳ್ಳೆಯವರೂ ಇದ್ದಾರೆ. ಓಪಿಎಸ್ ನನಗೆ ಬೇಡ, ಎನ್‌ಪಿಎಸ್ ಕೊಡಿ ಎಂದು ಹೇಳಿದರೆ ಅದನ್ನು ಬೆಳಿಗ್ಗೆಯಿಂದಲೇ ಜಾರಿ ಮಾಡಬಹುದು ತೊಂದರೆ ಇಲ್ಲ. ಆದರೆ, ಓಪಿಎಸ್ ಇಲ್ಲದೆಯೂ ನಾವು ಜೀವನ ಮಾಡುವಂತಹ ಶಕ್ತಿಯನ್ನು ಆ ಭಗವಂತ ಕೊಟ್ಟಿದ್ದಾನೆ. ಇದನ್ನು ನಾನು ವೈಯಕ್ತಿಕವಾಗಿ ಹೇಳುತ್ತಿದ್ದೇನೆ. ಹಾಗಾಗಿ ಇದು ಪರಿಹಾರ ಆಗುವುದಿಲ್ಲ. ಯಾವ ಮನುಷ್ಯನಿಗೆ ನಿಜವಾಗಿ ಆರ್ಥಿಕ ಭದ್ರತೆ ಬೇಕಾಗಿದೆಯೋ ಆ ಭದ್ರತೆಯನ್ನು ಕೊಡುವ ಕೆಲಸ ಸಂವಿಧಾನ ಬದ್ಧವಾಗಿರುವಂತಹ ಹಕ್ಕಾಗಿದೆ. It is a constitutional right.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಭೋಜೇಗೌಡರೇ ಒಂದು ನಿಮಿಷ ನಾನು ಮಾತನಾಡುತ್ತೇನೆ. ಸರ್ಕಾರ, ಎನ್‌ಪಿಎಸ್ ಬಹಳ ಚೆನ್ನಾಗಿದೆ ಎಂದು, ಜನೋಪಯೋಗಿಯಾಗಿದೆ ಎಂದು ತಿಳಿದುಕೊಂಡಿದ್ದರೆ ಅದನ್ನು ನಮಗೂ ಕೊಟ್ಟುಬಿಡಿ, ನಮಗೇಕೆ ಅನ್ಯಾಯ ಮಾಡುತ್ತೀರಿ ಎಂದು ವ್ಯಂಗ್ಯವಾಗಿ ಹೇಳಿದೆ. ಎನ್‌ಪಿಎಸ್ ಚೆನ್ನಾಗಿಲ್ಲ ಎಂದು ನಮಗೆ ಗೊತ್ತಿರುವುದರಿಂದ ನಾವು ಓಪಿಎಸ್ ಇಟ್ಟುಕೊಂಡಿದ್ದೇವೆ. ಎನ್‌ಪಿಎಸ್ ಬಹಳ ಚೆನ್ನಾಗಿದೆ, ಬಹಳ ಒಳ್ಳೆಯ ಸ್ಕೀಮ್ ಆಗಿದೆ ಎಂದು ನಾನು ಮಾರ್ಮಿಕವಾಗಿ ಹೇಳುತ್ತಿದ್ದೇನೆ. ಎನ್‌ಪಿಎಸ್ ಬಹಳ ಚೆನ್ನಾಗಿದೆ ಎಂದು ಸರ್ಕಾರ ಸಮರ್ಥನೆ ಮಾಡುವುದಾದರೆ, ಅದರಿಂದ ನಮಗೆ ಅನ್ಯಾಯ ಮಾಡಬೇಡಿ, ನಮಗೂ ಅನ್ವಯವಾಗುವಂತೆ ಮಾಡಿ ಎಂದು ವ್ಯಂಗ್ಯದ ಮಾತುಗಳನ್ನು ಆಡಿದೆ ಅಷ್ಟೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಇದನ್ನೇ ಏನಾದರೂ advantage ತೆಗೆದುಕೊಂಡು ಅದರ ,ಁಜಟಣಜಡಿ ನಲ್ಲಿ ನಮಗೆ ಎನ್‌ಪಿಎಸ್ ಮಾಡಿದರೆ, ಪಾಪ ನಿಜವಾಗಿಯೂ ಆರ್ಥಿಕ ಭದ್ರತೆಗಾಗಿ ಯಾರು ಕಾಯುತ್ತಿದ್ದಾರೋ ಆ ಜನರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ನಾವು ಶಾಸಕರು ಶೇಕಡ ಒಂದು ಪರ್ಸೆಂಟ್ ಇರಬಹುದು. ಹಾಗಾಗಿ ಇದನ್ನು ಮಾಡಬಾರದು. ಎನ್‌ಪಿಎಸ್ ಬಗ್ಗೆ ಏನು ಆಶಾದಾಯಕ ಪರಿಸ್ಥಿತಿಯನ್ನು ಮೂಡಿಸಿದ್ದರೋ ಅದು ಪ್ರಾಕ್ಟಿಕಲ್ ಆಗಿ ಇಲ್ಲ. ಆದ್ದರಿಂದ ಎನ್‌ಪಿಎಸ್ ಬೇಡ ಎಂದು ಹೇಳುತ್ತಿದ್ದಾರೆ. ಓಪಿಎಸ್‌ಗಿಂತ ಇದು ಉತ್ತಮವಾಗಿದೆ ಎಂದು ಎನ್‌ಪಿಎಸ್ ತಂದರು. ಈ ಸ್ಕೀಮ್ ಸರಿಯಾಗಿಲ್ಲ ಎನ್ನುವುದು ಈಗ ಮನವರಿಕೆಯಾಗಿರುವುದರಿಂದ ನಮಗೆ ಎನ್‌ಪಿಎಸ್ ಬೇಡ ಓಪಿಎಸ್ ಕೊಡಿ ಎಂದು ನ್ಯಾಯಯುತವಾಗಿ ಕೇಳುತ್ತಿದ್ದಾರೆ. ಇದು ಆಗಬೇಕು. ನಿವೃತ್ತಿಯಾದ ಮನುಷ್ಯನಿಗೆ ಆರ್ಥಿಕ ಭದ್ರತೆ ಬೇಕಾಗಿದೆ. ಆ ಭದ್ರತೆಯನ್ನು ಕೊಡದೇ ಇದ್ದರೇ ಅವನು ಜೀವನ ಮಾಡುವುದು ಕಷ್ಟವಾಗುತ್ತದೆ. ಈಗಿನ ಮುಖ್ಯಮಂತ್ರಿಗಳು ಮತ್ತು ಹಿಂದಿನ ಮುಖ್ಯಮಂತ್ರಿಗಳು, ಹೋರಾಟಗಾರರು ಧರಣಿ ಮಾಡಿದ ಸಂದರ್ಭದಲ್ಲಿ, ನಮ್ಮ ಸರ್ಕಾರ ಬಂದರೆ ನಾವು ಓಪಿಎಸ್‌ನ್ನೇ ಜಾರಿಗೆ ತರುತ್ತೇವೆ ಎಂದು ಹೇಳಿದ್ದರು. ಎನ್‌ಪಿಎಸ್ ತೆಗೆಯುತ್ತೇವೆ ಎಂದು ಮಾತು ಕೊಟ್ಟಿದ್ದರು.

ನಾವು ಈ ಸದನದ ಒಳಗೆ ಏನು ಮಾತನಾಡುತ್ತೇವೆಯೋ ಇದು ಮೊಸಳೆ ಕಣ್ಣೀರು ಆಗಬಾರದು. ಹಾಗಾಗಿ ಈ ಕೆಲಸ ಆಗಲೇ ಬೇಕಾಗಿದೆ. ನಾನು ನೋಡಿದ ಹಾಗೆ ಕೆಲವು ಇಲಾಖೆಗಳವರಿಗೆ ಎನ್‌ಪಿಎಸ್ ಬೇಕಾಗಿಲ್ಲದೇ ಇರಬಹುದು ಅಥವಾ ಓಪಿಎಸ್ ಕೂಡ ಬೇಕಾಗಿಲ್ಲದೇ ಇರಬಹುದು. ಆದರೆ, ಶಿಕ್ಷಕರಿಗಂತೂ ನೂರಕ್ಕೆ ನೂರು ಓಪಿಎಸ್ ಬೇಕಾಗಿದೆ. ಮಾನ್ಯ ಸಭಾನಾಯಕರೇ ಇದು ಬಹಳ ಗಂಭೀರವಾದ ವಿಷಯವಾಗಿದೆ. ನಿನ್ನೆ ಮುಖ್ಯಮಂತ್ರಿಗಳ ಪರವಾಗಿ ಏನು ಉತ್ತರ ಕೊಟ್ಟಿದ್ದೀರೋ ಅದು ಸಮಂಜಸವಾಗಿಲ್ಲ. ದಯವಿಟ್ಟು ಓಪಿಎಸ್ ತರುವಲ್ಲಿ ಸರ್ಕಾರ ಯೋಚನೆ ಮಾಡಲೇ ಬೇಕು ಎಂದು ಸಭಾಪತಿಯವರ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಮಾನ್ಯ ಶ್ರೀಕಂಠೇಗೌಡರು, ಮಾನ್ಯ ಆಯನೂರು ಮಂಜುನಾಥ್‌ರವರು ಮತ್ತು ಮಾನ್ಯ ಭೋಜೇಗೌಡರು, ಎನ್‌ಪಿಎಸ್‌ನಿಂದ ನೌಕರರಿಗೆ ಎಷ್ಟೊಂದು ಹಾನಿಯಾಗುತ್ತದೆ ಎನ್ನುವುದರ ಬಗ್ಗೆ ಸಾಕಷ್ಟು ವಿವರಣೆ ಕೊಟ್ಟಿದ್ದಾರೆ. ಈ ಕಾರಣಕ್ಕಾಗಿಯೇ ರಾಜ್ಯದಲ್ಲಿ 36 ಇಲಾಖೆಗಳಿವೆ, ಆ ಎಲ್ಲಾ ಇಲಾಖೆ ನೌಕರರು ಒಗ್ಗಟ್ಟಾಗಿ ಬೆಳಗಾವಿಯಲ್ಲಿ ನಡೆದಂತಹ ಅಧೀವೇಶನದ ಸಂದರ್ಭದಲ್ಲಿ ಹೋರಾಟ ಮಾಡಿದರು. ಬಹುಶಃ ನನ್ನ ಜೀವನದಲ್ಲಿ ನಾನು ಅಷ್ಟು ದೊಡ್ಡ ಹೋರಾಟ ನೋಡಿಯೇ ಇಲ್ಲ. ಆ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿಗಳು ಒಂದು ಕಮಿಟಿ ಮಾಡಿದರು ಮತ್ತು ಅದರ ವರದಿ ತರಿಸಿ ಈ ಕುರಿತು ಒಂದು ನಿರ್ಣಯ ಮಾಡುತ್ತೇವೆ ಎಂದು ಹೇಳಿದರು. ಆ ವರದಿ ಬಂತೋ ಇಲ್ಲವೋ ಗೊತ್ತಾಗುತ್ತಿಲ್ಲ. ನಾನೇ ಇದರ ಬಗ್ಗೆ ಸದನದಲ್ಲಿ ಎರಡು-ಮೂರು ಬಾರಿ ಪ್ರಶ್ನೆ ಕೇಳಿದ್ದೇನೆ. ಆಗ ಸರ್ಕಾರ, ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದರು. ಇದರ ಜೊತೆ, ಆ ಕಮಿಟಿಯ ಅವಧಿ ಮುಗಿದಿದೆ ಎಂದೂ ಸಹ ಉತ್ತರ ಕೊಟ್ಟಿದ್ದರು. ಆದ್ದರಿಂದ ಕಮಿಟಿಗೆ ಒಂದು ಡೆಡ್‌ಲೈನ್ ಹಾಕಿ ವರದಿಯನ್ನು ಪಡೆದುಕೊಳ್ಳುವಂತಹ ಕೆಲಸ ಮಾಡಬೇಕು. ಏಕೆ ಹೀಗೆ ಮಾಡುತ್ತಿಲ್ಲ? ಆದಷ್ಟು ಬೇಗ ವರದಿ ತರಿಸಿಕೊಳ್ಳಬೇಕು ಮತ್ತು ಎನ್‌ಪಿಎಸ್ ತೊಲಗಬೇಕು; ಓಪಿಎಸ್ ಜಾರಿಗೆ ತರಬೇಕೆಂದು ಇಡೀ ರಾಜ್ಯ ನೌಕರರ ಸಂಘ ಹೋರಾಟ ಮಾಡುತ್ತಿದೆ. ಇವರ ಬೇಡಿಕೆಯನ್ನು ಈಡೇರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಶ್ರೀಕಂಠೇಗೌಡರು ಮಾತನಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ರಾಜ್ಯ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ ಎನ್‌ಪಿಎಸ್‌ನ್ನು ಜಾರಿಗೆ ತಂದರು. ಅದಾದ ನಂತರ, ಏನು autonomous Universities ಇವೆಯೋ, ಅವುಗಳಿಗೆ ಮೊದಲು ಕೊಟ್ಟಿರಲಿಲ್ಲ, ಆದರೆ ನಂತರ ಅವರಿಗೂ ಕೊಟ್ಟರು, Municipality, Taluk Bodies ಗೆ ಮೊದಲು ಕೊಟ್ಟಿರಲಿಲ್ಲ,

ಆದರೆ ನಂತರ ಅವರಿಗೂ ಕೊಟ್ಟರು. ಇಡೀ ರಾಜ್ಯದಲ್ಲಿ ಎನ್‌ಪಿಎಸ್ ಇನ್ನೂ ಯಾರಿಗೆ ಕೊಟ್ಟಿಲ್ಲ ಎಂದರೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 2006ರ ನಂತರ ಯಾರು ನೇಮಕವಾಗಿದ್ದರೋ ಅಂಥವರಿಗೆ ಕೊಟ್ಟಿಲ್ಲ. ಇದರ ಬಗ್ಗೆ ಮಾನ್ಯ ಭೋಜೇಗೌಡರು ಬಹಳ ಚೆನ್ನಾಗಿ ಹೇಳಿದರು. ಒಬ್ಬ ಮನುಷ್ಯ ಸುಮಾರು 30–40 ವರ್ಷ ಪ್ರಾಮಾಣಿಕವಾಗಿ ದುಡಿದು, ಅವನಿಗೆ 60 ವರ್ಷ ಆದಮೇಲೆ ಪಿಂಚಣಿ ಇಲ್ಲದೇ ಹೋದರೆ ಅವರು ಹೇಗೆ ಬದುಕಲು ಸಾಧ್ಯವಾಗುತ್ತದೆ?

**(ಮುಂದು)**

**(305) 05–03–2021 1.00 ಡಿಎಸ್–ಜಿಆರ್**

**ಶ್ರೀ ಎಸ್.ವ್ಹಿ.ಸಂಕನೂರ(ಮುಂದು):–**

ಇದು ಬಹಳ ನೋವಿನ ಸಂಗತಿ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು. ರಾಜ್ಯದಲ್ಲಿ 2006ರ ನಂತರ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ ಶಿಕ್ಷಕರಿಗೆ ಯಾವ ರೀತಿ ಸರ್ಕಾರಿ ನೌಕರರಿಗೆ ಕೊಟ್ಟಿದ್ದಾರೆ, ಒಂದು ಕಡೆ ಸರ್ಕಾರಿ ನೌಕರ ಸಂಘದವರು ಎನ್.ಪಿ.ಎಸ್., ಬದಲು ಓ.ಪಿ.ಎಸ್., ಸ್ಕೀಮ್ ಕೇಳುತ್ತಿದ್ದಾರೆ. ಅನುದಾನಿತ ಶಿಕ್ಷಣ ಸಂಸ್ಥೆಯವರಿಗೆ ಏನು ಪಿಂಚಣಿಯೇ ಇಲ್ಲ. ಎನ್.ಪಿ.ಎಸ್., ಇಲ್ಲ, ಓ.ಪಿ.ಎಸ್.,ಇಲ್ಲ. ಇದು ಬಹಳ ಗಂಭೀರವಾದಂತಹ ವಿಷಯ. ಅದಕ್ಕೆ 2006ರ ನಂತರ ಶಿಕ್ಷಕರು ನೇಮಕಾತಿಯಾಗಿದ್ದಾರೆ ಅವರಿಗೆ ಸರ್ಕಾರ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಡಾ॥ತಳವಾರ್ ಸಾಬಣ್ಣ(ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರು ಉತ್ತಮವಾದಂತಹ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನು ಸಹ ಅನುಭವಿಸಿ ಇಲ್ಲಿಗೆ ಬಂದಿದ್ದೇನೆ. ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ಮತ್ತು ಶಾಲೆಗಳಲ್ಲಿ ಇದು ಬಹಳ ಗಂಭೀರವಾಗಿರುವಂತಹ ಪರಿಸ್ಥಿತಿ ಇರುವ ಕಾರಣಕ್ಕಾಗಿ ಇಡೀ ಶಿಕ್ಷಣ ಕ್ಷೇತ್ರಕ್ಕೆ ಇವತ್ತು ಎನ್.ಪಿ.ಎಸ್., ಎನ್ನುವುದು ಒಂದು ಮಾರಕವಾಗಿದೆ. ಇದಕ್ಕೆ ಕಾರಣವೇನೆಂದರೆ, ಅನುದಾನಿತ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯಲ್ಲಿ ಕೆಲಸ ಮಾಡಿದಂಥವರು ನಂತರ ತಮ್ಮ career ಅನ್ನು ಬೆಳೆಸಿಕೊಳ್ಳಬೇಕೆಂದು ಸರ್ಕಾರಿ ಜೂನಿಯರ್ ಕಾಲೇಜಿಗೆ ಬರುತ್ತಾರೆ. ಆ ಅನುದಾನಿತ ಶಾಲೆಯಲ್ಲಿ ಮಾಡಿರುವಂತಹ ಸೇವೆಗೆ ಯಾವುದೇ ರೀತಿಯ ಪಿಂಚಣಿ ವ್ಯವಸ್ಥೆ ಇಲ್ಲಿ ಆಗುತ್ತಿಲ್ಲ. ಅನುದಾನಿತ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ ನಂತರ ತಮ್ಮ career ಬೆಳೆಸಿಕೊಳ್ಳಬೇಕೆಂದು ವಿಶ್ವವಿದ್ಯಾಲಯಕ್ಕೆ ಬರುತ್ತಾರೆ.

ವಿಶ್ವವಿದ್ಯಾಲಯಕ್ಕೆ ಬಂದಾಗ ಕಾಲೇಜಿನಲ್ಲಿ 15-20 ವರ್ಷ ಸೇವೆ ಸಲ್ಲಿಸಿದವರನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಇದರಿಂದ ಹಲವಾರು ಸಂದರ್ಭಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ನೋಡಿದಾಗ ಹಲವಾರು ಶಿಕ್ಷಕರು ನೇಮಕಾತಿಯಾದ ನಂತರ ಮತ್ತೆ ವಾಪಸ್ ಕಾಲೇಜುಗಳಿಗೆ ಹೋಗಿದ್ದಾರೆ. ಇದು ಎನ್.ಪಿ.ಎಸ್., ನಿಂದ ಆಗಿರುವಂತಹ ದುಷ್ಪರಿಣಾಮ. ಇದಕ್ಕೆ ಕಾರಣವೇನೆಂದರೆ, ಇಲ್ಲಿ ಉನ್ನತ ಹುದ್ದೆಗೆ ಹೋಗಿ ತಮ್ಮ career ಬೆಳೆಸಿಕೊಳ್ಳಬೇಕೆನ್ನುವ ಯುವ ಶಿಕ್ಷಕರ ಆಸೆಗೂ ಇದು ಒಂದು ಕುಂಠಿತವಾಗಿದೆ. ಶಿಕ್ಷಣ ಸಂಸ್ಥೆಗಳಿಗೆ ಪ್ರತಿಭಾವಂತ ಶಿಕ್ಷಕರು ಬರುವಂತಹ ಕೊರತೆಯಾಗುತ್ತಿದೆ. ನನ್ನ ವೈಯಕ್ತಿಕವಾಗಿರುವಂತಹ ಉದಾಹರಣೆ ಏನೆಂದರೆ, ನಾನು ವಿಧಾನ ಪರಿಷತ್ತಿಗೆ ನೇಮಕಗೊಳ್ಳುವಾಗ ನನ್ನ ಸಂಬಳ 2,21,000 ಇತ್ತು. ಆದರೆ ನಾನು ರಾಜೀನಾಮೆ ಕೊಟ್ಟ ಮೇಲೆ ನನಗೆ 50,000 ರೂಪಾಯಿ ಪಿಂಚಣಿ ಬರುತ್ತಿದೆ. ಅದರಲ್ಲಿ minus tax ತೆಗೆದುಕೊಂಡರೆ 37,000 ರೂಪಾಯಿ ಜಮಾ ಆಗುತ್ತಿದೆ. ನನ್ನ ಪರಿಸ್ಥಿತಿ ಈ ರೀತಿ ಇರುವಾಗ ಇನ್ನು ಬೇರೆಯವರ ಪರಿಸ್ಥಿತಿ ಯಾವ ರೀತಿ ಇರಬಹುದೆಂದು ನಾವು ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಹಾಗಾಗಿ ಈ ಎನ್.ಪಿ.ಎಸ್., ಅನ್ನು ತೆಗೆಯಬೇಕು.

ಎನ್.ಪಿ.ಎಸ್., ಅನ್ನು ತೆಗೆದು ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಶಿಕ್ಷಕ ಬಳಗದವರು ಉತ್ತಮ ಶಿಕ್ಷಣ ಕೊಡುವುದಕ್ಕಾಗಿ ಮತ್ತು ಶಿಕ್ಷಣ ಕ್ಷೇತ್ರದ ಗುಣಮಟ್ಟವನ್ನು ಹೆಚ್ಚಿಸಬೇಕಾದರೆ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರುವುದು ಅವಶ್ಯಕವಾಗಿದೆ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಡಾ॥ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಯಲ್ಲಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ತಂದಿರುವ ಪ್ರಸ್ತಾವ ಅತ್ಯಂತ ಪ್ರಸ್ತುತವಾಗಿದೆ. ಮಾನವೀಯ ನೆಲಗಟ್ಟಿನಲ್ಲಿ ಸರ್ಕಾರ ಬಹಳ ಗಂಭೀರವಾಗಿ ಯೋಚನೆ ಮಾಡುವ ಪರಿಸ್ಥಿತಿ ನಮ್ಮ ಕಣ್ಮುಂದೆ ಇದೆ. ಎನ್.ಪಿ.ಎಸ್., ಎಂದರೆ 'No Pension Scheme' ಎಂದು. ಯಾರಿಗೂ ಪಿಂಚಣಿಯನ್ನೇ ಕೊಡಬಾರದೆಂದು ಮಾಡಿರುವಂತಹ ಯೋಜನೆಯಾಗಿದೆ. ನಾನು ಈ ವಿಚಾರವನ್ನು ಹೆಚ್ಚು ಎಳೆಯುವುದಕ್ಕೆ ಹೋಗುವುದಿಲ್ಲ. ಸುಮಾರು ಆರು ತಿಂಗಳ ಹಿಂದೆ ಬೆಳಗ್ಗೆ 7 ಗಂಟೆಗೆ ನಮ್ಮ ಮನೆಗೆ ಶಿಕ್ಷಕರೊಬ್ಬರು ಬಂದಿದ್ದರು. "ಸರ್, ನಾನು ಮೂರು ತಿಂಗಳ ಹಿಂದೆ ನಿವೃತ್ತಿಯಾದೆ, ನಿವೃತ್ತಿಯಾಗಬೇಕಾದರೆ ನನಗೆ 84,000 ರೂಪಾಯಿ ಸಂಬಳ ಬರುತ್ತಿತ್ತು. ನಿವೃತ್ತಿಯಾಗಿ ಮನೆಗೆ ಬಂದೆ, ಪಿಂಚಣಿ ಒಂದು ರೂಪಾಯಿ ಇಲ್ಲದೆ ಮೂರು ತಿಂಗಳಿನಿಂದ ದಯವಿಟ್ಟು ಎಲ್ಲಾದರೂ ಅಪಾರ್ಟ್‌ಮೆಂಟ್‌ನಲ್ಲಿ ಮ್ಯಾನೇಜರ್ ಕೆಲಸ ಇದ್ದರೆ ಅಥವಾ ಸಣ್ಣ ಕೆಲಸ ಇದ್ದರೆ ಕೊಡಿಸಿ, ತಿಂಗಳಿಗೆ 10,000 ರೂಪಾಯಿ ಕೊಟ್ಟರೆ ಸಾಕು" ಎಂದು ಹೇಳಿದರು. ಅವರ ಮಾತನ್ನು ಕೇಳಿ ನನಗೆ ಬಹಳ

ನೋವಾಯಿತು. 35 ವರ್ಷಗಳ ಕಾಲ ಕೆಲಸ ಮಾಡಿ, ಕೊನೆಗಾಲದಲ್ಲಿ ಅವರಿಗೆ ಪಿಂಚಣಿ ಇಲ್ಲದೆ ಬರೀ ಕೈಯಲ್ಲಿ ಮನೆಗೆ ಕಳುಹಿಸುವ ಸಂಪ್ರದಾಯ ಎಲ್ಲೂ ಇರಬಾರದು. ಅದನ್ನು ನಾವೆಲ್ಲರೂ ಬಹಳ ಗಂಭೀರವಾಗಿ ತೆಗೆದುಕೊಂಡು ಅದಕ್ಕೆ ಪರಿಹಾರ ಮಾಡಬೇಕು. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಸರ್ಕಾರ ಇದ್ದಾಗ ಬೆಳಗಾವಿಯಲ್ಲಿ ಬಹಳ ದೊಡ್ಡ ಆಂದೋಲನ ನಡೆಯಿತು. ಮಾನ್ಯ ಸಂಕನೂರ ರವರು ಹೇಳಿದ ಹಾಗೆ ಆಂದೋಲನ ನಡೆದಾಗ ಒಂದು ಸಮಿತಿ ರಚನೆ ಮಾಡಿದರು. ಕಣ್ಣೊರೆಸುವುದಕ್ಕಾಗಿ ಸಮಿತಿಯನ್ನು ರಚನೆ ಮಾಡಲಾಗಿದೆಯೇ? ಸಮಿತಿಯಲ್ಲಿ ಯಾರ್ಯಾರೂ ಸದಸ್ಯರಿದ್ದರು, ಎಷ್ಟು ದಿನ ಸಮಯ ಕೊಟ್ಟಿದ್ದರು, ಸಮಿತಿ ಒಂದು ದಿನವಾದರೂ ಸಭೆ ಮಾಡಿತ್ತೇ, ಸಭೆ ಮಾಡಲಿಲ್ಲವೆಂದರೆ ಸಮಿತಿ ಏಕೆ ಮಾಡಬೇಕಾಗಿತ್ತು? ಇದನ್ನು ಮಾನ್ಯ ಸಭಾನಾಯಕರು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ವಿಶೇಷವಾಗಿ ಸರ್ಕಾರದ ವ್ಯವಸ್ಥೆಯಲ್ಲಿ ಕೆಲಸ ಮಾಡುವಂತಹ ಶಿಕ್ಷಕರು, ನೌಕರರಿಗಿಂತ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರ ಸ್ಥಿತಿ ಶೋಚನೀಯವಾಗಿದೆ. ಸುಮಾರು ಮ್ಯಾನೇಜ್‌ಮೆಂಟ್‌ಗಳು, ನಾನು ಅವುಗಳ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಶಾಲೆಗಳಲ್ಲಿ ಸಂಬಳ ತೆಗೆದುಕೊಳ್ಳಬೇಕಾದರೆ ಆ ಶಿಕ್ಷಕರ ಹತ್ತಿರ ಇಂತಿಷ್ಟು ಹಣ ಕೊಟ್ಟರೆ ಮಾತ್ರ ಸಂಬಳ ಬಿಡುಗಡೆ ಮಾಡಿಸುವುದು ಎಂದು ಎಷ್ಟೋ ಶಾಲೆಗಳಲ್ಲಿ ಸಂಬಳಕ್ಕೋಸ್ಕರ ಹಣ ಕೊಡುವ ವ್ಯವಸ್ಥೆ ಸುಮಾರು ಮ್ಯಾನೇಜ್‌ಮೆಂಟ್‌ಗಳು ಕಿತ್ತುಕೊಳ್ಳುತ್ತಿದೆ. ಇದು ಎಲ್ಲರಿಗೂ ಗೊತ್ತಿದೆ. ಅಂತಹ ಸಂದರ್ಭದಲ್ಲಿ ಹತ್ತು ಪರ್ಸೆಂಟ್ ಪಾಲು ಕೊಡುವುದಕ್ಕೆ ಸಾಧ್ಯವೇ? ಅವರು ಕೊಡುವುದಿಲ್ಲ. ಅವರು ಯಾವಾಗ ಕೊಡುವುದಿಲ್ಲವೋ ಸರ್ಕಾರವೂ ಅವರಿಗೆ ಹಣ ಹಾಕುವುದಿಲ್ಲ. ಹಾಗಾಗಿ 'No Pension Scheme' ಆಗಿ ಪರಿವರ್ತನೆಯಾಗಿಬಿಟ್ಟಿದೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಿದ್ದಾಗ ತೆಗೆದುಕೊಳ್ಳಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿ ಅಧಿವೇಶನದಲ್ಲಿ ಇದಕ್ಕೆ ಪರಿಹಾರ ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದರು. ಆದ್ದರಿಂದ ನಾನು ಸಭಾನಾಯಕರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತಿದ್ದೇನೆ, ಅವರು ಯಾವ್ಯಾವಾಗ ಮುಖ್ಯಮಂತ್ರಿಯಾಗಿದ್ದರೋ ಆಗ ಸರ್ಕಾರಿ ನೌಕರರ ಪರವಾಗಿ, ಶಿಕ್ಷಕರ ಪರವಾಗಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಇವತ್ತು ಈ ಎನ್.ಪಿ.ಎಸ್., ಅನ್ನು ತೊಲಗಿಸಿ ಆ ಓ.ಪಿ.ಎಸ್., ಅನ್ನು ಪ್ರತಿಷ್ಠಾಪನೆ ಮಾಡುವುದಕ್ಕೆ ಅವರಿಂದ ಮಾತ್ರ ಸಾಧ್ಯವಾಗುತ್ತದೆ. ದಯವಿಟ್ಟು ಆ ಕೆಲಸ ಬೇಗ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ. ಈ No Pension Scheme ತೆಗೆದು ಹಾಕಿ. ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರಬೇಕೆನ್ನುವ ಆಗ್ರಹವನ್ನು ತಮ್ಮ ಮುಖಾಂತರ ಮಾಡುತ್ತಿದ್ದೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾಗಿರುವಂತಹ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಬಹಳ ಉತ್ತಮವಾಗಿರುವಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಅದರ ಬಗ್ಗೆ ಸುದೀರ್ಘವಾಗಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು, ಮಾನ್ಯ ಆಯನೂರು ಮಂಜುನಾಥ್‌ರವರು, ಮಾನ್ಯ ಭೋಜೇಗೌಡರು, ಮಾನ್ಯ ಸಂಕನೂರ ರವರು ಮಾತನಾಡಿದ್ದಾರೆ. ಅದರ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ, ಹಳೆಯ ಪಿಂಚಣಿ ಯೋಜನೆಯ ವ್ಯವಸ್ಥೆಯನ್ನು ಪುನರ್ ಜಾರಿ ಮಾಡಬೇಕು. ಹೊಸ ಪಿಂಚಣಿ ಯೋಜನೆಯನ್ನು ರದ್ದು ಮಾಡಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುವುದಕ್ಕೆ ಏನೆಲ್ಲಾ ಕಾರ್ಯಗಳನ್ನು ಮಾಡಬೇಕೋ ಅದನ್ನು ಆದಷ್ಟು ಬೇಗ ಮಾಡಿ ಈ ಸರ್ಕಾರಿ ನೌಕರರು ಪಿಂಚಣಿಯನ್ನು ಪಡೆದುಕೊಂಡು ತಮ್ಮ ಸಮೃದ್ಧ ಬದುಕನ್ನು ನಡೆಸುವುದಕ್ಕೆ ಸಹಾಯಕಾರಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆಯೋಗ, ಸಮಿತಿಗಳನ್ನು ರಚಿಸಿ ವರದಿ ಬರದಿರುವಂಥದ್ದು, ಮತ್ತೆ ಯಾವುದೇ ವಿಷಯ ಪ್ರಸ್ತಾಪವಾಗದಿರುವಂಥದ್ದು ಬಹಳ ನೋವಿನ ಸಂಗತಿಯಾಗಿದೆ. ರಚಿಸಿರುವಂತಹ ಸಮಿತಿಯ ವರದಿಯನ್ನು ಶೀಘ್ರವಾಗಿ ತರಿಸಿಕೊಂಡು ಆದಷ್ಟು ಬೇಗ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಆಗ್ರಹಿಸುತ್ತಿದ್ದೇನೆ.

**ಶ್ರೀ ಶಶಿಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೊಸ ಪಿಂಚಣಿ ಯೋಜನೆಯನ್ನು ತಂದಾಗ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಬಹಳ ಚೆನ್ನಾಗಿ ಮಾತನಾಡಿದ್ದರು. ಅವರು ಬಹಳ rosy picture ಅನ್ನು ಎಲ್ಲರಿಗೂ ಕೊಟ್ಟಿದ್ದರು. ಷೇರು ಮಾರುಕಟ್ಟೆ ಏರುತ್ತಲೇ ಇರುತ್ತದೆ. ಷೇರು ಮಾರುಕಟ್ಟೆಗೂ ನಾವು ಹಣವನ್ನು ಹಾಕುತ್ತೇವೆ. ಹಣ ಹಾಕಿರುವುದು it will multiply. ಈ ತರಹದ ಪಿಕ್ಚರ್ ಕೊಟ್ಟಿದ್ದಕ್ಕಾಗಿ ಎಲ್ಲರೂ ಅದನ್ನು ಒಪ್ಪಿಕೊಂಡಿದ್ದರು. ಎಲ್ಲಾ ರಾಜ್ಯದವರು ಅದನ್ನು ಅನುಷ್ಠಾನಕ್ಕೆ ತಂದರು. ಕೇಂದ್ರ ಸರ್ಕಾರದವರು ಅವರವರ ನೌಕರರಿಗೆ ಕೊಡುವಂತಹ ವಿಚಾರ ಬೇರೆ. ಆದರೆ ಇದನ್ನು ಅನುಷ್ಠಾನಕ್ಕೆ ತರುತ್ತಿರುವುದು ಪ್ರತಿಯೊಂದು ರಾಜ್ಯ ಸರ್ಕಾರದ ಹೊಣೆ. ನಮ್ಮಲ್ಲೇ ಮಾಡುತ್ತಿರುವುದರಿಂದ ಕೇಂದ್ರ ಸರ್ಕಾರ ಏನು ಕೊಡುತ್ತದೆಯೋ ಅದಕ್ಕೆ ಸಂಬಂಧವಿಲ್ಲ. ಇದಕ್ಕೆ ರಾಜ್ಯದವರೇ ಕೊಡುವಂತಹ ಹಣ. ಆಗ ಏನು ಆ ಪಿಕ್ಚರ್‌ನ್ನು ಕೊಟ್ಟಿದ್ದರು, ಇವತ್ತು ಎಲ್ಲರಿಗೂ ಮನವರಿಕೆಯಾಗಿದೆ, ಗೊತ್ತಾಗಿದೆ, this is not a good scheme and it cannot go for a long. ತಮಗೆಲ್ಲರಿಗೂ ಗೊತ್ತಿದೆ ಎಂದು ನನಗನಿಸುತ್ತಿದೆ. ಈಗ 6-7 ರಾಜ್ಯಗಳಲ್ಲಿ ಸಮಿತಿಯನ್ನು ರಚನೆ ಮಾಡಿದ್ದಾರೆ. ನನಗೆ ಚೆನ್ನಾಗಿ ನೆನಪಿದೆ, ಚುನಾವಣೆ ಬಂದಾಗ ತಮಿಳುನಾಡು, ತೆಲಂಗಾಣ ರಾಜ್ಯದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾನು ಬಂದ ತಕ್ಷಣವೇ ಎನ್.ಪಿ.ಎಸ್.,

ರದ್ದು ಮಾಡಿ, ಓ.ಪಿ.ಎಸ್., ತರುತ್ತೇವೆಂದು ಹೇಳಿದ್ದಾರೆ. ಆದರೆ ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ, ಅವರು ಕೂಡ ಸಮಿತಿಯನ್ನು ರಚನೆ ಮಾಡಿದ್ದೇವೆ, ಸಮಿತಿಯ ವರದಿ ಬಂದ ಮೇಲೆ ಅನುಷ್ಠಾನ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನನಗನಿಸುತ್ತದೆ, better late than never. 100% this will be a nationwide issue. ಇವತ್ತಲ್ಲ ನಾಳೆ ಎಲ್ಲಾ ರಾಜ್ಯ ಸರ್ಕಾರದವರು ಇದಕ್ಕೆ ಮಣಿಯಬೇಕಾಗುತ್ತದೆ. ಏಕೆಂದರೆ, ಪ್ರತಿಯೊಂದು ಸರ್ಕಾರ ಅವರವರ ಸರ್ಕಾರಿ ನೌಕರರಿಗೆ ಒಳ್ಳೆಯ ಬೆನಿಫಿಟ್ ಅನ್ನು ಕೊಡುತ್ತಾ ಬಂದಿದ್ದಾರೆ. **(ಮುಂದು)**

306/5-3-2021/1-10/ಬಿಕೆಪಿ-ಜಿಆರ್

**ಶ್ರೀ ಶಶಿಲ್ ಜಿ. ನಮೋಶಿ(ಮುಂದು)**

ಅದೇ ಕಾರಣಕ್ಕಾಗಿ Government Employees enjoy the privilege. pension ಇರುತ್ತದೆ ಎಂದು ಎಲ್ಲರೂ ಏಕೆ Private ಕೆಲಸ ಬಿಟ್ಟು ಸರ್ಕಾರಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ ಎಂದರೆ, ನಾವು ನಿವೃತ್ತಿ ಹೊಂದಿದರೂ ಸಹಿತ ನಮ್ಮ ಬದುಕು ಬಂಗಾರವಾಗುತ್ತದೆ ಎನ್ನುವಂತಹ ಒಂದೇ ಒಂದು ಕಾರಣದಿಂದ ಅವರು ಇಲ್ಲಿಗೆ ಬಂದು ಕೆಲಸಕ್ಕೆ ಸೇರುತ್ತಾರೆ. ಆದರೆ, ಈ ರೀತಿ N.P.S., ಬಂದರೆ ಬಹುಶಃ people will lose their confidence. ಅದಕ್ಕೆ ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ. Better late than never. ಇವತ್ತು ಹೆಚ್ಚು ಕಡಿಮೆ 35-40% ಜನರು ಈಗಾಗಲೇ ಸರ್ಕಾರಿ ನೌಕರರು N.P.S., ಸ್ಕೀಂನಲ್ಲಿದ್ದಾರೆ ಅಂದರೆ O.P.S., ನಲ್ಲಿ ಎಷ್ಟು ಜನರಿದ್ದಾರೆ, N.P.S., ನಲ್ಲಿ ಎಷ್ಟು ಜನ ಸರ್ಕಾರಿ ನೌಕರರಿದ್ದಾರೆ ಎಂದು ಲೆಕ್ಕ ತೆಗೆದುಕೊಂಡರೆ ಇನ್ನೂ O.P.S., ನವರು ಜಾಸ್ತಿಯಿದ್ದಾರೆ. ಮಾನ್ಯ ಶ್ರೀ ಕೆ.ಟಿ. ಶ್ರೀಕಂಠೇಗೌಡರರು ಬಹುಶಃ ಈ ಮಾತಿಗೆ ಒಪ್ಪಿಕೊಳ್ಳುತ್ತಾರೆ. ಇವತ್ತು around 65% of the employees are under O.P.S., ಆ ಕಾರಣಕ್ಕಾಗಿ ಮತ್ತೆ ಎಲ್ಲಿಯೂ ನಾನು ಯಾರ ಮೇಲೆಯೂ ಟೀಕೆ ಮಾಡುತ್ತಿಲ್ಲ. ಸರ್ಕಾರಿ ನೌಕರರು ಈ ವಿಚಾರದಲ್ಲಿ unite ಆಗಿಲ್ಲ. There are differences. O.P.S., ನಲ್ಲಿದ್ದಂತಹವರು N.P.S., ಗೆ

**(ಗೊಂದಲ)**

ಅದನ್ನು ಯಾರ ಮೇಲೆಯೂ ಹೇಳುತ್ತಿಲ್ಲ, ದಯವಿಟ್ಟು ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ, ದಯವಿಟ್ಟು ಅನ್ಯಥಾ ಭಾವಿಸಬಾರದು. ಈ ಒಂದು agitation ಗೆ ಇನ್ನೂ ಸಂಪೂರ್ಣ ಪ್ರಮಾಣದಲ್ಲಿ support ಮಾಡುತ್ತಿಲ್ಲ. ಸರ್ಕಾರಿ ನೌಕರರೆಲ್ಲರೂ ಒಂದಾದರೆ ಅಂದರೆ in one word ಸರ್ಕಾರಿ ನೌಕರರೆಲ್ಲರೂ ಒಂದಾಗಿ ಹೇಳಿದರೆ ...

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಶ್ರೀಯುತ ಶಶಿಲ್ ಜಿ. ನಮೋಶಿಜಿಯವರೆ, ಈ ವಿಚಾರದಲ್ಲಿ ಸರ್ಕಾರಿ ನೌಕರರೆಲ್ಲರದ್ದೂ ಒಂದೇ ಅಭಿಪ್ರಾಯವಾಗಿದೆ. There is no difference of opinion. ಏಕೆಂದರೆ, ಅವರೆಲ್ಲರೂ ಬಹಳ ದೊಡ್ಡ ಸಂಖ್ಯೆಯಲ್ಲಿ ಬೆಳಗಾಂಗೆ ಬಂದರು. ಆಗ ಇಡಿ ಬೆಳಗಾಂನಲ್ಲಿಯೇ ಕಾಲಿಡುವುದಕ್ಕೆ ಜಾಗವಿರಲಿಲ್ಲ, ಅಷ್ಟು ದೊಡ್ಡ ಸಂಖ್ಯೆಯಲ್ಲಿ ಅವರು ಬಂದರು. ಆಮೇಲೆ ವಿಭಾಗ ಮಟ್ಟದಲ್ಲಿ ಅವರು ಸಮಾವೇಶಗಳನ್ನು ಮಾಡಿದರು. ನಮ್ಮನ್ನೆಲ್ಲಾ ಅವರು ಕರೆದರು. O.P.S., ಬೇರೆಯಿದೆ, N.P.S., ಬೇರೆಯಿದೆ.

**ಶ್ರೀ ಶಶಿಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ. ಶ್ರೀಕಂಠೇಗೌಡರವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ agitation ಬಗ್ಗೆ ಹೇಳುವುದಾದರೆ, ಆಗ ನಾನು ಶಾಸಕನಾಗಿಲ್ಲದೇ ಇದ್ದರೂ ಕೂಡ ನಾನು ಕೂಡ ಬೆಳಗಾವಿಗೆ ಬಂದಿದ್ದೆ. ನನಗೂ ಸಹ ಆಹ್ವಾನಿಸಿದ್ದರು. ಆದರೆ, ಯಾವ ಪ್ರಮಾಣದಲ್ಲಿ O.P.S., ನಲ್ಲಿದ್ದಂತಹ ಸರ್ಕಾರಿ ನೌಕರರು ಇದಕ್ಕೆ support ಮಾಡಬಹುದೆಂದು ತಮಗೂ ಗೊತ್ತಿದೆ. ಎಲ್ಲೋ ಒಂದು ಕಡೆಯಲ್ಲಿ ಸ್ವಲ್ಪ ಕೊರತೆ ಕಾಣಿಸುತ್ತಿದೆ. ನಾನು ಅದರ ಬಗ್ಗೆ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತಲ್ಲವೆಂದರೆ ನಾಳೆಯಾದರೂ ಸಹಿತ ಸರ್ಕಾರಿ ನೌಕರರು ಖಂಡಿತವಾಗಿಯೂ ಈ ವಿಚಾರದಲ್ಲಿ 100% ಒಂದಾಗುತ್ತಾರೆ. ಒಂದಾಗಿ ನಮ್ಮನ್ನು ಸರ್ಕಾರ ನಡೆಸುವುದಕ್ಕೆ ಬಿಡುವುದಿಲ್ಲವೆನ್ನುವಂತಹ ಒಂದು ಪ್ರಶ್ನೆ ಕೂಡ ಉದ್ಭವವಾಗುತ್ತದೆ. ಆ ಕಾರಣಕ್ಕಾಗಿ ಈಗ ನಮ್ಮ ಮಾನ್ಯ ನಾರಾಯಣಸ್ವಾಮಿಯವರು ಚೆನ್ನಾಗಿ ಹೇಳಿದ್ದಾರೆ. ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಯಾವತ್ತೂ ಕೂಡ Government Servants or ಶಿಕ್ಷಕರ ಪರವಾಗಿದ್ದಾರೆ, ಯಾವತ್ತಿಗೂ ಕೂಡ ಪರವಾಗಿದ್ದಾರೆ. ಯಾವುದೇ ವಿಚಾರದಲ್ಲಿಯೂ ಕಡಿಮೆ ಮಾಡಿಲ್ಲ. ಅದಕ್ಕೆ ಬೇರೆ ರಾಜ್ಯಗಳು ಕೂಡ ಖಂಡಿತವಾಗಿ ಇವತ್ತಲ್ಲವೇ ನಾಳೆ O.P.S., ಅನ್ನು implement ಮಾಡಿಯೇ ಮಾಡುತ್ತಾರೆ. ಅದಕ್ಕಿಂತ ಮೊದಲಾಗಿ let our State be the first. ಮಾನ್ಯ

ಬಿ.ಎಸ್ ಯಡಿಯೂರಪ್ಪನವರ ಸರ್ಕಾರ ಇದನ್ನು ಮಾಡಲೇಬೇಕು. ನಾವು ಇದನ್ನು ಜಾರಿಗೆ ತಂದ ಮೊದಲನೇ ರಾಜ್ಯವೆಂದು ತೋರಿಸಿಕೊಡಬೇಕು ಎನ್ನುವಂತಹ ಮಾತನ್ನು ಹೇಳಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ವಿನಂತಿ ಮಾಡುತ್ತೇನೆ. ಕರ್ನಾಟಕ ರಾಜ್ಯವೇ ಮೊದಲನೇ ರಾಜ್ಯವಾಗಲಿ, ನಾವು N.P.S., ಅನ್ನು ತೆಗೆದುಹಾಕಿ O.P.S., ಅನ್ನು ಕೊಡುವಂತಹದ್ದಾಗಬೇಕು. ಇನ್ನೂ ಒಂದು ಮಾತು ಹೇಳುವುದಾದರೆ Aided Institutions ನಲ್ಲಿ ನಿಜವಾಗಿಯೂ ಬಹಳ ಕಷ್ಟವಾದಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. All of a sudden, ಪಾಪ ಯಾರು ದಿನಾಂಕ 01–04–2006ರ ನಂತರ ಕೆಲಸಕ್ಕೆ ಸೇರಿದ್ದಾರೆಯೋ ಅವರಿಗೆ N.P.S., and O.P.S., ಎರಡೂ ಇಲ್ಲ. ಕನಿಷ್ಠ ಪಕ್ಷ ಅವರಿಗೆ ಹೌದಪ್ಪ, ಅಲ್ಲಿಯವರೆಗೆ let the Government contribute 10% Employee's Basic Pay of the amount. ಯಾವುದೇ ಒಂದೂ private managements ಸಹ ಇಲ್ಲಿಯವರೆಗೆ they have not contributed 10%. ಕೊಟ್ಟಿದ್ದಾರೆಯೇ? ಯಾರೊಬ್ಬರೂ ಕೊಟ್ಟಿಲ್ಲ. ನಮ್ಮ ಸಂಸ್ಥೆ ಕೂಡ ಬಹಳ ದೊಡ್ಡ ಸಂಸ್ಥೆಯಾಗಿದೆ. ಆದರೂ ನಮ್ಮ ಸಂಸ್ಥೆಯೂ ಕೊಟ್ಟಿಲ್ಲ. ಯಾವುದೇ ಸಂಸ್ಥೆಯೂ ಕೊಟ್ಟಿಲ್ಲ. ಎನ್ನುವುದನ್ನು ಹೇಳುತ್ತಿದ್ದೇನೆ. ಕನಿಷ್ಠ ಪಕ್ಷ ಆ N.P.S., ನಲ್ಲಿದ್ದಂತಹವರು ಅಂದರೆ Aided Institutions ಗೆ ದಿನಾಂಕ 01–04–2006 ರ ನಂತರ ಏನು ಕೆಲಸಕ್ಕೆ ಸೇರಿಕೊಂಡಿದ್ದಾರೆ, let the Government bear 10% of that amount ಎಂದು ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಇವತ್ತಲ್ಲವೇ ನಾಳೆ ನಾವು ಕೊಡಬೇಕಾಗುತ್ತದೆ. ನಾವು ಮೊದಲು ಇದನ್ನು commitment ಮಾಡಿಕೊಳ್ಳಬೇಕು. ಇದರಲ್ಲಿ ಖಂಡಿತವಾಗಿಯೂ ಭಾರವಾಗುತ್ತದೆ. ಎಂದು ಗೊತ್ತು. ಇದು ಬಂದರೆ there is a burden on the State Government. But, our Government can bear this. ದಯವಿಟ್ಟು ಅದನ್ನು ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಮಾನ್ಯ ಶ್ರೀಕಂಠೇಗೌಡರು ಇವತ್ತು ಜ್ವಲಂತ ಸಮಸ್ಯೆಯ ಬಗ್ಗೆ ಒಂದು ಒಳ್ಳೆಯ ಪ್ರಶ್ನೆಯನ್ನು ಸದನದ ಮುಂದೆ ಇಟ್ಟಿದ್ದಾರೆ. ಈಗಾಗಲೇ ನಮ್ಮ ಹಲವಾರು ಹಿರಿಯ ಶಾಸಕರುಗಳು ಈ ಬಗ್ಗೆ ತಮ್ಮ ಸ್ಪಷ್ಟವಾದಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನೂ ಕೂಡ ಅವರೆಲ್ಲರ ಅಭಿಪ್ರಾಯಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಈಗ ನಮ್ಮ ಮಾನ್ಯ ಆಯನೂರು

ಮಂಜುನಾಥ್‌ರವರು ಹೇಳಿದ ಹಾಗೆ ಈ ಒಂದು ಕಾಯ್ದೆ ಜಾರಿಗೆಯಾಗುವುದಕ್ಕೆ ಕೇವಲ 15 ದಿವಸಗಳಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಇವೆರಡರಲ್ಲಿಯೂ ಕೂಡ ಅನುಮೋದನೆ ಪಡೆದು ಮಾನ್ಯ ರಾಷ್ಟ್ರಪತಿಗಳ ಅಂಕಿತವನ್ನೂ ಕೂಡ ತೆಗೆದುಕೊಳ್ಳಲಾಯಿತು. ಏಕೆಂದರೆ, ಆ ಸಮಯದಲ್ಲಿ ನಮ್ಮ ಎಲ್ಲಾ ಸರ್ಕಾರಿ ನೌಕರರಿಗೆ ಒಂದು ಭ್ರಮೆಯಿತ್ತು. ಇದು ಒಂದು ಮಾಮೂಲಿ O.P.S., ಗಿಂತಲೂ ಒಂದು ಒಳ್ಳೆಯ ಯೋಜನೆ ಎಂಬ ಕಾರಣಕ್ಕಾಗಿ ಒಂದು ಭ್ರಮೆ ಇತ್ತು. ಆದರೆ, ಈಗ ನಮ್ಮ ಎಲ್ಲಾ ಹಿರಿಯ ಸದಸ್ಯರುಗಳು ಹೇಳಿದ ಹಾಗೆ ಈಗಾಗಲೇ ಹಲವಾರು ಬಾರಿ ಪ್ರತಿಭಟನೆಗಳು ನಡೆದಿದೆ. ಬೆಳಗಾವಿ ಅಧಿವೇಶನದಲ್ಲಿ ಒಂದು ದೊಡ್ಡ ಆಂದೋಲನವಾಗಿದೆ. ಇಷ್ಟೆಲ್ಲಾ ಆದರೂ ಕೂಡ ಲಕ್ಷಾಂತರ ಸಂಖ್ಯೆಯಲ್ಲಿರತಕ್ಕಂತಹ ನಮ್ಮ ಸರ್ಕಾರಿ ನೌಕರರ ಬೇಡಿಕೆ ಏನಿದೆ, ಅದರಲ್ಲಿಯೂ ವಿಶೇಷವಾಗಿ ನಾವು ಪ್ರತಿನಿಧಿಸುವ ಪದವೀಧರರ ಕ್ಷೇತ್ರ ಇರಬಹುದು, ಅಥವಾ ಶಿಕ್ಷಕ ಕ್ಷೇತ್ರವಿರಬಹುದು ನಮ್ಮ ಶಿಕ್ಷಕ/ಉಪನ್ಯಾಸಕ ವರ್ಗ ಏನಿದೆ, ನಾವು ಹೋದ ಕಡೆಗಳಲ್ಲೆಲ್ಲಾ ಅವರುಗಳು ಕೇಳುವುದು ಇಷ್ಟೆ, ಬೇಡಿಕೆ ಏನಿದೆ ಎಂದರೆ, ಅವರು ನಮ್ಮನ್ನು ಅಂದರೆ ನಾವೇ decision making authority ಎನ್ನುವ ಮಟ್ಟಕ್ಕೆ ತಿಳಿದುಕೊಂಡು ನಿಮ್ಮನ್ನು ಗೆಲ್ಲಿಸುತ್ತೇವೆ, ದಯವಿಟ್ಟು ಇದು ಒಂದನ್ನು ನಮಗೆ ಜಾರಿ ಮಾಡಿಕೊಡಿ, ನಮಗೆ ಹಳೆಯ pension ಏನಿತ್ತು ಆ ಸ್ಕೀಂ ಬರಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ, ಅವರುಗಳು ಕಣ್ಣೀರು ಹಾಕಿಕೊಂಡಿರುವುದನ್ನು ನಾನೂ ಕೂಡ ನೋಡಿದ್ದೇನೆ. ಏಕೆಂದರೆ, ಈಗಾಗಲೇ ನಮ್ಮ ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುತ್ತಾ ಹೇಳಿದರು. ಅನುದಾನಿತ ಖಾಸಗಿ ಶಾಲಾ–ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವಂತಹ ಏನು ಶಿಕ್ಷಕ/ಉಪನ್ಯಾಸಕ ವರ್ಗವಿದೆ, ಅವರುಗಳು ನಿವೃತ್ತಿ ಹೊಂದಿದ ದಿನದಂದು ಮನೆಗೆ ಹೋಗಬೇಕಾದರೆ ಎಷ್ಟೊಂದು ಆತಂಕದಿಂದ ಹೋಗುತ್ತಾರೆ, ಅವರುಗಳು ಮನೆಗೆ ಹೋಗುವಾಗ ಅವರುಗಳಿಗೆ ಮುಂದಿನ ತಿಂಗಳಿನಲ್ಲಿ ಒಂದು ರೂಪಾಯಿ ಕೂಡ ಆದಾಯವಿಲ್ಲದೇ ಹೋದಾಗ ಅವರ ಪರಿಸ್ಥಿತಿ ಏನಾಗಬಹುದು? ಇದನ್ನು ಇಷ್ಟೊಂದು ದೊಡ್ಡ ಮಟ್ಟದ ಚರ್ಚೆ ಮಾಡುವಂತಹ ಅವಶ್ಯಕತೆಯಿಲ್ಲ. ಸರ್ಕಾರ ಒಂದೇ ಬಾರಿಗೆ ಅದನ್ನು ಅಂದರೆ ಹಿಂದೆ ಏನು ಪಿಂಚಣಿ ಪದ್ಧತಿಯಿತ್ತು, ಹೊಸದಾಗಿ ಏನನ್ನೂ ಕೇಳುತ್ತಿಲ್ಲ, ಹೆಚ್ಚಿಗೆ ಏನನ್ನೂ ಕೊಡಿ ಎಂದು ಕೇಳುತ್ತಿಲ್ಲ, ಇದಕ್ಕೆ ಹಿಂದೆ ಏನಿತ್ತು ಅದನ್ನು ಕೊಡಿ ಎಂಬುದು ಅವರೆಲ್ಲರ ಬೇಡಿಕೆಯಾಗಿದೆ. ಇದಕ್ಕೆ ನನ್ನ ಪ್ರಕಾರ ಯಾವುದೇ ಸಮಿತಿ ವರದಿ ಮತ್ತೊಂದು ಬೇಕಾಗುವುದಿಲ್ಲ. ಒಂದು ವೇಳೆ ಸರ್ಕಾರಕ್ಕೆ ಇನ್ನೂ ಇದರ ಬಗ್ಗೆ ವ ಮನವರಿಕೆಯಾಗಿಲ್ಲವೆಂದರೆ ಎಲ್ಲರಿಗೂ ಕೂಡ ಇದರ ಬಗ್ಗೆ ಮನವಿ ಮಾಡಿ ಯಾರು O.P.S., ನಲ್ಲಿರುತ್ತೀರಿ, ಯಾರು N.P.S., ನಲ್ಲಿರುತ್ತೀರಿ ಎಂದು ಅವರುಗಳ ಕಡೆಯಿಂದ ಒಂದು ಅರ್ಜಿ ತೆಗೆದುಕೊಂಡರೆ ಸಾಕಾಗುತ್ತದೆ, ಆಗ ಸರ್ಕಾರಕ್ಕೆ ಮನವರಿಕೆಯಾಗುತ್ತದೆ. ಇದಕ್ಕೆ ಯಾವುದೇ ವರದಿಯ

ಅವಶ್ಯಕತೆಯಿರುವುದಿಲ್ಲ. ಈ ದಿಕ್ಕಿನಲ್ಲಿ ನಮ್ಮ ಸಭಾನಾಯಕರು ಗಮನಹರಿಸಬೇಕು. ಇದಕ್ಕೆ ನಮಗೆ ಉತ್ತರ ಬೇಕಾಗಿಲ್ಲ. ನಾವು ಉತ್ತರ ಕೇಳುವುದಕ್ಕೆ ಇಲ್ಲಿ ಬಂದಿಲ್ಲ. ಅದಕ್ಕೆ ಬದಲಾಗಿ ತಕ್ಷಣವೇ ಸರ್ಕಾರ ಈ ಕುರಿತು ಕಾರ್ಯೋನ್ಮುಖವಾಗಬೇಕು, ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಬಗ್ಗೆ ಭರವಸೆ ಕೊಟ್ಟಿದ್ದಾರೆ. ಹಲವಾರು ಸಂದರ್ಭಗಳಲ್ಲಿ ನೌಕರರುಗಳು ಭೇಟಿ ಮಾಡಿದಾಗ ಈ ಕುರಿತು ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ಸರ್ಕಾರ ಬಂದರೆ ನಾವು ಒಂದೇ ತಿಂಗಳಿನಲ್ಲಿ ಅಥವಾ ಆದಷ್ಟುಬೇಗ ಇದನ್ನು ಜಾರಿಗೊಳಿಸುತ್ತೇವೆಂಬ ಮಾತನ್ನು ಹೇಳಿದ್ದಾರೆ. ಅದನ್ನು ನಾವು ಮತ್ತೊಮ್ಮೆ ಸರ್ಕಾರದ ಗಮನಕ್ಕೆ ತರುತ್ತಾ, ಸಭಾನಾಯಕರ ಗಮನಕ್ಕೆ ಅದನ್ನು ತರುತ್ತೇನೆ. ಆ ಭಾಗದ ಸುಮಾರು ಜನರು ಇದರ ಬಗ್ಗೆ ಯಾರೂ ಕೂಡ ಮಾತನಾಡಿಲ್ಲ. ಈ ಭಾಗದ ಇಬ್ಬರು-ಮೂವರು ಬಿಟ್ಟರೆ ಬೇರೆ ಯಾರೂ ಮಾತನಾಡಿಲ್ಲ. ಅವರದ್ದೂ ಕೂಡ ಇದಕ್ಕೆ ಸಹಮತವಿದೆ ಎಂದು ನಾನು ತಿಳಿದುಕೊಳ್ಳುತ್ತಾ, ಮತ್ತೊಮ್ಮೆ ನಾವೆಲ್ಲರೂ ಒಟ್ಟಾಗಿ ನಮ್ಮ ಸರ್ಕಾರಿ ನೌಕರರ ಮತ್ತು ಅನುದಾನಿತ ಶಾಲಾ-ಕಾಲೇಜುಗಳ ನೌಕರರುಗಳ ವರ್ಗ ಏನಿದೆ, ಅವರುಗಳು ಅತಿಯಾಗಿ ಶೋಷಣೆಗೆ ಒಳಗಾಗಿರುವುದನ್ನು ನಾನು ನೋಡಿದ್ದೇನೆ. ಅನುದಾನಿತ ಶಾಲೆಗಳಲ್ಲಿ ಅತಿ ಹೆಚ್ಚು ಶೋಷಣೆಗೆ ಒಳಗಾಗಿರುವವರು ಎಂದರೆ ಅವರಾಗಿದ್ದಾರೆ. ನಾನು ಕಣ್ಣಾರೆ ನೋಡಿದ ಹಾಗೆ ನನ್ನ ಜೊತೆಯಲ್ಲಿ ಓದುತ್ತಿದ್ದವರು ಎಂದರೆ, ಅಲ್ಲಿ ಸರ್ಕಾರಿ ಅನುದಾನಿತ ಶಾಲೆಗಳಿಗೆ ಹೋಗಿ ಸೇರಿಕೊಂಡು 10-15 ವರ್ಷಗಳ ಕಾಲ ಪುಕಸಟ್ಟೆ ಕೆಲಸ ಮಾಡಿ ಅವರುಗಳ ಹೆಂಡತಿ-ಮಕ್ಕಳನ್ನು ಸಾಕುವುದಕ್ಕೆ ಅವರುಗಳ ಅಪ್ಪ-ಅಮ್ಮ ಅಕ್ಕಿ ಮತ್ತೊಂದು ರೇಷನ್ ಅನ್ನು ಕಳುಹಿಸಿರುವುದನ್ನು ನೋಡಿದ್ದೇನೆ. ಕೊನೆಗೆ ಇನ್ನು 5 ವರ್ಷಗಳಿಗೆ ಅದು approval ಆಗುತ್ತದೆ. ಅದಾದನಂತರ ಅವರುಗಳು ಏನೂ pension ಇಲ್ಲದೇ ಮನೆಗಳಿಗೆ ಹೋಗುವುದು ಎಂದರೆ ಇದು ಒಂದು ನಿಜವಾಗಲೂ ಕೂಡ ನಾಗರೀಕ ಸಮಾಜ ಶಿಕ್ಷಕರನ್ನು ನಡೆಸಿಕೊಳ್ಳುವುದು ಅಥವಾ ಸರ್ಕಾರಿ ನೌಕರರುಗಳನ್ನು ನಡೆಸಿಕೊಳ್ಳುತ್ತಿರುವ ರೀತಿಯಲ್ಲವೆಂಬ ಅಭಿಪ್ರಾಯ ಪಡುತ್ತಾ ಆದಷ್ಟುಬೇಗ OPS ಜಾರಿಯಾಗಬೇಕು. ಇದಕ್ಕೋಸ್ಕರ ಇನ್ನೊಂದು ವರದಿಯನ್ನು ಕಾಯಬಾರದು ಎಂದು ಹೇಳಿ ನಾವೆಲ್ಲರೂ ಸಾಧ್ಯವಾದರೆ ಪಕ್ಷಾತೀತವಾಗಿ ಒಟ್ಟಾಗಿ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಹೋಗಿ ಚರ್ಚಿಸುವಂತಹ ಒಂದು ಅವಕಾಶವಾಗಲಿ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಈ ವಿಷಯವನ್ನು ತಿಳಿಸುವುದಕ್ಕೆ ಬಯಸುತ್ತೇನೆ. ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಅ. ದೇವೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಹಿರಿಯ ಸದಸ್ಯರುಗಳೆಲ್ಲರೂ ಈಗಾಗಲೇ pension ಬಗ್ಗೆ ಮಾತನಾಡಿದ್ದಾರೆ. ತಮಗೂ ಕೂಡ ಗೊತ್ತಿದೆ. ನಾನೂ ಕೂಡ ಸರ್ಕಾರಿ ನೌಕರನಾಗಿ ಕೆಲಸ ಮಾಡಿದ್ದೇನೆ. ನಮ್ಮ ಜೊತೆಯಲ್ಲಿ ಇದ್ದಂತಹವರಿಗೆ ಕೆಲವರಿಗೆ

ಮನೆಗಳೇ ಇಲ್ಲ. ಔಷಧಿ ಕೊಂಡುಕೊಳ್ಳುವುದಕ್ಕೂ ಸಹಿತ ಹಣವಿಲ್ಲದ ಪರಿಸ್ಥಿತಿಗೆ ಬಂದಿದ್ದಾರೆ. ಈ ಎರಡೂ ವಿಚಾರಗಳನ್ನು ನಮ್ಮ ಹಿರಿಯ ಮಾನ್ಯ ಸದಸ್ಯರುಗಳು ಹೇಳುವುದನ್ನು ಮರೆತಿದ್ದಾರೆ ಎಂದು ಕಾಣಿಸುತ್ತದೆ. ಈಗ ಎಷ್ಟೋ ಜನರಿಗೆ ಬಿ.ಡಿ.ಎ., ಅಥವಾ ಹೌಸಿಂಗ್ ಬೋರ್ಡ್‌ನಲ್ಲಿ ಮನೆಗಳನ್ನು ಕೊಡುತ್ತಾರೆ ಎಂದರೆ, ಈ ಹಗರಣಗಳಲ್ಲಿ ಯಾರಿಗೂ ನಿವೇಶನಗಳೂ ಸಿಕ್ಕಿಲ್ಲ, ಮನೆಗಳಿಲ್ಲದೇ ನಿವೃತ್ತಿ ಹೊಂದಿದ್ದಾರೆ, ಅವರುಗಳ ಮನೆಗಳಲ್ಲಿ ಮಕ್ಕಳಿಗೆ ಶಿಕ್ಷಣ ಮತ್ತು ಮದುವೆ ಮಾಡುವುದಕ್ಕೋಸ್ಕರ ಹಣವನ್ನೂ ಕಳೆದುಕೊಂಡಿದ್ದಾರೆ. ದಯವಿಟ್ಟು ನಮ್ಮ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

**(ಮುಂದು)**

**(307) 05.03.2021 01.20 ಎಸ್‌ವಿ–ಎಂಡಿ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಶ್ರೀಕಂಠೇಗೌಡ ಮತ್ತು ಮಾನ್ಯ ಪುಟ್ಟಣ್ಣ ಅವರು ನಿಯಮ 72ರ ಅಡಿಯಲ್ಲಿ ತಂದಿರುವ ಸೂಚನೆಗೆ ಮಾನ್ಯ ಆಯನೂರು ಮಂಜುನಾಥ್, ಮಾನ್ಯ ಭೋಜೇಗೌಡ, ಮಾನ್ಯ ಸಂಕನೂರ, ಮಾನ್ಯ ಸಾಬಣ್ಣ ತಳವಾರ್, ಮಾನ್ಯ ನಾರಾಯಣಸ್ವಾಮಿಯವರು, ಮಾನ್ಯ ಹಣಮಂತ ನಿರಾಣಿ, ಮಾನ್ಯ ಶಶಿಲ್ ಜಿ.ನಮೋಶಿ, ಮಾನ್ಯ ಚಿದಾನಂದ ಗೌಡ ಮತ್ತು ಮಾನ್ಯ ಅ.ದೇವೇಗೌಡ ಇವರೆಲ್ಲರೂ ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸಿ ಹೊಸ ಪಿಂಚಣಿ ಬೇಡ, ಹಳೆಯ ಪಿಂಚಣಿಯನ್ನು ಜಾರಿಗೊಳಿಸಬೇಕು ಎನ್ನುವಂತಹ ಒತ್ತಾಯವನ್ನು ಸರ್ಕಾರಕ್ಕೆ ಮಾಡಿದ್ದಾರೆ. ಇದು ನಿನ್ನೆಯೂ ಕೂಡ ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆಗೆ ಬಂದಿದ್ದು, ಪುನಃ ಇಂದಿನ ಕಾರ್ಯಕಲಾಪ ಪಟ್ಟಿಯಲ್ಲಿ ಬಂದಿದೆ. ಹೊಸ ಪಿಂಚಣಿಯನ್ನು ರದ್ದುಗೊಳಿಸಿ, ಹಳೆಯ ಪಿಂಚಣಿಯನ್ನು ಜಾರಿಗೊಳಿಸಬೇಕು ಎಂದು ಸಾವಿರಾರು ಜನ ಸರ್ಕಾರಿ ನೌಕರರು ಭಾಗವಹಿಸಿ ಚಳುವಳಿ ಮಾಡಿದಾಗ ಎಲ್ಲಾ ಜನಪ್ರತಿನಿಧಿಗಳು ಭಾಗವಹಿಸಿ, ಸದನದ ಒಳಗೆ ಮತ್ತು ಹೊರಗೆ ಹೋರಾಟ ಮಾಡಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿ ಮಾಡುತ್ತೇವೆಂದು ಹೇಳಿದ್ದರು. ಇದೇ ಮಾತನ್ನು ಅಂದಿನ ಮುಖ್ಯಮಂತ್ರಿಗಳಾಗಿದ್ದವರೂ ಹೇಳಿದ್ದರು ಹಾಗೂ ಆಗ ವಿರೋಧ ಪಕ್ಷದ ನಾಯಕರಾಗಿದ್ದವರೂ ಹೇಳಿದ್ದರು. ಮಾನ್ಯ ಯಡಿಯೂರಪ್ಪನವರು, ಮಾನ್ಯ ಕುಮಾರಸ್ವಾಮಿಯವರು ಭರವಸೆ ನೀಡಿದ್ದೆಲ್ಲವನ್ನೂ ನಾವು ಗಮನಿಸಿದ್ದೇವೆ. ನಾನೂ ಕೂಡ ಒಂದು ಸಭೆಗೆ ಹೋಗಿದ್ದೆನು. ಅಲ್ಲಿ ಹತ್ತಾರು ಸಾವಿರ ಜನರು ಸೇರಿ ಬಹಳ ಆಕ್ರೋಶಭರಿತರಾಗಿ ಮಾತನಾಡಿದ್ದನ್ನು ನಾನು ಕಂಡಿದ್ದೆನು. 'ರಕ್ತವನ್ನಾದರೂ ಕೊಡುತ್ತೇವೆ, ಪಿಂಚಣಿಯನ್ನು ಬಿಡುವುದಿಲ್ಲ' ಎನ್ನುವ ಅವರ ಆಕ್ರೋಶವನ್ನು ನಾನು ಗಮನಿಸಿದ್ದೆನು. ಇದು ವಾಸ್ತವಿಕವಾದ ನೈಜವಾಗಿರುವ ವಿಚಾರ.

ಅವರ ಬೇಡಿಕೆಯಲ್ಲಿ ಕೂಡ ಅರ್ಥವಿದೆ. ಮಾನ್ಯ ಶ್ರೀಕಂಠೇಗೌಡರಿಂದ ಆರಂಭವಾಗಿ ಎಲ್ಲರ ಮಾತುಗಳೂ ಸರ್ಕಾರಿ ನೌಕರರ ಧ್ವನಿಯಾಗಿ ಬಂದಿದೆ ಎನ್ನುವುದು ತಮಗೆ ತಿಳಿದಿರುವ ವಿಚಾರ. ಮಾನ್ಯ ಆಯನೂರು ಮಂಜುನಾಥ್ ಅವರು ತಮ್ಮದೇ ಶೈಲಿಯಲ್ಲಿ ಮನವರಿಕೆ ಮಾಡಿದ್ದಾರೆ. ಹಳೆಯ ಪಿಂಚಣಿ ಯೋಜನೆಯ ಆರ್ಥಿಕ ಹೊರೆಯನ್ನು ನಿಭಾಯಿಸುವ ಬಗ್ಗೆ ತಮಗೆ ತಿಳಿದಿದೆ.

ರಿಸರ್ವ್ ಬ್ಯಾಂಕ್‌ನವರು ಒಂದು ಸಮಿತಿಯನ್ನು ರಚನೆ ಮಾಡಿದ ನಂತರ 2004ರಿಂದ ಕೇಂದ್ರ ಸರ್ಕಾರ ನೂತನ ಪಿಂಚಣಿ ಯೋಜನೆಯನ್ನು ಮಾಡಿರುವುದನ್ನು ತಾವೆಲ್ಲರೂ ಗಮನಿಸಿದ್ದೀರಿ. ದಿನಾಂಕ 31.03.2006ರ ನಂತರ ಸರ್ಕಾರಿ ಸೇವೆಗೆ ಸೇರುವವರನ್ನು ಹೊಸ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಕರ್ನಾಟಕ ಸರ್ಕಾರ ಆದೇಶಿಸಿದೆ. ಇದರ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಪ್ಪಿರುವುದು, ಅದರ ಬಗ್ಗೆ ನಡೆದಿರುವ ಚರ್ಚೆ; ಆಗ ನಮ್ಮ ಸರ್ಕಾರಿ ನೌಕರರ ಭಾವನೆಗಳು, ಅನಂತರ ಆಗಿರುವ ನಿರಾಶೆ ಇವುಗಳ ಬಗ್ಗೆ ಎಲ್ಲಾ ಸದಸ್ಯರು ಹೇಳಿದ್ದು, ಎಲ್ಲವೂ ಕೂಡ ಸರ್ಕಾರಕ್ಕೆ ಅರ್ಥವಾಗಿದೆ. ಯಾವ ಕಾರಣಕ್ಕಾಗಿ ಈ ಎನ್.ಪಿ.ಎಸ್. ಅನ್ನು ಜಾರಿ ಮಾಡಲಾಯಿತು ಎಂಬುದು ತಮಗೆಲ್ಲರಿಗೂ ತಿಳಿದಿದೆ. ಸರ್ಕಾರದಿಂದ ಹೊರಗಿದ್ದಾಗ ಅನೇಕರು ಆಗಲೇಬೇಕು ಎಂದು ಹೇಳಿದ್ದು, ಅವರದೇ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಮಸ್ಯೆಗಳನ್ನು ಕೂಡ ಗಮನಿಸಿದ್ದಾರೆ ಎಂದು ಹೇಳಲಿಕ್ಕೆ ನಾನು ಇಚ್ಛಿಸುತ್ತೇನೆ.

ದಿನಾಂಕ 11.12.2018ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಏಳು ಜನ ಹಿರಿಯ ಅಧಿಕಾರಿಗಳ ಸಮಿತಿಯನ್ನು ರಚನೆ ಮಾಡಲಾಗುತ್ತದೆ. ಆ ಸಮಿತಿ ಏನು ಮಾಡುತ್ತಿದೆ ಎಂದು ಮಾನ್ಯ ಸಂಕನೂರ ಅವರು ಕೇಳಿದರು. ಅದು ಸತ್ಯವಿದೆ. ಅದೆಲ್ಲವನ್ನು ಮನಗಾಣುವಂತೆ ಮಾಡುತ್ತೇವೆ. ಸರ್ಕಾರದ ಟಿಪ್ಪಣಿಯೊಂದು ಏನು ಹೇಳುತ್ತದೆಯೆಂದರೆ 1970–71ರಲ್ಲಿ ಪಿಂಚಣಿಗಳ ಮೊತ್ತ ರೂ.5 ಕೋಟಿ ಇತ್ತು, 2004–05ನೇ ಸಾಲಿನಲ್ಲಿ ರೂ.2157 ಕೋಟಿ ಆಯಿತು. ಹೀಗೆ ಆರ್ಥಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ರಿಸರ್ವ್ ಬ್ಯಾಂಕ್‌ನವರ ಸೂಚನೆಯ ಮೇರೆಗೆ ಅಂದಿನ ಕೇಂದ್ರ ಸರ್ಕಾರ ತೆಗೆದುಕೊಂಡ ತೀರ್ಮಾನವನ್ನು ಬಹಳ ವಿವರವಾಗಿ ಇಲ್ಲಿ ಉಲ್ಲೇಖ ಮಾಡಲಾಗಿದೆ. ಈ ವಿಚಾರಗಳು ನಮಗೆಲ್ಲರಿಗೂ ತಿಳಿದಿರುವುದರಿಂದ ನಾನು ಮತ್ತಷ್ಟು ವಿಸ್ತರಿಸುವುದಕ್ಕೆ ಹೋಗುವುದಿಲ್ಲ.

ಮುಂದುವರೆದು, ನೂತನ ಪಿಂಚಣಿ ಯೋಜನೆಯಲ್ಲಿ ಕೆಲವು ಬದಲಾವಣೆಗಳಾಗಬೇಕು. ಎನ್.ಪಿ.ಎಸ್ ಮತ್ತು ಓ.ಪಿ.ಎಸ್. ಬಗ್ಗೆ ಚರ್ಚೆಯಾಗಬೇಕೆನ್ನುವುದೂ ಸೇರಿದಂತೆ ನೂತನ ಪಿಂಚಣಿ ಯೋಜನೆಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಲು ಸರ್ಕಾರ ಆದೇಶ ಹೊರಡಿಸಿ ದಿ:11.12.2018ರಂದು ಹಿರಿಯ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ವರದಿಯನ್ನು

ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ. ಮುಖ್ಯಮಂತ್ರಿಗಳ ಜತೆ ಚರ್ಚಿಸಿ, ಅತ್ಯಂತ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2006ರ ನಂತರ ಈ ರಾಜ್ಯದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಎಷ್ಟು ಜನ ನೇಮಕಾತಿಯಾಗಿದ್ದಾರೆ? ಅವರಿಗೆ ಪಿಂಚಣಿ ಯೋಜನೆಯನ್ನು ನೀಡಿದರೆ ಎಷ್ಟು ಆರ್ಥಿಕ ಹೊರೆ ಬೀಳುತ್ತದೆ ಎಂದು ಸರ್ಕಾರ ಲೆಕ್ಕ ಮಾಡಿದೆಯೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾನಾಯಕರೇ, ಎನ್.ಪಿ.ಎಸ್. ಕುರಿತು ರಚಿಸಿದ ಸಮಿತಿಯ ವರದಿಯನ್ನು ಸರ್ಕಾರ ತೆಗೆದುಕೊಳ್ಳಬೇಕು. ಚುನಾವಣೆ ಸಂದರ್ಭದಲ್ಲಿ ಓ.ಪಿ.ಎಸ್. ಜಾರಿ ಮಾಡುತ್ತೇವೆಂದು ಹೇಳಿದ್ದಿರಿ. ಅದರ ಜವಾಬ್ದಾರಿ ನಿಮ್ಮ ಹೆಗಲ ಮೇಲಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ನೌಕರರಿಗೆ ಅತ್ತ ಎನ್.ಪಿ.ಎಸ್. ಯೋಜನೆಯೂ ಇಲ್ಲ, ಇತ್ತ ಓ.ಪಿ.ಎಸ್.ಯೋಜನೆಯೂ ಇಲ್ಲ. This is the tragedy. ಎನ್.ಪಿ.ಎಸ್. ಯೋಜನೆಯಲ್ಲಿ ಅವರ ಪಾಲನ್ನು ನೀಡಲು ಶಿಕ್ಷಕರು ಸಿದ್ಧರಿದ್ದಾರೆ. ಸರ್ಕಾರ ತನ್ನ ಪಾಲನ್ನು ನೀಡುವುದರ ಬಗ್ಗೆ ತಾವು ದಯಮಾಡಿ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಶ್ರೀಕಂಠೇಗೌಡರೇ, ನೌಕರನೊಬ್ಬ ಹಾಕಿದಷ್ಟು ಮೊತ್ತವನ್ನು ಆ ಸಂಸ್ಥೆಯವರು ನೀಡಬೇಕೆನ್ನುವ ನಿಯಮವಿದೆ. ಅನುದಾನಿತ ಸಂಸ್ಥೆಯವರು ಯಾರೂ ಕೊಡುತ್ತಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾನಾಯಕರೇ, ನೀವು ಸ್ವಲ್ಪ ಗೊಂದಲಕ್ಕೆ ಒಳಗಾಗುತ್ತಿದ್ದೀರಿ. ಸರ್ಕಾರಿ ನೌಕರರಂತೆ ಪಿಂಚಣಿಯನ್ನು ಸರ್ಕಾರವೇ ಪೂರ್ಣವಾಗಿ ಅವರಿಗೆ ಕೊಡುತ್ತಿತ್ತು. It is the sole duty of the Government to pay the salary and pension and not the Management. ಏಕೆಂದರೆ ನೇಮಕಾತಿಯನ್ನು ನೀವು ಹೇಳಿದಂತೆಯೇ ಮಾಡಿಕೊಳ್ಳಲಾಗುತ್ತದೆ. ನೇಮಕಾತಿಗೆ ಅನುಮೋದನೆಯನ್ನು ಕೊಡುವುದು ಸರ್ಕಾರ. ಸಂಬಳ ಮತ್ತು ಪಿಂಚಣಿಯನ್ನು ಕೊಡುವುದು ಸರ್ಕಾರ. ಈಗ ಓ.ಪಿ.ಎಸ್.ನಲ್ಲಿ ಪಿಂಚಣಿಯನ್ನು ನೀಡಲಾಗುತ್ತಿದೆ. ಸರ್ಕಾರ ಕೊಡಬೇಕಾದ ವಂತಿಗೆಯನ್ನು ನೌಕರರು ಕೊಡಲು ಸಿದ್ಧರಿದ್ದಾರೆ. ಸರ್ಕಾರ ಕೊಡದಿರುವುದರಿಂದ ಆ ಯೋಜನೆ ಜಾರಿಗೆ ಬರಲೇ ಇಲ್ಲ. ಇದು ದೊಡ್ಡ ಸಮಸ್ಯೆಯಾಗಿದ್ದು, ದೊಡ್ಡ ಹೋರಾಟಗಳಾಗುತ್ತಿವೆ. ದಯಮಾಡಿ ಸರ್ಕಾರ ಇವರಿಗೂ ಕೂಡ ವಂತಿಗೆಯನ್ನು ಪಾವತಿ

ಮಾಡಬೇಕು. ಅವರ ಪಾಲಿನ ವಂತಿಗೆಯನ್ನು ನೀಡಲು ಅವರು ತಯಾರಿದ್ದಾರೆ. ಸರ್ಕಾರ ದಯಮಾಡಿ ಅದನ್ನು ಪ್ರಕಟ ಮಾಡಬೇಕು.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಖಾಸಗಿ ಶಾಲಾ ಕಾಲೇಜುಗಳಲ್ಲಿ 2006ರ ನಂತರ ನೇಮಕವಾದವರೆಲ್ಲರೂ ಅವರ contribution ಶೇ.10 ಅನ್ನು ಕೊಡಲು ತಯಾರಿದ್ದಾರೆ. ಉಳಿದ 10%, 14% ಅನ್ನು ಖಾಸಗಿ ಮ್ಯಾನೇಜ್‌ಮೆಂಟ್‌ನವರು ಕೊಡಲಿ ಎಂದು ಇವರು ಹೇಳುತ್ತಾರೆ. ಅವರಿಗೆ ಆಗುವುದಿಲ್ಲ. ಆದ್ದರಿಂದ ದಯಮಾಡಿ ಸರ್ಕಾರವೇ ಆ ಹೊರೆಯನ್ನು ಭರಿಸಬೇಕೆಂದು ವಿನಂತಿಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸಂಕನೂರ ಅವರೇ, ಇಲ್ಲಿ ಒಂದು ಸಮಿತಿಯನ್ನು ರಚನೆ ಮಾಡುವುದಾಗಿ ಸರ್ಕಾರ ಹೇಳಿದೆಯಲ್ಲವೆ?

**ಶ್ರೀ ಎಸ್.ವ್ಹಿ.ಸಂಕನೂರ:–** ಎನ್.ಪಿ.ಎಸ್ ಅನ್ನು ರದ್ದುಗೊಳಿಸಿ ಓ.ಪಿ.ಎಸ್ ಅನ್ನು ತರಲು ಸಮಿತಿಯನ್ನು ಮಾಡಿದ್ದಾರೆ. 2006ರ ನಂತರ ಖಾಸಗಿ ಶಾಲೆಗಳಿಗೆ ನೇಮಕಗೊಂಡಿರುವವರಿಗೆ ಯಾವುದಾದರೊಂದು ಪಿಂಚಣಿಯನ್ನು ನೀಡಬೇಕು. ಅವರಿಗೆ ಯಾವುದೂ ಪಿಂಚಣಿ ಇಲ್ಲ. ಅದಕ್ಕೆ ಯಾವುದೇ ಸಮಿತಿಯಿಲ್ಲ. ಆದ್ದರಿಂದ ದಯಮಾಡಿ ಒಂದು ಸಮಿತಿಯನ್ನು ಮಾಡಿ ಕ್ರಮ ಕೈಗೊಳ್ಳಬೇಕು.

**ಡಾ:ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನದೊಂದು ಮನವಿ. ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಯವರ ಬಳಿಗೆ ಶಿಕ್ಷಕರ/ಪದವೀಧರರ ಕ್ಷೇತ್ರದಿಂದ ಗೆದ್ದಿರುವ ಎಲ್ಲಾ ಪಕ್ಷಗಳ ಸದಸ್ಯರನ್ನು ಕರೆಸಿ ಸಭೆಯನ್ನು ಮಾಡಿಸಬೇಕು. ಸಮಿತಿಯ ಸದಸ್ಯರನ್ನು ಹಾಗೂ ಆರ್ಥಿಕ ಇಲಾಖೆಯವರನ್ನು ಆ ಸಭೆಗೆ ಕರೆಯಬೇಕು. ಇದರ ಬಗ್ಗೆ ಚರ್ಚೆ ಮಾಡಿ ಬೇಗ ನಿರ್ಧಾರ ಕೈಗೊಳ್ಳಬೇಕೆಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ರಚಿಸಿರುವ ಸಮಿತಿಯ ಮುಂದೆ ಅನುದಾನಿತ ಶಾಲೆಗಳ ಸಮಸ್ಯೆಗಳಾದ ಹೊಸ ಪಿಂಚಣಿ ಯೋಜನೆಗೆ ಅವಕಾಶವಿಲ್ಲದಿರುವುದನ್ನೂ ಸೇರಿಸಿ ಚರ್ಚೆ ಮಾಡುವ ಅವಕಾಶವನ್ನು ಮಾಡಿಕೊಡಲಾಗುತ್ತದೆ. ಮಾನ್ಯ ನಾರಾಯಣಸ್ವಾಮಿಯವರ ಸಲಹೆಯನ್ನು ಕೂಡ ಪರಿಗಣಿಸುತ್ತೇವೆ.

**ಉಪ ಸಭಾಪತಿಯವರು:-** ನಿಯಮ 330ರ ಅಡಿ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಪ್ರಸ್ತಾಪಿಸಿರುವ ವಿಷಯವನ್ನು ತೆಗೆದುಕೊಳ್ಳಲು ಅವರು ಈಗ ಸದನದಲ್ಲಿ ಇಲ್ಲ. ಹಾಗಾಗಿ ನಿಯಮ 68ರ ಮೇರೆಗೆ ಚರ್ಚೆಯನ್ನು ಕೈಗೆತ್ತಿಕೊಂಡರೆ ಅದಕ್ಕೆ ಸುಮಾರು ಸಮಯ ತೆಗೆದುಕೊಳ್ಳುತ್ತದೆ. ಮಾನ್ಯ ಶ್ರೀಕಂಠೇಗೌಡರೇ, ಅದನ್ನು ಮಂಗಳವಾರ ತೆಗೆದುಕೊಳ್ಳೋಣವೇ? ನೀವು ಇಂದೇ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದರೆ ತೆಗೆದುಕೊಳ್ಳೋಣ. ಈಗಾಗಲೇ ಸಮಯ ಮಧ್ಯಾಹ್ನ 01 ಗಂಟೆ 30 ನಿಮಿಷಗಳಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಬಹಳಷ್ಟು ಜನ ಸದಸ್ಯರು ವಿಸ್ತೃತವಾಗಿ ಚರ್ಚೆಯನ್ನು ಮಾಡಬೇಕಾಗುತ್ತದೆ. ಕನ್ನಡಾಂಬೆಯ ಎರಡು ಕಣ್ಣುಗಳು ಒಂದು ಕಾವೇರಿ, ಮತ್ತೊಂದು ಕೃಷ್ಣೆ.

**ಉಪ ಸಭಾಪತಿಯವರು:-** ತಮ್ಮೆಲ್ಲರ ಅಭಿಪ್ರಾಯದಂತೆ ಈಗ ತೆಗೆದುಕೊಳ್ಳೋಣವೋ ಅಥವಾ ಮಂಗಳವಾರಕ್ಕೆ ಮುಂದೂಡೋಣವೋ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ನಾಡಿನ ಜನರ ಎರಡು ಕಣ್ಣು ಕಾವೇರಿ ಮತ್ತು ಕೃಷ್ಣಾ. ಕಾವೇರಿ ಜಲಾನಯನ ಪ್ರದೇಶದ ಜನರಿಗೆ ತೊಂದರೆಯಾಗುವ ಕೆಲಸ ತಮಿಳುನಾಡು ಭಾಗದಲ್ಲಿ ನಡೆಯುತ್ತಿದೆ. ಇದನ್ನು ಸರ್ಕಾರ ಮತ್ತು ನಾವೆಲ್ಲರೂ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ನನಗೆ ಇಲ್ಲಿ ಇದನ್ನು ಕೇಳುವವರ್‍ಯಾರು ಮತ್ತು ಈ ವಿಚಾರಕ್ಕೆ ಉತ್ತರವನ್ನು ಕೊಡುವವರು ಯಾರು ಎಂಬುದು ತಿಳಿಯಬೇಕು. ಮಾನ್ಯ ಬಸವರಾಜ ಬೊಮ್ಮಾಯಿಯವರು ನಾನಿದ್ದೇನೆಂದು ಹೇಳಿದ್ದರು. ನಾವು ಚರ್ಚಿಸುವಾಗ ಅವರಿರಬೇಕು. ಏಕೆಂದರೆ ಇದು ಅತ್ಯಂತ ಗಂಭೀರವಾದ ವಿಚಾರ. ನಾವು ಇಲ್ಲಿ ಕೈಕಟ್ಟಿ ಕುಳಿತಿದ್ದೇವೆ. ಅವರು ನಾಗಾಲೋಟದಲ್ಲಿದ್ದಾರೆ. ಕಳೆದ 200 ವರ್ಷಗಳಿಂದಲೂ ನಮಗೆ ಅನ್ಯಾಯವಾಗುತ್ತಿದೆ, ಆದರೆ ಇಂದು ಬಹಳ ದೊಡ್ಡ ಪ್ರಮಾಣದಲ್ಲಿ ಅನ್ಯಾಯವಾಗುತ್ತಿದೆ.

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಚರ್ಚೆ ಪ್ರಾರಂಭವಾಗಲಿ. ನಾನು ಇದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಉಪ ಮುಖ್ಯಮಂತ್ರಿಗಳು ಚರ್ಚೆ ಪ್ರಾರಂಭವಾದರೆ ನಾನಿದ್ದೇನೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಹಳಷ್ಟು ಜನ ಸದಸ್ಯರು ಮತ್ತು ಸಚಿವರು ಇಲ್ಲ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡುವವರು ಬಹಳ ಜನ ಇರುತ್ತಾರೆ. ಗಡಿಬಿಡಿಯಲ್ಲಿ ಚರ್ಚೆ ಮಾಡುವುದು ಬೇಡ. ಮಂಗಳವಾರದಂದು ತೆಗೆದುಕೊಳ್ಳೋಣ. ಇದು ರಾಜ್ಯದ ಹಿತ ಕಾಯುವಂತಹ ಪ್ರಶ್ನೆಯಾಗಿದೆ. ಖಂಡಿತವಾಗಿಯೂ ಚರ್ಚೆ ಮಾಡೋಣ. ಮಂಗಳವಾರ ಪ್ರಶ್ನೋತ್ತರ ಕಲಾಪ ಮುಗಿದ ತಕ್ಷಣ ತೆಗೆದುಕೊಳ್ಳಿ. ನಾನು attend ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಆಗಬಹುದು ಮಾನ್ಯ ಸಭಾಪತಿಯವರೇ.

**(ಮುಂದು)**

**(308) 05-03-2021 (1-30) ಕೆಜಿ-ಎಂಡಿ**

## 08. ಖಾಸಗಿ ಸದಸ್ಯರ ನಿರ್ಣಯ

**ವಿಷಯ:- ದೇಸೀಯಾ ಪರಂಪರೆಯ ಆಯುರ್ವೇದ ವೈದ್ಯ ಪದ್ದತಿಗೆ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಕುರಿತು.**

- - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಲೋಕದ ಸ್ವರೂಪವು ಬದಲಾದಂತೆ ಹೊಸ ಹೊಸ ಸಾಂಕ್ರಮಿಕ ರೋಗಗಳು ಹುಟ್ಟುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಆರೋಗ್ಯ ಮತ್ತು ಸಂರಕ್ಷಣೆ ದೊಡ್ಡ ಸವಾಲಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಸದನದಲ್ಲಿ ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಇಲ್ಲ. ಆದರೂ ಸಹ, ತಾವು ಈಗಲೇ ಮಂಡಿಸುತ್ತೇನೆ ಎಂದರೆ, ಮಾನ್ಯ ಸಭಾನಾಯಕರು ಇದ್ದಾರೆ. ಇಲ್ಲವೆಂದರೆ, ಇದನ್ನು ಮುಂದೂಡಬಹುದು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆಯಿತು. ನನಗೆ ಮುಂದಿನ ಶುಕ್ರವಾರದಂದು ಸಮಯಾವಕಾಶ ಕೊಡಿ. ನನ್ನ ಈ ಖಾಸಗಿ ನಿರ್ಣಯ ಸುಮಾರು 10 ತಿಂಗಳಿನಿಂದ

ಇದೆ. ಮುಂದಿನ ಶುಕ್ರವಾರದಂದು ತಪ್ಪದೇ ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಹಾಜರು ಇರುವಂತೆ ಮಾಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ಇದನ್ನು ಮಂಡಿಸುವುದಕ್ಕೆ ಕೆಲವು procedure ಗಳು ಸಹ ಇವೆ. ಅದು ತಮ್ಮ ಗಮನದಲ್ಲಿದೆ ಅಂದುಕೊಂಡಿದ್ದೇನೆ. ಇಲ್ಲವೆಂದರೆ, ನಾನು ಓದಿ ಹೇಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇಲ್ಲ. ನಾನೇ ಓದಿ ಹೇಳುತ್ತೇನೆ. "ದೇಸೀಯಾ ಪರಂಪರೆಯ ಆಯುರ್ವೇದ ವೈದ್ಯ ಪದ್ದತಿಗೆ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಕುರಿತು" ಖಾಸಗಿ ನಿರ್ಣಯವನ್ನು ಮಂಡಿಸುತ್ತಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ವಿವರಣೆ ಕೊಡಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಇಲ್ಲ. ಅದಕ್ಕೆ ಮುಂದಿನ ಶುಕ್ರವಾರಕ್ಕೆ ಸಮಯ ಕೊಡಿ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ಅದನ್ನು brief ಮಾಡಿ ಹೇಳಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಈಗ ಬೇಕಾದಷ್ಟು ಹೊಸ ಹೊಸ ಕಾಯಿಲೆಗಳು ಬರುತ್ತಿರುತ್ತವೆ. ಆ ಕಾಯಿಲೆಗಳಿಗೆ ಸರಿಯಾಗಿ ಮದ್ದು ಸಿಗುತ್ತಿಲ್ಲ. ನಾವು ಕೇವಲ allopathy ಯನ್ನೇ ನಂಬಿಕೊಂಡಿದ್ದೇವೆ. ನಮ್ಮಲ್ಲಿ ಬೇಕಾದಷ್ಟು ಆಯುರ್ವೇದ, ಯುನಾನಿ ವೈದ್ಯ ಸೇರಿದಂತೆ ಬೇರೆ ಬೇರೆ ಪದ್ದತಿಗಳು ಇವೆ. ಅದರ ಬಗ್ಗೆ ಔಷಧಿಗಳು ಬಂದರು ಸಹ ಅದಕ್ಕೆ ತಕ್ಕ ಮನ್ನಣೆ ಸಿಗುತ್ತಿಲ್ಲವೆಂದು ನನ್ನ ಒಂದು ಪ್ರಸ್ತಾಪ ಇದೆ. ಮಾನ್ಯ ಸಚಿವರು ಬಂದ ಮೇಲೆ ಮುಂದಿನ ವಾರ ತೆಗೆದುಕೊಳ್ಳಿ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ದೇಸೀಯಾ ಪರಂಪರೆಯ ಆಯುರ್ವೇದ ವೈದ್ಯ ಪದ್ದತಿಗೆ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಕುರಿತು ನಿರ್ಣಯವನ್ನು ಮಂಡಿಸಲು ಅನುಮತಿಯನ್ನು ನೀಡುವ ಕುರಿತು".

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ. ಈಗ ಸದನವನ್ನು ದಿನಾಂಕ 08.03.2021 ರ ಮಧ್ಯಾಹ್ನ 12.05 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 1 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 8ನೇ ಮಾರ್ಚ್ ಮಾಹೇ 2021ರ ಸೋಮವಾರದಂದು ಮಧ್ಯಾಹ್ನ 12 ಗಂಟೆ 5 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**

<><><>